ಸಂಪುಟ: 06 ಸಂಚಿಕೆ: 231 ಪುಟಗಳು: 08 ಶುಕ್ರವಾರ 06 ನವೆಂಬರ್ 2026
www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035621249 ₹5

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಮುಂಜಾನೆ ಮಾತು

ತಪ್ಪುಗಳನ್ನು ಮಾಡುತ್ತಿರುತ್ತೇವೆ ಎಂದು ಗೊತ್ತಿದ್ದೂ ನಮ್ಮೊಡನೆ ಪ್ರೀತಿಯಿಂದ ಇರಬಯಸುವವರನ್ನು ಗೌರವಿಸೋಣ, ಯಾರೂ ಪರಿಪೂರ್ಣರಲ್ಲವಲ್ಲ!

ಪ್ರಿಯಾಂಕ್ 'ವಿಲೇಜ್ ಈಡಿಯಟ್' ಹೇಳಿಕೆಗೆ ಜೆಡಿಎಸ್ ಕೌಂಟರ್

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮತ್ತು ಕರ್ನಾಟಕದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ನಡುವಿನ ಸಮರ ಮತ್ತೊಂದು ಹಂತ ತಲುಪಿದೆ.

ಸ್ಟಿಂಗ್ ಕೇಸ್ ವಿಚಾರವಾಗಿ ಉಭಯ ನಾಯಕರು ಒಬ್ಬರಾದಮೇಲೊಬ್ಬರಂತೆ ಜಿದ್ದಿಗೆ ಬಿದ್ದು ಆರೋಪ-ಪ್ರತ್ಯಾರೋಪಗಳ ಮಳೆಯನ್ನೇ ಗೈಯುತ್ತಿದ್ದು, ಈ ನಡುವೆ ಪ್ರಿಯಾಂಕ್ ನೀಡಿದ್ದ ಒಂದು ಹೇಳಿಕೆಯನ್ನೇ ಜೆಡಿಎಸ್ ಬ್ರಹ್ಮಾಸ್ತ್ರವಾಗಿಸಿಕೊಂಡಿದೆ. ಹೆಚ್‌ಡಿಕೆ ವಿಲೇಜ್ ಈಡಿಯಟ್ ರೀತಿ ಆಡ್ತಾರೆ ಎಂಬ ಗೃಹ ಸಚಿವರ ಹೇಳಿಕೆಯ ವಿರುದ್ಧ ಜೆಡಿಎಸ್ ಅಭಿಯಾನವನ್ನೇ ಆರಂಭಿಸಿದ್ದು, 'ಗೃಹ ಸಚಿವರೇ



ನಾವು ಹಳ್ಳಿಯವರೇ ಏನಿವಾಗ ಎಂದು' ಪ್ರತಿಯೊಬ್ಬ ಜೆಡಿಎಸ್ ನಾಯಕರು ತಮ್ಮ ಸೋಶಿಯಲ್ ಮೀಡಿಯಾ ಖಾತೆಗಳಲ್ಲಿ ಪೋಸ್ಟ್ ಮಾಡಿಕೊಳ್ಳುತ್ತಿದ್ದಾರೆ. ಸಾಲದ್ದಕ್ಕೆ ರಾಮನಗರ ತಾಲ್ಲೂಕಿನ ಬಿಡದಿ ಬಳಿ ಇದೇ ರೀತಿಯ ಬರಹ ಹೊಂದಿರು ಫ್ಲೆಕ್ಸ್ ಕೂಡ ರಾರಾಜಿಸಿದೆ.

ಪ್ರಿಯಾಂಕ್ ಹೇಳಿಕೆ ವಿರುದ್ಧ ರಾಜ್ಯವ್ಯಾಪಿ ಹೋರಾಟಕ್ಕೂ ಜೆಡಿಎಸ್ ನಿರ್ಧರಿಸಿದೆ. ಮತ್ತೊಂದೆಡೆ ಪ್ರಿಯಾಂಕ್ ಹೇಳಿಕೆ ವಿಚಾರವಾಗಿ ಎಕ್ಸ್ ಪೋಸ್ಟ್ ಮೂಲಕ ತಿರುಗೇಟು ನೀಡಿರುವ ಕುಮಾರಸ್ವಾಮಿ, ಭಾರತದ ಆತ್ಮ ಹಳ್ಳಿಗಳಲ್ಲಿದೆ ಎಂದು ಮಹಾತ್ಮ ಗಾಂಧಿ ಅವರೇ ಹೇಳಿದ್ದಾರೆ. ನಿಜ, ನಾನು ಹಳ್ಳಿಯವನು.

ಅಲ್ಲೇ ಹುಟ್ಟಿ, ಹಟ್ಟಿಯಲ್ಲಿ ಆಡಿ ಬೆಳೆದವನು. ಹಳ್ಳಿಯವನು ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆ ಇದೆ ಎಂದು ಹೇಳುವ ಮೂಲಕ ಸಿಟಿಯಲ್ಲಿಯೇ ಬೆಳೆದ ಪ್ರಿಯಾಂಕ್ ಖರ್ಗೆಗೆ ಕೌಂಟರ್ ಕೊಟ್ಟಿದ್ದಾರೆ. ಮಿಸ್ಟರ್ ನಿಷ್ಪ್ರಯೋಜಕ ವ್ಯಕ್ತಿ 'ಇಟಲಿ' ಪ್ರಿಯಾಂಕ ಖರ್ಗೆ ಅವರೇ, ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರನ್ನು 'ಹಳ್ಳಿ ಗುಗ್ಗು' ಹಾಗೂ 'ಈಡಿಯಟ್' ಎಂದು ಜರಿದು ನಿಮ್ಮ 'ಹೈಟೆಕ್' ಅಹಂಕಾರವನ್ನು ಹಾಗೂ ನಿಮ್ಮ ಸಂಸ್ಕಾರವನ್ನು ಪ್ರದರ್ಶಿಸಿದ್ದೀರಿ. ಅಧಿಕಾರದ ಮದದಲ್ಲಿ ನೀವು ಆಡಿರುವ ಈ ಮಾತು ಕೇವಲ ಕುಮಾರಸ್ವಾಮಿ ಅವರಿಗಷ್ಟೇ ಅಲ್ಲ, ಇಡೀ ದೇಶದ ಹಳ್ಳಿಗಳ ಮಣ್ಣಿನ ಮಕ್ಕಳಿಗೆ ಹಾಗೂ ಕಷ್ಟಪಟ್ಟು ದುಡಿಯುವ ರೈತರಿಗೆ ಮಾಡಿದ ಘೋರ ಅಪಮಾನ.

ದೆಹಲಿ ಮತ್ತು ಇಟಲಿ ನಾಯಕರ ಎದುರು ಜೀ ಹುಜೂರ್ ಎನ್ನುವ ನಿಮ್ಮಂತಹ ಗುಲಾಮರಿಗೆ ಹಳ್ಳಿಗರ ಸ್ವಾಭಿಮಾನ ಎಂದಿಗೂ ಅರ್ಥವಾಗುವುದಿಲ್ಲ ಎಂದು ಎಕ್ಸ್ ಪೋಸ್ಟ್ ಮೂಲಕ ಜೆಡಿಎಸ್ ಕೂಡ ಕಿಡಿಕಾರಿದೆ.

ರಾಜ್ಯ ಸರ್ಕಾರಿ ನೌಕರರಿಗೆ ದೀಪಾವಳಿ ಗಿಫ್ಟ್

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರಿ ನೌಕರರಿಗೆ ಸರ್ಕಾರ ದೀಪಾವಳಿ ಉಡುಗೊರೆ ನೀಡಿದೆ. ತುಟ್ಟಿ ಭತ್ಯೆ ದರವನ್ನು ಮೂಲ ವೇತನದ 15.75 ರಿಂದ 18% ಗೆ ಏರಿಕೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. 2026ರ ಜುಲೈ 1 ರಿಂದಲೇ ತುಟ್ಟಿ ಭತ್ಯೆ ಹೆಚ್ಚಳ ಅನ್ವಯವಾಗಲಿದೆ. ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರು/ಕುಟುಂಬ ನಿವೃತ್ತಿ ವೇತನದಾರರಿಗೆ ಮತ್ತು ರಾಜ್ಯದ ಸಂಚಿತ ನಿಧಿಯಿಂದ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಪಡೆಯುತ್ತಿರುವ ಅನುದಾನಿತ ಶಿಕ್ಷಣ ಸಂಸ್ಥೆಗಳ ನಿವೃತ್ತಿ ವೇತನದಾರರು/ಕುಟುಂಬ ನಿವೃತ್ತಿ ವೇತನದಾರರಿಗೂ ಜುಲೈ 1 ರಿಂದ ಜಾರಿಗೆ ಬರುವಂತೆ ಲಭ್ಯವಿರುವ ತುಟ್ಟಿಭತ್ಯೆಯ ದರಗಳನ್ನು ಹೆಚ್ಚಿಸಿ ಸರ್ಕಾರ ಆದೇಶಿಸಿದೆ.

ಯುಜಿಸಿ/ಎಐಸಿಟಿಇ/ಐಸಿಎಆರ್ ವೇತನ ಶ್ರೇಣಿಗಳಲ್ಲಿ ನಿವೃತ್ತ ನೌಕರರು ರಾಜ್ಯ ಪಿಂಚಣಿದಾರರಾಗುವುದರಿಂದ ಅವರಿಗೂ ಸಹ ಈ ಆದೇಶ ಅನ್ವಯಿಸುತ್ತದೆ. ಸರ್ಕಾರದ ಮತ್ತು ಜಿಲ್ಲಾ ಪಂಚಾಯತ್‌ಗಳ ಪೂರ್ಣಾವಧಿ ನೌಕರರಿಗೆ, ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ವರ್ಕ್‌ಚಾರ್ಜ್ ನೌಕರರಿಗೆ ಹಾಗೂ ಸರ್ಕಾರದಿಂದ ಸಹಾಯಾನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ವಿವಿಗಳಲ್ಲಿ ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ನೌಕರರಿಗೂ ಇದು ಅನ್ವಯಿಸಲಿದೆ.

7 ದಿನಗಳಲ್ಲಿ 16 ಲಕ್ಷ ಭಕ್ತರಿಂದ ಹಾಸನಾಂಬೆ ದರ್ಶನ

• ಉದಯವಾಹಿನಿ, ಬೆಂಗಳೂರು

ಐತಿಹಾಸಿಕ ಹಾಗೂ ಧಾರ್ಮಿಕ ಪ್ರಸಿದ್ಧ ಹಾಸನದ ಶ್ರೀ ಹಾಸನಾಂಬೆ ದೇವಿ ದರ್ಶನೋತ್ಸವ-2026 ಭರದಿಂದ ಸಾಗುತ್ತಿದ್ದು, ಕೇವಲ ಏಳು ದಿನಗಳಲ್ಲಿ 16 ಲಕ್ಷಕ್ಕೂ ಅಧಿಕ ಭಕ್ತಾದಿಗಳು ದೇವಿಯ ದರ್ಶನ ಪಡೆದಿದ್ದಾರೆ. ದರ್ಶನೋತ್ಸವದ ಮೂಲಕ ದೇವಾಲಯಕ್ಕೆ ಇದುವರೆಗೆ ಬರೋಬ್ಬರಿ 13 ಕೋಟಿ ರೂ.ಗೂ ಹೆಚ್ಚು ಆದಾಯ ಹರಿದುಬಂದಿದೆ ಎಂದು ಹಾಸನ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ತಿಳಿಸಿದ್ದಾರೆ.

ಒಂದೆಡೆ ಭಕ್ತರ ಮಹಾಪೂರವೇ ಹರಿದುಬರುತ್ತಿದ್ದರೆ, ರಾಜಕೀಯ ಪ್ರಭಾವದಿಂದ ಪ್ರೋಟೋಕಾಲ್‌ನಲ್ಲಿ ಬಂದಿದ್ದ ಕಾರ್ಯಕರ್ತರಿಂದ ಕಂದಾಯ ಇಲಾಖೆ ಸಿಬ್ಬಂದಿಗೆ ಕಿರುಕುಳ ಹಾಗೂ ಹಿರಿಯ ಅಧಿಕಾರಿಗಳ ಕ್ಷಮೆಯಾಚನೆಯ ಘಟನೆ ನಡೆದಿರುವುದು ಚರ್ಚೆಗೆ ಕಾರಣವಾಗಿದೆ. ಜಿಲ್ಲಾಧಿಕಾರಿ ಕೆ.ಎಸ್. ಲತಾ ಕುಮಾರಿ ಅವರು, ದರ್ಶನೋತ್ಸವದ ಸದ್ಯದ ಪರಿಸ್ಥಿತಿ ಹಾಗೂ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ನೀಡಿದ್ದಾರೆ. ಟಿವಿ9 ನ್ಯೂಸ್ ಚಾನೆಲ್ ಜೊತೆ ಮಾತನಾಡಿದ ಜಿಲ್ಲಾಧಿಕಾರಿ ಕೆ.ಎಸ್. ಲತಾ ಕುಮಾರಿ ಅವರು, ದರ್ಶನೋತ್ಸವದ ಸದ್ಯದ ಪರಿಸ್ಥಿತಿ ಹಾಗೂ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ನೀಡಿದ್ದಾರೆ.

ಪ್ರತಿಭಟನೆ ವೇಳೆ ಎಳೆದಾಡಿದ ಪೊಲೀಸ್ರು ಅಂಗಿ ಬಿಚ್ಚಿ ಗಾಯ ತೋರಿಸಿದ ರವಿಕುಮಾರ್

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರದ ಬಸ್ ದರ ಏರಿಕೆಯನ್ನು ಖಂಡಿಸಿ ಬಿಜೆಪಿ ನಾಯಕರು ಇಂದು (ನವೆಂಬರ್ 05) ಬೆಂಗಳೂರಿನ ಮೆಜೆಸ್ಟಿಕ್‌ನಲ್ಲಿ ವಿಭಿನ್ನವಾಗಿ ಪ್ರತಿಭಟನೆ ಮಾಡಿದ್ದಾರೆ. ಭಿಕ್ಷೆ ಬೇಡುವ ಮೂಲಕ ಬೆಲೆ ಏರಿಕೆ ವಿರುದ್ಧ ಆಕ್ರೋಶ ಹೊರಹಾಕಿದರು. ಈ ವೇಳೆ ಇಬ್ಬರು ಬಿಜೆಪಿ ಕಾರ್ಯಕರ್ತರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಾರಿಗೆ ಸಚಿವ ಬೈರತಿ ಸುರೇಶ್ ಅವರ ಮುಖವಾಡ ಧರಿಸಿ, 'ದಿವಾಳಿ ಸರ್ಕಾರ' ಎಂದು ಸಾಂಕೇತಿಕವಾಗಿ ಭಿಕ್ಷೆ ಬೇಡಿ ಗಮನ ಸೆಳೆದರು. ಇದೇ ಸಂದರ್ಭದಲ್ಲಿ ಆರ್. ಅಶೋಕ್ ಅವರು ಬಸ್ ಪ್ರಯಾಣಿಕರಿಗೆ ಗುಲಾಬಿ ಹೂಗಳನ್ನು ನೀಡಿ ಸರ್ಕಾರದ ನಿರ್ಧಾರದ ವಿರುದ್ಧ ಬೆಂಬಲ ಕೋರಿದರು.


ಇನ್ನು ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆಯೇ ಪೊಲೀಸರು, ಬಿಜೆಪಿ ನಾಯಕರನ್ನು ವಶಕ್ಕೆ ಪಡೆಯಲು ಯತ್ನಿಸಿದ್ದು, ಈ ವೇಳೆ ವಿಧಾನಪರಿಷತ್ ಮುಖ್ಯ ಸಚೇತಕ ರವಿಕುಮಾರ್ ಅವರ ಕೈ ಹಿಡಿದು ಎಳೆದಾಡಿದ್ದಾರೆ. ಇದರಿಂದ ಆಕ್ರೋಶಗೊಂಡ ರವಿ ಕುಮಾರ್, ರಸ್ತೆಯಲ್ಲೇ ಕುಳಿತು ಅಂಗಿ ಬಿಚ್ಚಿ ತೋರಿಸಿ ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದ ಜನತೆ ಸರ್ಕಾರದ ಮೇಲೆ ವಿಶ್ವಾಸವಿಡಲು ಸಾಧ್ಯವೇ?

• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್‌ನಿಂದಲೇ ತನ್ನದೇ ಮುಖ್ಯಮಂತ್ರಿಯ ವಿರುದ್ಧ ಅವಿಶ್ವಾಸ, ಆಡಳಿತಾರೂಢ ಸರ್ಕಾರವು ತನ್ನದೇ ನಾಯಕರ ವಿಶ್ವಾಸವನ್ನು ಕಳೆದುಕೊಂಡಾಗ, ಅದು ಕರ್ನಾಟಕವನ್ನು ಆಳುವ ಹಕ್ಕನ್ನೇ ಕಳೆದುಕೊಳ್ಳುತ್ತದೆ ಎಂದು ಬಿಜೆಪಿ ನಾಯಕ ಆರ್. ಅಶೋಕ್ ಲೇವಡಿ ಮಾಡಿದ್ದಾರೆ.

ಎಕ್ಸ್ ಕಾತೆಯಲ್ಲಿ ಬರೆದುಕೊಂಡಿರುವ ಅಶೋಕ್, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ, ನಿಮ್ಮ ಸರ್ಕಾರದ ವಿರುದ್ಧದ ಅತ್ಯಂತ ಗಂಭೀರವಾದ ಟೀಕೆ ಬರುತ್ತಿರುವುದು ವಿರೋಧ ಪಕ್ಷದಿಂದಲ್ಲ, ಬದಲಾಗಿ ನಿಮ್ಮದೇ ಆದ ಕಾಂಗ್ರೆಸ್ ಪಕ್ಷದ ಒಳಗಿನಿಂದಲೇ. ಕರ್ನಾಟಕದಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಅತೃಪ್ತಿ ಹೊಂದಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಒಪ್ಪಿಕೊಂಡಿದ್ದಾರೆ.



ಎಸ್ ಐ ಆರ್ ವಿರುದ್ಧ ಇಂಡಿ ಒಕ್ಕೂಟ ಸಮರ

ಎಲೆಕ್ಷನ್ ಕಮಿಷನ್ ಈಗ 'ಸೆಲೆಕ್ಷನ್ ಕಮಿಷನ್' ಆಗಿದೆ

•ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮತದಾರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ವಿರೋಧಿಸಿ ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಒತ್ತಾಯಿಸಿ ಇಂಡಿಯಾ ಮೈತ್ರಿಕೂಟ ಮತ ಉಳಿಸಿ-ದೇಶ ಉಳಿಸಿ ಪ್ರತಿಭಟನಾ ಸಮಾವೇಶ ನಡೆಯಿತು.ಸಮಾವೇಶದಲ್ಲಿ ಸಿಎಂ ಡಿ.ಕೆ.ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ರೈತ ಸಂಘದ ವೀರಸಂಗಯ್ಯ, ಪ್ರಕಾಶ್ ಕೆ, ಸಿಪಿಐನ ಸಾತಿ ಸುಂದರೇಶ್, ಸಿಪಿಐ ಎಂಎಲ್ ಲಿಬರೇಷನ್ ಕ್ಲಿಫ್ಟನ್ ರೊಸಾರಿಯೊ, ನಟ ಪ್ರಕಾಶ್ ರೈ, ಕೆ.ನೀಲಾ ಸೇರಿದಂತೆ ಉಪಸ್ಥಿತರಿದ್ದರು. ಪ್ರತಿಭಟನೆಯಲ್ಲಿ ಮಾತನಾಡಿದ ಸಿಎಂ ಡಿ.ಕೆ.ಶಿವಕುಮಾರ್, ಮತಗಳ್ಳತನಕ್ಕೆ ಕುಮ್ಮಕ್ಕು ನೀಡಿದ ಹಾಗೂ ಅರ್ಜಿ ನಮೂನೆ 7ನ್ನು ದುರುಪಯೋಗಪಡಿಸಿಕೊಂಡವರ ವಿರುದ್ಧ ಪೊಲೀಸ್ ತನಿಖೆ ನಡೆಸಲು ನಮ್ಮ ಸರ್ಕಾರ ಮುಂದಾಗಲಿದೆ.

ನಾವು ಕೇವಲ ಚುನಾವಣಾ ಆಯೋಗದ ವಿರುದ್ಧ ಮಾತ್ರ ಹೋರಾಟ ಮಾಡುತ್ತಿಲ್ಲ. ಚುನಾವಣಾ ಆಯೋಗದ ಹಿಂದೆ ಇರುವ ಬಿಜೆಪಿಯ ಹುನ್ನಾರದ ವಿರುದ್ಧವೂ ಹೋರಾಟ ಮಾಡುತ್ತಿದ್ದೇವೆ ಎಂದು ತಿಳಿಸಿದರು. **ಮತಪಟ್ಟಿ ಪರಿಷ್ಕರಣೆಯಲ್ಲಿ ಬಿಜೆಪಿ ಹಸ್ತಕ್ಷೇಪ:** ಬಿಜೆಪಿ ಮತಗಳ್ಳತನ ಮಾಡಿದೆ. ಅಂತಹ ಪಕ್ಷದ ವಿರುದ್ಧ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಈ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮ ಮತ ನಮ್ಮ ಹಕ್ಕು. ನಮ್ಮ ಹಕ್ಕಿಗಾಗಿ ಇಂದು ನಾವೆಲ್ಲರೂ ಹೋರಾಟ ಮಾಡಲು ಇಲ್ಲಿ ಸೇರಿದ್ದೇವೆ.

ಬೆಂಗಳೂರಿನಲ್ಲಿ ಚಿಲುಮೆ ಸಂಸ್ಥೆಯ ಮೂಲಕ ಬಿಜೆಪಿ ಸರ್ಕಾರ ತನ್ನ ಕಾರ್ಯಕರ್ತರಿಗೆ ಬಿಎಲ್‌ಒ ಅಧಿಕಾರ ಕೊಡಿಸಿ, ಲಕ್ಷಾಂತರ ಮತಗಳನ್ನು ತೆಗೆದುಹಾಕುವ ಮತ್ತು ಹೊಸ ಮತದಾರರನ್ನು ಸೇರ್ಪಡೆಗೊಳಿಸುವ ಪ್ರಕ್ರಿಯೆಯಲ್ಲಿ ಅಕ್ರಮ ಎಸಗಲು ಸಂಚು ರೂಪಿಸಿತ್ತು. ಕಾಂಗ್ರೆಸ್ ನಾಯಕರು ದೆಹಲಿಗೆ ತೆರಳಿ ಚುನಾವಣಾ ಆಯೋಗವನ್ನು ಭೇಟಿ ಮಾಡಿ ಮತದಾರರ ಹಕ್ಕುಗಳನ್ನು ರಕ್ಷಿಸಲು ಹೋರಾಟ ನಡೆಸಿದೆವು ಎಂದರು. ಬಿಜೆಪಿ ಕಚೇರಿಯಿಂದಲೇ ಅರ್ಜಿ ನಮೂನೆ 7ನ್ನು ಮುದ್ರಿಸಿ, ಮತದಾರರ ಹೆಸರು, ಮತದಾರರ ಗುರುತಿನ ಚೀಟಿ ಸಂಖ್ಯೆ ಮತ್ತು ದೂರವಾಣಿ ಸಂಖ್ಯೆಗಳೊಂದಿಗೆ ಕ್ಷೇತ್ರಗಳ ನಾಯಕರಿಗೆ ಕಳುಹಿಸಲಾಗಿತ್ತು. ಕೇವಲ ಅರ್ಜಿ ಸಲ್ಲಿಸುವವರ ಹೆಸರನ್ನು ಭರ್ತಿ ಮಾಡುವ ವ್ಯವಸ್ಥೆ ಮಾಡಲಾಗಿತ್ತು. ಈ ಮೂಲಕ ಪ್ರತಿ ಕ್ಷೇತ್ರದಲ್ಲಿ 10ರಿಂದ 20 ಸಾವಿರ ಪರಿಶಿಷ್ಟ ಪಂಗಡದವರು, ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರ ಮತಗಳನ್ನು ಅಳಿಸಲು ಸಂಚು ರೂಪಿಸಲಾಗಿತ್ತು ಎಂದು ಆರೋಪಿಸಿದರು. ಮಾಜಿ ಸಿಎಂ ಸಿದ್ದರಾಮಯ್ಯ ಮಾತನಾಡಿ, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯು ಕಾನೂನು ಹಾಗೂ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ಈ ಪ್ರಕ್ರಿಯೆಯನ್ನು ಕೂಡಲೇ ರದ್ದುಗೊಳಿಸಬೇಕು ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಕಮಲ ವಿರುದ್ಧ ಸಿಡಿದ್ದೇದ ಕೈ ನಾಯಕರು

ಒಗ್ಗಟ್ಟಾಗಿ ಹೋರಾಟ

ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಮಾತನಾಡಿ, ದೇಶದಲ್ಲಿ ಸ್ವತಂತ್ರ ಮತ್ತು ನಿಷ್ಪಕ್ಷಪಾತ ಚುನಾವಣೆಗಳನ್ನು ನಡೆಸಬೇಕಾದ ಚುನಾವಣಾ ಆಯೋಗ ತನ್ನ ಸ್ವಾಯತ್ತತೆಯನ್ನು ಕಳೆದುಕೊಂಡು ಸಂಪೂರ್ಣವಾಗಿ ಸೆಲೆಕ್ಷನ್ ಕಮಿಷನ್ ಆಗಿ ಮಾರ್ಪಟ್ಟಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಶಾ ಅವರ ಆದೇಶಗಳನ್ನು ಪಾಲಿಸುವ ಸಂಸ್ಥೆಯಾಗಿ ಚುನಾವಣಾ ಆಯೋಗ ಬದಲಾಗಿದೆ ಎಂದು ತೀವ್ರ ವಾಗ್ದಾಳಿ ನಡೆಸಿದರು. ನವೆಂಬರ್ 1ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ,ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ನಡೆದ ಬೃಹತ್ ಪ್ರತಿಭಟನೆಯ ಮುಂದುವರಿದ ಭಾಗವಾಗಿ ಬೆಂಗಳೂರಿನಲ್ಲಿ ಈ ಸಮಾವೇಶ ಆಯೋಜಿಸಲಾಗಿದೆ.

ಇದು ಕೇವಲ ಚುನಾವಣಾ ಪ್ರಕ್ರಿಯೆಯ ವಿರುದ್ಧದ ಹೋರಾಟವಲ್ಲ. ದೇಶದ ಸಂವಿಧಾನ, ಪ್ರಜಾಪ್ರಭುತ್ವ ಮತ್ತು ಪ್ರತಿಯೊಬ್ಬ ನಾಗರಿಕನ ಮತದಾನದ ಹಕ್ಕನ್ನು ರಕ್ಷಿಸುವ ಹೋರಾಟವಾಗಿದೆ ಎಂದು ಹೇಳಿದರು.

ಹರಿಪ್ರಸಾದ್ ಭಾಷಣ

ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಮಾತನಾಡಿ, ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರದಲ್ಲಿ ಎಸ್‌ಐಆರ್ ವಿರುದ್ಧ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸುತ್ತೇವೆ. ಇಂಡಿ ಒಕ್ಕೂಟ ಪ್ರತಿಭಟನೆ ನಡೆಸಲಿದೆ ಎಂದರು. ಸಾಂವಿಧಾನಿಕ ಸಂಸ್ಥೆಗಳ ದುರ್ಬಳಕೆ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡಲು ಹೊರಟಿರುವ ಬಿಜೆಪಿ ,ಆರ್‌ಎಸ್‌ಎಸ್ ಪ್ರಯತ್ನದ ವಿರುದ್ಧ ನಮ್ಮ ಹೋರಾಟ ಮುಂದುವರೆಯಲಿದೆ. ಭಾರತವನ್ನು ಸರ್ವಾಧಿಕಾರಿ ನೆಲೆಗಟ್ಟಿಗೆ ಪರಿವರ್ತಿಸುವ ಹಾಗೂ ಕೋಮುವಾದಿ ಹಿಂದೂತ್ವ ರಾಷ್ಟ್ರ ನಿರ್ಮಾಣಕ್ಕೆ ಮುಂದಾಗಿರುವ ಬಿಜೆಪಿ ಪ್ರಯತ್ನಕ್ಕೆ ನಾವು ಅವಕಾಶ ಕೊಡಲ್ಲ. ಇಂಡಿ ಪಕ್ಷಗಳು ಒಂದಾಗಿ, ಒಗ್ಗಟ್ಟಾಗಿ ಹೋರಾಟ ನಡೆಸಲಿವೆ ಎಂದರು.

ಡಿಕೆಶಿ ವಾಗ್ದಾಳಿ

ಈ ಪ್ರತಿಭಟನಾ ರ‍್ಯಾಲಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಎಸ್‌ಐಆರ್ ವಿರುದ್ಧ ಚುನಾವಣಾ ಆಯೋಗಕ್ಕೆ ಹೋಗಲು ನಮಗೆ ಅವಕಾಶ ನೀಡಿಲ್ಲ. ಮತದಾರರ ಹಕ್ಕಿಗಾಗಿ ನಾವು ಹೋರಾಟ ಮಾಡುತ್ತಿದ್ದೇವೆ. ಚುನಾವಣಾ ಆಯೋಗ ಮತಗಳ್ಳತನಕ್ಕೆ ಅವಕಾಶ ಮಾಡಿಕೊಡುತ್ತಿದೆ ಎಂದು ಆರೋಪಿಸಿದರು. ದೇಶದ ಐತಿಹಾಸಿಕ ಹೋರಾಟಕ್ಕೆ ಫ್ರೀಡಂ ಪಾರ್ಕ್ ಸಾಕ್ಷಿಯಾಗಿದೆ. ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ರಣಕಹಳೆ ಆರಂಭವಾಗಿದೆ. ದೇಶದಲ್ಲಿ ಯಾವ ರೀತಿ ಮತಚೋರಿ ನಡೆಯುತ್ತಿದೆ ಎಂಬುದನ್ನು ತೋರಿಸಿದ್ದೇವೆ. ನಮ್ಮ ರಾಜ್ಯ ಸರ್ಕಾರ ಕಾನೂನು ಚೌಕಟ್ಟಿನಲ್ಲಿ ತನಿಖೆ ಮಾಡುತ್ತದೆ ಎಂದು ಹೇಳಿದರು. ಲಕ್ಷಾಂತರ ಜನ ಇಂದು ಬೀದಿಗಿಳಿದು ಪ್ರತಿಭಟನೆ ಮಾಡುತ್ತಿದ್ದೇವೆ.

ಸಿಇಸಿ ಜ್ಞಾನೇಶ್‌ಕುಮಾರ್ ಮೇಲೆ ಕ್ರಮ ಆಗಬೇಕು ಎಂದು ಒತ್ತಾಯಿಸಿದರು. ಈ ಹೋರಾಟಕ್ಕೆ ಭಾಗಿಯಾದವರ ಜತೆ ಸರ್ಕಾರ ಇರುತ್ತದೆ. 2028 ಕ್ಕೆ ರಾಜ್ಯದಲ್ಲಿ, 2029ಕ್ಕೆ ದೇಶದಲ್ಲಿ ಇಂಡಿಯಾ ಒಕ್ಕೂಟ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದರು.

ಮುಗಿಲು ಮುಟ್ಟಿದ ಘೋಷಣೆ ಭಿತ್ತಿಪತ್ರ ಪ್ರದರ್ಶನ

ಈ ಪ್ರತಿಭಟನಾ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದ ಸಾವಿರಾರು ಕಾರ್ಯಕರ್ತರು ಮತ ಉಳಿಸಿ, ದೇಶ ಉಳಿಸಿ ಎಂಬ ಘೋಷಣೆಗಳನ್ನು ಕೂಗಿ ಭಿತ್ತಿಪತ್ರಗಳನ್ನು ಪ್ರದರ್ಶಿಸಿ, ಸಿಇಸಿ ರಾಜೀನಾಮೆಗೆ ಆಗ್ರಹಿಸಿ ಏರು ಧ್ವನಿಯಲ್ಲಿ ಘೋಷಣೆಗಳನ್ನು ಕೂಗಿದರು. ಹಾಗೆಯೇ ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್‌ಶಾ ವಿರುದ್ಧವೂ ಧಿಕ್ಕಾರದ ಘೋಷಣೆಗಳನ್ನು ಪ್ರತಿಭಟನಾಕಾರರು ಕೂಗಿದರು.

□ ಎಸ್‌ಐಆರ್ ರದ್ದತಿಗೆ ಆಗ್ರಹಿಸಿ ನಗರದ ಫ್ರೀಡಂ ಪಾರ್ಕ್‌ನಲ್ಲಿ ಗುರುವಾರ ಬೃಹತ್ ಹೋರಾಟ □ ಇಂಡಿ ಒಕ್ಕೂಟದಿಂದ ನಡೆದ ಹೋರಾಟದಲ್ಲಿ ಸಿಎಂ ಡಿಕೆ ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ ಭಾಗಿ □ಪ್ರತಿಭಟನಾ ಸಮಾವೇಶದಲ್ಲಿ ಇಂಡಿ ಒಕ್ಕೂಟದಿಂದ 5 ನಿರ್ಣಯಗಳ ಮಂಡನೆ □ ಮುಖ್ಯ ಚುನಾವಣಾ ಆಯುಕ್ತರ ನೇಮಕಾತಿ ಕಾನೂನನ್ನು ರದ್ದು ಮಾಡಿ, ಸುಪ್ರೀಂಕೋರ್ಟ್ ಸೂಚನೆಯಂತೆ ನೇಮಕಾತಿಯ ಸ್ವಾಯತ್ತತೆಯನ್ನು ಖಾತ್ರಿಪಡಿಸಬೇಕು.

ಜನಸಾಮಾನ್ಯರಿಗೆ ದುಬಾರಿ ಹೊರೆ



• ಉದಯವಾಹಿನಿ, ಬೆಂಗಳೂರು

ರಾಜ್ಯಸರ್ಕಾರ ಹಾಲು, ಮೊಸರು ಮತ್ತು ಬಸ್ ಪ್ರಯಾಣದರ ಏರಿಕೆ ಮಾಡಿರುವುದು ಸರಿಯಲ್ಲ, ಇದರಿಂದ ಶ್ರೀಸಾಮಾನ್ಯರಿಗೆ ದುಬಾರಿ ಹೊರೆಯಾಗಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್‌ಬಾಬು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದ ಬೆಲೆ ಏರಿಕೆ ಧೋರಣೆಯಿಂದ ಸಾಮಾನ್ಯ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ರಾಜ್ಯವನ್ನು ಕೊಳ್ಳೆ ಹೊಡೆಯಲಾಗುತ್ತಿದೆ ಎಂದು ಆರೋಪಿಸಿದರು.ಸಾಮಾಜಿಕ ಭದ್ರತಾ ಯೋಜನೆಯಡಿ ನೀಡುವ ವಿಧವಾ ವೇತನ, ವೃದ್ಧಾಪ್ಯ ವೇತನ ಸಕಾಲಕ್ಕೆ ನೀಡುತ್ತಿಲ್ಲ.

ಬರಗಾಲ ಘೋಷಣೆ ಮಾಡಿದ್ದು, ಬರ ಪರಿಹಾರ ಧನ ಬಿಡುಗಡೆ ಮಾಡಿಲ್ಲ. ಪಂಚಾಯಿತಿಗಳಲ್ಲಿ ಹಣವಿಲ್ಲದೆ ಕೊಳವೆ ಬಾವಿಗಳ ರಿಪೇರಿ ಮಾಡಲು ಸಾಧ್ಯವಾಗುತ್ತಿಲ್ಲ. ಈ ರೀತಿ ನಿಮ ಆಡಳಿತಾವಧಿಯಲ್ಲಿ ರಾಜ್ಯ ಸುಭೀಕ್ಷವಾಗಿದೆಯೇ? ಎಂದು ಪ್ರಶ್ನಿಸಿದರು.

ಗುತ್ತಿಗೆದಾರರ ಬಾಕಿ ಬಿಲ್ ಪಾವತಿಸುತ್ತಿಲ್ಲ. ಈಗಲೇ ಬರಗಾಲದಿಂದ ಹತ್ತಾರು ಸಮಸ್ಯೆಗಳು ಎದುರಿಸುತ್ತಿದ್ದು, ಮುಂದಿನ ಬೇಸಿಗೆಯನ್ನು ಹೇಗೆ ನಿಭಾಯಿಸುತ್ತೀರಿ?, ಕಬ್ಬು ಬೆಳೆಗಾರರ ಬೇಡಿಕೆ ಈಡೇರಿಸಿಲ್ಲ. ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡುವುದನ್ನು ಬಿಟ್ಟು ಸರಿಯಾಗಿ ಆಡಳಿತ ನಡೆಸಿ ಎಲ್ಲಾ ಹಂತಗಳಲ್ಲೂ ವಿಫಲವಾಗುತ್ತಿರುವ ರಾಜ್ಯಸರ್ಕಾರಕ್ಕೆ ಜನರು ಹಿಡಿಶಾಪವಾಕುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಗೃಹಲಕ್ಷ್ಮಿ ಯೋಜನೆ ಕಡ್ಡಾಯ 'ಹಕ್ಕು' ಎಂದು ಪರಿಗಣಿಸಲಾಗದು: ಹೈಕೋರ್ಟ್‌ನಲ್ಲಿ ಸರ್ಕಾರದ ವಾದ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಗೃಹಲಕ್ಷ್ಮಿ' ಯೋಜನೆಯಡಿ ನೀಡಲಾಗುವ ಪ್ರತಿ ತಿಂಗಳ 2,000 ರೂಪಾಯಿ ಹಣವನ್ನು ಫಲಾನುಭವಿಗಳು ತಮ್ಮ 'ಹಕ್ಕು' ಎಂದು ಕಾನೂನಾತ್ಮಕವಾಗಿ ಒತ್ತಾಯಿಸುವಂತಿಲ್ಲ ಎಂದು ರಾಜ್ಯ ಸರ್ಕಾರ ಇಂದು ಹೈಕೋರ್ಟ್‌ಗೆ ತಿಳಿಸಿದೆ.

ಬೆಂಗಳೂರು ನಿವಾಸಿಗಳಾದ ಕಾರ್ಮಿಕರಾದ ಬೆಂಗಳೂರಿನ ಆರ್. ಗಂಗಾ ಮತ್ತು ಜಿ.ಡಿ.ಪವಿತ್ರಾ ಎಂಬವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನು ಶಿವರಾಮನ್ ಹಾಗೂ ಕೆ.ಎಸ್.ಭರತ್ ಕುಮಾರ್ ಅವರಿದ್ದ ವಿಭಾಗೀಯ ಪೀಠಕ್ಕೆ ಸರ್ಕಾರ ಈ ಮಾಹಿತಿ ನೀಡಿತು. 1.26 ಕೋಟಿ ಮಹಿಳಾ ಫಲಾನುಭವಿಗಳಿಗೆ ಒಟ್ಟು 5,000 ಕೋಟಿ ರೂ.ಗಳ ಎರಡು ಕಂತುಗಳ ಬಾಕಿ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ವಿಫಲವಾಗಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ. ಆದರೆ, ಗೃಹಲಕ್ಷ್ಮಿ ಮಹಿಳಾ ಸಬಲೀಕರಣಕ್ಕಾಗಿ ತಂದಿರುವ ಒಂದು 'ಪರೋಪಕಾರಿ' ಕಲ್ಯಾಣ ಯೋಜನೆಯಾಗಿದೆ.

ಆಡಳಿತಾತ್ಮಕ ತುರ್ತು ಪರಿಸ್ಥಿತಿಗಳು ಮತ್ತು ರಾಜ್ಯದ ಆರ್ಥಿಕ ಮುಗ್ಗಟ್ಟುಗಳಿಗೆ ಒಳಪಟ್ಟು ಈ ಯೋಜನೆ ಅನುಷ್ಠಾನಗೊಳ್ಳುತ್ತದೆ. ನ್ಯಾಯಾಲಯದ ಮಧ್ಯಸ್ಥಿಕೆಯ ಮೂಲಕ ಇದನ್ನು ಜಾರಿಗೊಳಿಸುವಂತೆ ಫಲಾನುಭವಿಗಳು ಹಕ್ಕು ಸಾಧಿಸಲು ಬರುವುದಿಲ್ಲ ಎಂದು ಸರ್ಕಾರ ವಾದಿಸಿತು.

ರಾಜ್ಯವು ನಿಜವಾದ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವಾಗ, ಕೇವಲ 'ಕಾನೂನಾತ್ಮಕ ನಿರೀಕ್ಷೆಯ' ಆಧಾರದ ಮೇಲೆ ಹಣಕಾಸು ನೆರವು ನೀಡಲೇಬೇಕು ಎಂದು ಫಲಾನುಭವಿಗಳು ಪಟ್ಟು ಹಿಡಿಯಲು ಸಾಧ್ಯವಿಲ್ಲ ಎಂದು ಸರ್ಕಾರದ ಪರ ವಕೀಲರು ಹೈಕೋರ್ಟ್‌ಗೆ ಮಾಹಿತಿ ನೀಡಿದರು. 2025ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಗೃಹಲಕ್ಷ್ಮಿ ಹಣವನ್ನು ತೀವ್ರ ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ಪಾವತಿಸಲು ಸಾಧ್ಯವಾಗಿಲ್ಲ. ಈ ಎರಡು ತಿಂಗಳ ಹಣ ಬಿಡುಗಡೆಗಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿತ್ತಾದರೂ, ಈ ಎಲ್ಲಾ ಕಾರಣಗಳಿಂದಾಗಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯು ಕಾನೂನು ಮತ್ತು ವಾಸ್ತವದ ಹಿನ್ನೆಲೆಯಲ್ಲಿ ಮಾನ್ಯತೆ ಪಡೆಯಲು ಅರ್ಹವಲ್ಲ, ಇದನ್ನು ವಜಾಗೊಳಿಸಬೇಕು ಎಂದು ಸರ್ಕಾರದ ಪರ ವಕೀಲರು ಮನವಿ ಮಾಡಿದರು.

ನವೆಂಬರ್ 11ರಂದು ರಾಷ್ಟ್ರೀಯ ಶಿಕ್ಷಣ ದಿನಾಚರಣೆ: ಅಲ್ಪಸಂಖ್ಯಾತ ಸಂಸ್ಥೆ, ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಪ್ರಶಸ್ತಿ

• ಉದಯವಾಹಿನಿ, ಬೆಂಗಳೂರು

ಭಾರತದ ಮೊದಲ ಶಿಕ್ಷಣ ಸಚಿವರು ಮತ್ತು ಸ್ವಾತಂತ್ರ್ಯ ಹೋರಾಟಗಾರರಾದ ಮೌಲಾನಾ ಅಬುಲ್ ಕಲಾಂ ಆಜಾದ್ ಅವರ ಜನ್ಮದಿನದ ಅಂಗವಾಗಿ ರಾಜ್ಯ ಸರ್ಕಾರವು ನವೆಂಬರ್ 11ರಂದು ರಾಜ್ಯ ಮಟ್ಟದ ರಾಷ್ಟ್ರೀಯ ಶಿಕ್ಷಣ ದಿನಾಚರಣೆ ಹಮ್ಮಿಕೊಳ್ಳಲಿದೆ. ಈ ಕಾರ್ಯಕ್ರಮ ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಸಚಿವ ಯು.ಟಿ.ಖಾದರ್ ತಿಳಿಸಿದ್ದಾರೆ.

ಅಲ್ಪಸಂಖ್ಯಾತ ಸಮುದಾಯಗಳು, ಗ್ರಾಮೀಣ ಪ್ರದೇಶಗಳು ಮತ್ತು ಸಾಮಾಜಿಕವಾಗಿ ಹಿಂದುಳಿದ ಗುಂಪುಗಳಿಗೆ ಸೇವೆ ಸಲ್ಲಿಸುತ್ತಿರುವ ಸಂಸ್ಥೆಗಳು ಹಾಗೂ ಶಿಕ್ಷಣತಜ್ಞರ ಕಾರ್ಯಗಳನ್ನು ಗುರುತಿಸುವ ನಿಟ್ಟಿನಲ್ಲಿ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಈ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ.ಶಿಕ್ಷಣ ತಜ್ಞರು ಮತ್ತು ಸಂಸ್ಥೆಗಳನ್ನು **ಗುರುತಿಸಿ ಪ್ರಶಸ್ತಿ:** ಈ ಪ್ರಶಸ್ತಿ ವಿಭಾಗಗಳಲ್ಲಿ ಅತ್ಯುತ್ತಮ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು, ಪ್ರಾಂಶುಪಾಲರು ಮತ್ತು ಮುಖ್ಯೋಪಾಧ್ಯಾಯರು, ಸರ್ಕಾರಿ ಹಾಗೂ ಅನುದಾನಿತ ಶಾಲೆಗಳು, ಮತ್ತು ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಿವೆ. ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಾಗಿ ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ವಿಶೇಷ ಮನ್ನಣೆಯನ್ನೂ ನೀಡಲಾಗುತ್ತದೆ.

ಕಾರ್ಯಕ್ರಮದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೌಲಾನಾ ಆಜಾದ್ ಮಾದರಿ ಶಾಲೆಗಳು ಮತ್ತು ಇತರ ಸಂಸ್ಥೆಗಳ ವಿದ್ಯಾರ್ಥಿಗಳಲ್ಲಿ, 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ



ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುತ್ತದೆ.

ಶೈಕ್ಷಣಿಕ ಶ್ರೇಷ್ಠತೆಯನ್ನು ಗುರುತಿಸುವ, ಉನ್ನತ ಶಿಕ್ಷಣವನ್ನು ಪಡೆಯಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಹಾಗೂ ಕಲಿಕೆಯ ಗುಣಮಟ್ಟವನ್ನು ಸುಧಾರಿಸಲು ಶಿಕ್ಷಣ ಸಂಸ್ಥೆಗಳನ್ನು ಉತ್ತೇಜಿಸುವ ಗುರಿ ಹೊಂದಿದೆ. ಮಕ್ಕಳ ಆರೋಗ್ಯ ಮತ್ತು **ಸುರಕ್ಷತೆಯ ಕುರಿತಾದ ಜಾಗೃತಿ:** ಮಕ್ಕಳ ಆರೋಗ್ಯ, ಸುರಕ್ಷತೆ ಮತ್ತು ಒಟ್ಟಾರೆ ಯೋಗಕ್ಷೇಮದ ಕುರಿತು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸಲು, ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ ವಿಶೇಷ ಪ್ರದರ್ಶನಗಳನ್ನು ಆಯೋಜಿಸಲಾಗುವುದು.

ಆರೋಗ್ಯ ವಿಭಾಗವು ಮಕ್ಕಳ ಆರೋಗ್ಯ, ಪೋಷಣೆ, ವೈಯಕ್ತಿಕ ನೈರ್ಮಲ್ಯ, ರೋಗ ತಡೆಗಟ್ಟುವಿಕೆ ಮತ್ತು ಆರೋಗ್ಯಕರ ಜೀವನಶೈಲಿಗಳ ಮೇಲೆ ಗಮನಹರಿಸಲಿದೆ.

ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು ಬೆಂಕಿ ಅವಘಡಗಳನ್ನು ತಡೆಗಟ್ಟುವಿಕೆ, ಶಾಲೆಗಳಲ್ಲಿ ಅಗ್ನಿ ಸುರಕ್ಷತೆ ,ತುರ್ತು ಸಂದರ್ಭಗಳಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಜಾಗೃತಿ ಮೂಡಿಸಲಿದೆ.

ಸಂಚಾರಿ ಪೊಲೀಸರು ವಿದ್ಯಾರ್ಥಿಗಳಿಗಾಗಿ ರಸ್ತೆ ಸುರಕ್ಷತೆ, ಸಂಚಾರ ನಿಯಮಗಳು, ಹೆಲ್ಮೆಟ್ ಬಳಕೆ, ಪಾದಚಾರಿಗಳ ಸುರಕ್ಷತೆ ಹಾಗೂ ಸುರಕ್ಷಿತ ಪ್ರಯಾಣದ ಮಹತ್ವದ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದ್ದಾರೆ.

ಎನ್‌ಎಲ್‌ಎಸ್‌ಐಯು ಉಪಕುಲಪತಿಗಳಿಂದ ವಿಶೇಷ ಉಪನ್ಯಾಸ

ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಉಪಕುಲಪತಿ ಪ್ರೊ. ಸುಧೀರ್ ಕೃಷ್ಣಸ್ವಾಮಿ ಅವರು ರಾಷ್ಟ್ರೀಯ ಶಿಕ್ಷಣ ದಿನದ ಮಹತ್ವದ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಶಿಕ್ಷಣದ ಪ್ರಾಮುಖ್ಯತೆ, ಸಾಂವಿಧಾನಿಕ ಮೌಲ್ಯಗಳು, ಸಮಾನ ಅವಕಾಶಗಳು ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರದ ಮೇಲೆ ಅವರ ಭಾಷಣವು ಕೇಂದ್ರೀಕೃತವಾಗಿರಲಿದೆ ಎಂದು ನಿರೀಕ್ಷಿಸಲಾಗಿದೆ.

ಈ ದಿನದ ದರ

ಪೆಟ್ರೋಲ್: 111.68 ₹/L	ಡೀಸೆಲ್ : 99.56 ₹/L	ಬಂಗಾರ: ₹14,602/Gram24ct	₹13,385/Gram22ct	ಬೆಳ್ಳಿ: ₹215.00/Gram

ವಿಜೃಂಭಣೆಯಿಂದ ಜರುಗಿದ ಧಾರ್ಮಿಕ ಉಪನ್ಯಾಸ ಕಾರ್ಯಕ್ರಮ ಗಿರಿನಗರದ ಶೃತಿ ಸಂಗೀತ ಶಾಲೆಯ ಸದಸ್ಯರುಗಳಿಂದ ಹರಿ ಭಜನೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಸುಧೀಂದ್ರನಗರದ ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಗಿರಿನಗರದ ಶೃತಿ ಸಂಗೀತ ಶಾಲೆಯ ಸದಸ್ಯರುಗಳಿಂದ ಹರಿ ಭಜನೆ ನಂತರ ಡಾ|| ವಿನಾಯಕ ನಾಮಣ್ಣವರ್ ಇವರಿಂದ ಶಾಲಿಗ್ರಾಮಗಳ ಪೌರಾಣಿಕ ಮಹತ್ವ ವಿಷಯವಾಗಿ ಧಾರ್ಮಿಕ ಉಪನ್ಯಾಸ ಕಾರ್ಯಕ್ರಮಗಳು ಜರುಗಿದವು.



ಸ್ಮಶಾನಕ್ಕೆ ಶಾಶ್ವತ ಪರಿಹಾರ ನೀಡದಿದ್ದರೆ ಉಗ್ರ ಹೋರಾಟ: ಡಿಎಸ್‌ಎಸ್ ಹಾಗೂ ಸ್ಥಳೀಯರ ಎಚ್ಚರಿಕೆ

• ಉದಯವಾಹಿನಿ, ಕೆ.ಆರ್.ಪುರ

ಪಣತೂರು ಟ್ರೀ ಪಾರ್ಕ್‌ನಲ್ಲಿರುವ ಸ್ಮಶಾನದ ಜಾಗಕ್ಕಾಗಿ ಸ್ಥಳೀಯರು ಹಾಗೂ ಡಿಎಸ್‌ಎಸ್ ಸಂಘಟನೆಯ ಕಾರ್ಯಕರ್ತರು ಶವವಿಟ್ಟು ಬೃಹತ್ ಪ್ರತಿಭಟನೆ ನಡೆಸಿದ ಕಾರಣ ಸ್ಥಳ ಪರಿಶೀಲನೆ ಮಾಡಿ ಉನ್ನತ ಅಧಿಕಾರಿಗಳಿಗೆ ವರದಿ ಸಲ್ಲಿಸಲಾಗುವುದು ಎಂದು ಬೆಂಗಳೂರು ಪೂರ್ವ ತಾಲ್ಲೂಕು ತಹಶೀಲ್ದಾರ್ ಪರಶುರಾಮ್ ತಿಳಿಸಿದರು.

ಈ ವಿಚಾರ ಸಮಾಜ ಕಲ್ಯಾಣ ಇಲಾಖೆ ಸಚಿವ ಕೆ.ಎಚ್. ಮುನಿಯಪ್ಪ ಅವರ ಗಮನಕ್ಕೆ ಬಂದ ಬಳಿಕ, ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಜಿಲ್ಲಾಧಿಕಾರಿಗಳಿಗೆ ಸೂಚನೆ



ನೀಡಿ, ಸ್ಥಳೀಯ ತಹಶೀಲ್ದಾರ್ ಅವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಆದೇಶಿಸಿದ್ದರು. ಅದರಂತೆ ತಹಶೀಲ್ದಾರ್ ಅವರು ಟ್ರೀ ಪಾರ್ಕ್ ಸ್ಮಶಾನ ಜಾಗಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಈ ವೇಳೆ ಅರಣ್ಯ ಇಲಾಖೆ, ಕಂದಾಯ ಇಲಾಖೆ ,ಗ್ರಾಮಸ್ಥರು ಜಂಟಿಯಾಗಿ ಸೇರಿ ಸಮಸ್ಯೆ ಬಗೆಹರಿಸುವ ಹಾದಿ ಕಂಡುಕೊಳ್ಳೋಣ ಎಂದು ಭರವಸೆ ನೀಡಿದ್ದಾರೆ. ಆದರೆ ಸ್ಮಶಾನದ ವಿಚಾರದಲ್ಲಿ ಯಾವುದೇ ಸ್ಪಂದನೆ ದೊರೆತಿಲ್ಲ. ತಹಶೀಲ್ದಾರ್ ಅವರು ಮೌನ ಮುರಿದು ಶಾಶ್ವತ ಪರಿಹಾರ ನೀಡದಿದ್ದಾರೆ ಉಗ್ರ ಹೋರಾಟ ನಡೆಸುವುದಾಗಿ ಡಿಎಸ್‌ಎಸ್ ಬೆಂಗಳೂರು ನಗರ ಜಿಲ್ಲಾ ಸಂಚಾಲಕ ಗೋವಿಂದ್ ಕುಮಾರ್ ನುಡಿದರು. ಬಿ ಎಸ್ ಪಿ ಪಣತ್ತೂರು ನಾರಾಯಣಸ್ವಾಮಿ, ಕೆ.ಮಂಜು, ಗಂಗಾಧರ್, ಬಳಗೆರೆ ಪಾಪಣ್ಣ, ಮುನ್ನೇಕೊಳ್ಳ ರಮೇಶ್, ಮೋಹನ್ ಗೌಡ, ಮುನಿರಾಜು, ಮುನೇಶ್, ಮಂಜಪ್ಪ, ಪಣತ್ತೂರು ದಿಣ್ಣೆಯ ಗ್ರಾಮಸ್ಥರ್‍ರು ಇದ್ದರೂ.

ಭಾರತೀಯ ಹೂಡಿಕೆದಾರರಿಗೆ 100 ಕೋಟಿ ನಷ್ಟ!

• ಉದಯವಾಹಿನಿ, ಬೆಂಗಳೂರು

ಅಮೆರಿಕದ ಷೇರು ಮಾರುಕಟ್ಟೆಯಲ್ಲಿ ಭಾರತೀಯರು ಹೂಡಿಕೆ ಮಾಡಲು ನೆರವಾಗುವ ಬೆಂಗಳೂರು ಮೂಲದ ಜಾಗತಿಕ ಹೂಡಿಕೆ ಫಿನ್‌ಟೆಕ್ ಪ್ಲಾಟ್‌ಫಾರ್ಮ್ ಸ್ಟಾಕಲ್‌ನಲ್ಲಿ ನಡೆದಿರುವ ?100 ಕೋಟಿಗೂ ಅಧಿಕ ಮೊತ್ತದ ಕಡಲದಾಟದ ಷೇರು ಹಗರಣವು ಭಾರತೀಯ ಹೂಡಿಕೆದಾರರಲ್ಲಿ ಭಾರಿ ಆತಂಕ ಮೂಡಿಸಿದೆ. ಸುಮಾರು 30 ಕ್ಕೂ ಹೆಚ್ಚು ಭಾರತೀಯ ಚಿಲ್ಲರೆ ಹೂಡಿಕೆದಾರರು ತಮ್ಮ ಅನುಮತಿಯಿಲ್ಲದೆಯೇ ತಮ್ಮ ಖಾತೆಯಲ್ಲಿದ್ದ ಆಪಲ್ ಮತ್ತು ಎನ್‌ವಿಡಿಯೋದಂತಹ ಬ್ಲೂ-ಚಿಪ್ ಯುಎಸ್ ಷೇರುಗಳನ್ನು ಮಾರಾಟ ಮಾಡಿ, ಆ ಹಣವನ್ನು ಚೀನಾದ ಸಣ್ಣ ಕಂಪನಿಯೊಂದರ ಷೇರುಗಳಿಗೆ ವರ್ಗಾಯಿಸಿ ನಷ್ಟ ತಂದಿಡಲಾಗಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ಅಕ್ಟೋಬರ್ 15 ರಂದು ಹೂಡಿಕೆದಾರರ ಒಪ್ಪಿಗೆ ಅಥವಾ ಯಾವುದೇ ಒಟಿಪಿ ಇಲ್ಲದೆಯೇ ಅವರ ಪೋರ್ಟ್‌ಫೋಲಿಯೊದಲ್ಲಿದ್ದ ಆಪಲ್, ಎನ್‌ವಿಡಿಯಾ, ಅಮೆಜಾನ್, ಟೆಸ್ಲಾ ಮತ್ತು ಆಲ್ಫಾಬೆಟ್ ಕಂಪನಿಗಳ ಅತ್ಯಂತ ಸುರಕ್ಷಿತ ಷೇರುಗಳನ್ನು ಕೇವಲ ಕೆಲವೇ ನಿಮಿಷಗಳಲ್ಲಿ ಮಾರಾಟ ಮಾಡಲಾಗಿದೆ. ಕೋಟ್ಯಂತರ ರೂಪಾಯಿ ಹಣವನ್ನು ಅಮೆರಿಕದ ಮಾರುಕಟ್ಟೆಯಲ್ಲಿ ಲಿಸ್ಟ್ ಆಗಿರುವ, ಹೆಚ್ಚು ವ್ಯಾಪಾರವಾಗದ ಜಿಬಾವೋ ಟೆಕ್ನಾಲಜಿ ಎಂಬ ಚೀನಾದ ಪೆನ್ನಿ ಸ್ಟಾಕ್ ಕಂಪನಿಗೆ ಹೂಡಿಕೆ ಮಾಡಲಾಗಿದೆ. ಅದರಲ್ಲೂ, ಹೂಡಿಕೆದಾರರ ಖಾತೆಯಿಂದ ಬಲವಂತವಾಗಿ ಚೀನಾ ಕಂಪನಿಯ ಷೇರು ಖರೀದಿಸಿದ ಕೆಲವೇ ದಿನಗಳಲ್ಲಿ, ಆ ಕಂಪನಿಯ ಷೇರು ಮೌಲ್ಯ ಶೇ. 60 ರಷ್ಟು ಪಾತಾಳಕ್ಕೆ ಕುಸಿತ ಕಂಡಿತು.

ಮಳೆ ಮಾದರಿಯಲ್ಲಿ ಬದಲಾವಣೆ ಕೃಷಿ ಕ್ಷೇತ್ರಕ್ಕೆ ವರದಾನ: ಅಧ್ಯಯನ

ಪಶ್ಚಿಮ ಘಟ್ಟಗಳ ಪಶ್ಚಿಮ ಇಳಿಜಾರುಗಳಲ್ಲಿ ಮಳೆ ಪ್ರಮಾಣ ಕಡಿಮೆಯಾಗಿದೆ ಎಂದು ಬೆಂಗಳೂರಿನ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಅಧ್ಯಯನ ತಿಳಿಸಿದೆ.

• ಉದಯವಾಹಿನಿ, ಬೆಂಗಳೂರು

1 ಸರಾಸರಿ ತಾಪಮಾನ 1.5 ಡಿಗ್ರಿ ಸೆಲ್ಸಿಯಸ್

2 1901-1950ರ ಅವಧಿಯಲ್ಲಿ 1,140 ಮಿ.ಮೀ.

3 1950-2008ರ ಅವಧಿಯಲ್ಲಿ 1,208 ಮಿ.ಮೀ

ಪಶ್ಚಿಮ ಘಟ್ಟಗಳಾದ್ಯಂತ ಮಳೆಯ ಮಾದರಿಯಲ್ಲಿ ಉಂಟಾಗಿರುವ ಬದಲಾವಣೆಗಳಿಂದ ಕರ್ನಾಟಕದ ಒಳನಾಡು ಪ್ರದೇಶಗಳಲ್ಲಿ ಮಳೆ ಪ್ರಮಾಣ ಹೆಚ್ಚಾಗಿದ್ದು, ಇದರಿಂದ ಕೃಷಿ ಮತ್ತು ತೋಟಗಾರಿಕೆಗೆ ಅನುಕೂಲವಾಗಿದೆ.

ಆದರೆ ಕರಾವಳಿ ಪ್ರದೇಶಗಳು ಹಾಗೂ ಪಶ್ಚಿಮ ಘಟ್ಟಗಳ ಪಶ್ಚಿಮ ಇಳಿಜಾರುಗಳಲ್ಲಿ ಮಳೆ ಪ್ರಮಾಣ ಕಡಿಮೆಯಾಗಿದೆ ಎಂದು ಬೆಂಗಳೂರಿನ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಅಧ್ಯಯನ ತಿಳಿಸಿದೆ.

ಕೃಷಿ ಹವಾಮಾನಶಾಸ್ತ್ರ ವಿಜ್ಞಾನಿ ಡಾ. ಎಂ.ಬಿ. ರಾಜೇಗೌಡ ಅವರು ಮಂಡಿಸಿದ ಈ ಅಧ್ಯಯನವು ರಾಜ್ಯದ ಹವಾಮಾನ ಮತ್ತು ಮಳೆಯ ಹಂಚಿಕೆಯಲ್ಲಿ ಆಗಿರುವ ಬದಲಾವಣೆಗಳು ಹಾಗೂ ಅವು ಕೃಷಿಯ ಮೇಲೆ ಬೀರಿರುವ ಪರಿಣಾಮಗಳನ್ನು ಪರಿಶೀಲಿಸಿದೆ.

1900ರಿಂದ 2020ರ ಅವಧಿಯಲ್ಲಿ ಕರ್ನಾಟಕದ ಸರಾಸರಿ ತಾಪಮಾನ 1.5 ಡಿಗ್ರಿ ಸೆಲ್ಸಿಯಸ್‌ವರೆಗೆ ಏರಿಕೆಯಾಗಿದೆ ಎಂದು ಅಧ್ಯಯನ ತಿಳಿಸಿದೆ. ರಾಜ್ಯದ ಸರಾಸರಿ ವಾರ್ಷಿಕ ಮಳೆಯ ಪ್ರಮಾಣವು 1901–1950ರ ಅವಧಿಯಲ್ಲಿ 1,140 ಮಿ.ಮೀ. ಇದ್ದದ್ದು, 1950–2008ರ ಅವಧಿಯಲ್ಲಿ 1,208 ಮಿ.ಮೀ.ಗೆ ಏರಿಕೆಯಾಗಿದೆ.

ಆದರೆ, ವಿವಿಧ ಪ್ರದೇಶಗಳಲ್ಲಿ ಮಳೆಯ ಪ್ರಮಾಣದ ಬದಲಾವಣೆ ವಿಭಿನ್ನವಾಗಿದೆ. ಕರಾವಳಿ ಪ್ರದೇಶದಲ್ಲಿ ವಾರ್ಷಿಕ ಮಳೆಯ ಪ್ರಮಾಣ 4,500 ಮಿ.ಮೀ.ನಿಂದ 4,000 ಮಿ.ಮೀ.ಗೆ ಇಳಿಕೆಯಾಗಿದೆ. ಪಶ್ಚಿಮ ಘಟ್ಟಗಳಲ್ಲಿ 4,010 ಮಿ.ಮೀ.ನಿಂದ 3,680 ಮಿ.ಮೀ. ಕಡಿಮೆಯಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ಉತ್ತರ ಒಳನಾಡು ಕರ್ನಾಟಕದಲ್ಲಿ ಮಳೆಯ ಪ್ರಮಾಣ 640 ಮಿ.ಮೀ.ನಿಂದ 740 ಮಿ.ಮೀ. ಹಾಗೂ ದಕ್ಷಿಣ ಒಳನಾಡು ಕರ್ನಾಟಕದಲ್ಲಿ 685 ಮಿ.ಮೀ.ನಿಂದ 836 ಮಿ.ಮೀ.ಗೆ ಹೆಚ್ಚಾಗಿದೆ.



> ಭೂಮಿ ಮತ್ತು ವಾತಾವರಣದ ತಾಪಮಾನ ಏರಿಕೆಯು ಮೋಡಗಳ ಸಾಂದ್ರತೆ ಹಾಗೂ ಚಲನೆಯ ಮೇಲೆ ಪರಿಣಾಮ ಬೀರುತ್ತದೆ. ಇದರಿಂದ ಮೋಡಗಳು ಪಶ್ಚಿಮ ಘಟ್ಟಗಳ ಪೂರ್ವ ಭಾಗದತ್ತ ಚಲಿಸಿ, ಒಳನಾಡು ಪ್ರದೇಶಗಳಲ್ಲಿ ಮಳೆ ಸುರಿಸಲು ಕಾರಣವಾಗುತ್ತವೆ ಎಂದು ತಿಳಿಸಿದೆ.–ಅಧ್ಯಯನ

ಮಳೆಯ ಹಂಚಿಕೆಯಲ್ಲಿನ ವ್ಯತ್ಯಾಸಕ್ಕೆ ಭೂಸ್ವರೂಪದ ಪ್ರಭಾವವೂ ಒಂದು ಕಾರಣ ಎಂದು ತಿಳಿಸಿದೆ. ಹಿಂದೂ ಮಹಾಸಾಗರದ ಮೇಲೆ ರೂಪುಗೊಳ್ಳುವ ಮುಂಗಾರು ಮೋಡಗಳು ಅರಬ್ಬಿ ಸಮುದ್ರದ ಮೂಲಕ ಪಶ್ಚಿಮ ಕರಾವಳಿಯನ್ನು ಪ್ರವೇಶಿಸುತ್ತವೆ. ಕೇಂದ್ರ ಸರ್ಕಾರ ರಚಿಸಿದ್ದ ಗಾಡ್ಗೀಳ್ ಮತ್ತು ಕಸ್ತೂರಿರಂಗನ್ ಸಮಿತಿಗಳು ಈ ಪ್ರದೇಶದ ಜೀವವೈವಿಧ್ಯ, ಪರಿಸರ ಸ್ಥಿತಿ ಹಾಗೂ ಅಭಿವೃದ್ಧಿ ಚಟುವಟಿಕೆಗಳನ್ನು ಪರಿಶೀಲಿಸಿದ್ದವು. ಆದರೆ, ಹವಾಮಾನ ಬದಲಾವಣೆ ಮತ್ತು ಅದು ಕರ್ನಾಟಕದ ಕೃಷಿಯ ಮೇಲೆ ಬೀರುವ ಪರಿಣಾಮಗಳ ಸಮಗ್ರ ಅಧ್ಯಯನ ಈ ಸಮಿತಿಗಳ ವ್ಯಾಪ್ತಿಗೆ ಒಳಪಟ್ಟಿರಲಿಲ್ಲ ಎಂದು ತಿಳಿಸಿದೆ. ಮಳೆ ಮಾದರಿಯಲ್ಲಿನ ಈ ಬದಲಾವಣೆ ಜತೆಗೆ ಕೃಷಿ ಭೂಮಿಯ ವಿಸ್ತರಣೆಯೂ ಹೆಚ್ಚಾಗಿದೆ.

ಕೃಷಿ ಚಟುವಟಿಕೆಗಳ ವಿಸ್ತರಣೆ

ಕೈಗಾರಿಕೀಕರಣ, ನಗರೀಕರಣ, ಕೃಷಿ ಚಟುವಟಿಕೆಗಳ ವಿಸ್ತರಣೆ, ರಸ್ತೆ ನಿರ್ಮಾಣ, ಸಣ್ಣ ಜಲವಿದ್ಯುತ್ ಯೋಜನೆಗಳು ಮತ್ತು ಪ್ರವಾಸೋದ್ಯಮ ಚಟುವಟಿಕೆಗಳು ಪಶ್ಚಿಮ ಘಟ್ಟಗಳ ಅರಣ್ಯ ಸಾಂದ್ರತೆಯ ಮೇಲೆ ಬೀರಿರುವ ಪರಿಣಾಮವನ್ನೂ ಅಧ್ಯಯನವು ಪ್ರಸ್ತಾಪಿಸಿದೆ.

1950ರ ದಶಕದಲ್ಲಿ ಸುಮಾರು 50–60 ಲಕ್ಷ ಹೆಕ್ಟೇರ್‌ಗಳಷ್ಟಿದ್ದ ಕೃಷಿ ಭೂಮಿ 2020ರ ವೇಳೆಗೆ 100–105 ಲಕ್ಷ ಹೆಕ್ಟೇರ್‌ಗೆ ಏರಿಕೆಯಾಗಿದೆ. ಕೃಷಿ ಉತ್ಪಾದನೆಯು 4–5 ಕೋಟಿ ಟನ್‌ಗಳಿಂದ 13?13.5 ಕೋಟಿ ಟನ್‌ಗಳಿಗೆ ಹೆಚ್ಚಾಗಿದೆ. ತೋಟಗಾರಿಕೆ ಬೆಳೆಗಳ ಸಾಗುವಳಿ ಪ್ರದೇಶ 22–24 ಲಕ್ಷ ಹೆಕ್ಟೇರ್‌ಗೆ ವಿಸ್ತರಿಸಿದ್ದು, ಉತ್ಪಾದನೆ 18–18.5 ಕೋಟಿ ಟನ್‌ಗಳಿಗೆ ತಲುಪಿದೆ.

2020–2035ರ ಅವಧಿಯಲ್ಲಿ ಕರ್ನಾಟಕದ ಸರಾಸರಿ ವಾರ್ಷಿಕ ಮಳೆಯ ಪ್ರಮಾಣ 1,235 ಮಿ.ಮೀ.ಗೆ ಏರಿಕೆಯಾಗುವ ಸಾಧ್ಯತೆಯಿದೆ ಕರಾವಳಿ ಪಶ್ಚಿಮ ಘಟ್ಟಗಳ ಪ್ರದೇಶಗಳಲ್ಲಿ ಮಳೆ ಮತ್ತಷ್ಟು ಒಳನಾಡು ಕರ್ನಾಟಕದಲ್ಲಿ ಮಳೆಯ ಪ್ರಮಾಣ ಹೆಚ್ಚಾಗುವ ಸಾಧ್ಯತೆಯಿದೆ.

50:70 ಕೋಟಾಕ್ಕೆ ಸಾಂವಿಧಾನಿಕ ಅಡ್ಡಿ ಯಾಕೆ? ಉದ್ಯಮಿಗಳ ಪ್ರತಿರೋಧ



• ಉದಯವಾಹಿನಿ, ಬೆಂಗಳೂರು

ಖಾಸಗಿ ವಲಯದ ಉದ್ಯೋಗಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಹೆಚ್ಚಿನ ಪಾಲನ್ನು ಪಡೆಯುವ ಕರ್ನಾಟಕ ಸರ್ಕಾರದ ಪ್ರಸ್ತಾವನೆಯು ಮತ್ತೊಂದು ಹಂತದ ಅನಿಶ್ಚಿತತೆಯನ್ನು ಎದುರಿಸುತ್ತಿದೆ. ಕಡ್ಡಾಯ ಉದ್ಯೋಗ ಕೋಟಾಗಳನ್ನು ಅನುಸರಿಸಬೇಕೆ ಅಥವಾ ನೇಮಕಾತಿಯಲ್ಲಿ ಕನ್ನಡಿಗರಿಗೆ ಆದ್ಯತೆ ನೀಡಬೇಕೆ ಎಂಬುದರ ಕುರಿತು ಆಡಳಿತದಲ್ಲಿ ಭಿನ್ನಾಭಿಪ್ರಾಯಗಳು ಹೊರಹೊಮ್ಮುತ್ತಿವೆ.

ಕನ್ನಡಿಗರು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೈಗಾರಿಕೆಗಳಿಂದ ಸೃಷ್ಟಿಯಾಗುವ ಉದ್ಯೋಗದಿಂದ ಪ್ರಯೋಜನ ಪಡೆಯುವುದನ್ನು ಖಚಿತ ಪಡಿಸಿಕೊಳ್ಳಲು ಶಾಸನವನ್ನು ಮೊದಲು ಜು. 2024ರಲ್ಲಿ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ಅಂಗೀಕರಿಸಿತು. ಉದ್ಯಮ ಪ್ರತಿನಿಧಿಗಳಿಂದ ಬಲವಾದ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಸರ್ಕಾರ ಶಾಸಕಾಂಗದಲ್ಲಿ ಪರಿಚಯಿಸುವ ಮೊದಲು ಅದನ್ನು ತಡೆಹಿಡಿಯುವಂತೆ ಮಾಡಿತು.

ಮೇ 20, 2026 ರ ಪರಿಷ್ಕೃತ ಕರಡುವಿನಲ್ಲಿ ನಿರ್ವಹಣಾ ಹುದ್ದೆಗಳಲ್ಲಿ ಶೇ. 50ರಷ್ಟು ಮತ್ತು ನಿರ್ವಹಣೇತರ ಉದ್ಯೋಗಗಳಲ್ಲಿ ಶೇ.70 ರಷ್ಟು ಮೀಸಲಾತಿ ನೀಡಲು ಪ್ರಸ್ತಾಪಿಸುತ್ತದೆ. ಇದು ವಾಸಿಸುವ ಸ್ಥಳದ ಅಗತ್ಯವನ್ನು 15 ರಿಂದ 10 ವರ್ಷಗಳಿಗೆ ಇಳಿಸುತ್ತದೆ ಮತ್ತು ಕನ್ನಡ ಪ್ರಾವೀಣ್ಯತೆಯ ಪರೀಕ್ಷೆಗೆ ಸ್ಪಷ್ಟ ಅವಶ್ಯಕತೆಯನ್ನು ತೆಗೆದುಹಾಕುತ್ತದೆ.

ಇದೇ ವೇಳೆ ನಿಗದಿತ ಕೋಟಾಗಳಿಂದ ವಿನಾಯಿತಿ ಪಡೆಯಲು ಸಂಸ್ಥೆಗಳಿಗೆ ಅವಕಾಶ ನೀಡುವ ನಿಬಂಧನೆಯನ್ನು ಅದು ಕೈಬಿಡುತ್ತದೆ ಮತ್ತು ಪ್ರಸ್ತಾವಿತ ಶಾಸನದ ವ್ಯಾಪ್ತಿಯನ್ನು ಎಲ್ಲಾ ಕೈಗಾರಿಕೆಗಳು, ಕಾರ್ಖಾನೆಗಳು ಮತ್ತು ಸಂಸ್ಥೆಗಳಿಗೆ ವಿಸ್ತರಿಸುತ್ತದೆ. ಎರಡೂ ಕರಡುಗಳ ಪ್ರತಿಯನ್ನು TNIE ಪರಿಶೀಲಿಸಿದೆ.

e-KYಇ ಮಾಡಿಸಲು ನವೆಂಬರ್ 10 ಕೊನೆ ದಿನವೆಂದು ಸರ್ಕಾರದ ಎಚ್ಚರಿಕೆ



• ಉದಯವಾಹಿನಿ, ಬೆಂಗಳೂರು

ರಾಜ್ಯದ ಪಡಿತರ ಚೀಟಿದಾರರಿಗೆ ಆಹಾರ, ನಾಗರಿಕ ಪೂರೈಕೆ ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆಯು ಕಟ್ಟುನಿಟ್ಟಿನ ಎಚ್ಚರಿಕೆಯನ್ನು ನೀಡಿದೆ. ರೇಷನ್ ಕಾರ್ಡ್ ಮರು ಇ-ಕೆವೈಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ನವೆಂಬರ್ 10, 2026 ಅಂತಿಮ ದಿನವಾಗಿದ್ದು, ಈ ಗಡುವನ್ನು ಮತ್ತೊಮ್ಮೆ ವಿಸ್ತರಿಸುವುದಿಲ್ಲ ಎಂದು ಆಹಾರ ಸಚಿವ ರಿಜ್ವಾನ್ ಅರ್ಷದ್ ಸ್ಪಷ್ಟಪಡಿಸಿದ್ದಾರೆ. ಅದರಲ್ಲೂ, ರಾಜ್ಯದಲ್ಲಿ ಇನ್ನೂ ಬರೋಬ್ಬರಿ 41.33 ಲಕ್ಷಕ್ಕೂ ಅಧಿಕ ಫಲಾನುಭವಿಗಳು ಇ-ಕೆವೈಸಿ ಮಾಡಿಸುವುದು ಬಾಕಿ ಉಳಿದಿದೆ. ಯಾಕಂದ್ರೆ, ನಿಗದಿತ ದಿನಾಂಕದೊಳಗೆ ಪ್ರಕ್ರಿಯೆ ಮುಗಿಸದಿದ್ದರೆ ಅಂತಹ ಸದಸ್ಯರ ಹೆಸರುಗಳು ರದ್ದಾಗುವ ಅಥವಾ ಪಡಿತರ ಅಮಾನತಿನಲ್ಲಿಡುವ ಸಾಧ್ಯತೆಯಿದೆ.

ನವೆಂಬರ್ 10 ರೊಳಗೆ ಇ-ಕೆವೈಸಿ ಪ್ರಕ್ರಿಯೆಯನ್ನು ಮುಗಿಸದಿದ್ದರೆ, ಅಂತಹ ಸದಸ್ಯರ ಹೆಸರನ್ನು ಪಡಿತರ ಚೀಟಿಯಿಂದ ತೆಗೆದುಹಾಕಲಾಗುತ್ತದೆ ಅಥವಾ ಅಮಾನತುಗೊಳಿಸಲಾಗುತ್ತದೆ. ಇದರ ನೇರ ಪರಿಣಾಮವಾಗಿ ಉಚಿತ ಅಕ್ಕಿ (ಪಡಿತರ) ನಿಲ್ಲುವುದಲ್ಲದೆ, ಸರ್ಕಾರದ ಮಹತ್ವಾಕಾಂಕ್ಷೆಯ ಗೃಹಲಕ್ಷ್ಮಿ ಯೋಜನೆ ಮತ್ತು ಅನ್ನಭಾಗ್ಯ ಯೋಜನೆಯ ನಗದು ವರ್ಗಾವಣೆ ಹಣವೂ ಕಡಿತಗೊಳ್ಳಲಿದೆ. ಏತನ್ಮಧ್ಯೆ, ಈಗಾಗಲೇ ಹಲವು ಬಾರಿ ಇ-ಕೆವೈಸಿ ಅವಧಿಯನ್ನು ವಿಸ್ತರಿಸಲಾಗಿದ್ದು, ನಕಲಿ ಮತ್ತು ಅರ್ಹರಲ್ಲದ ಕಾರ್ಡ್‌ಗಳನ್ನು ಪತ್ತೆ ಹಚ್ಚಲು ಈ ಬಾರಿ ನವೆಂಬರ್ 10 ರ ಗಡುವೇ ಅಂತಿಮ ಎಂದು ಇಲಾಖೆಯ ಅಧಿಕಾರಿಗಳು ಕಡಾಖಂಡಿತವಾಗಿ ತಿಳಿಸಿದ್ದಾರೆ.

ಬರ ಪರಿಹಾರ ಮೊತ್ತ 5 ಸಾವಿರಕ್ಕೆ ಏರಿಕೆ ಮಾಡಿದ ಡಿಕೆಶಿ

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ರಾಜ್ಯ ಸರ್ಕಾರವು ಬರದಿಂದ ಕಂಗಾಲಾಗಿರುವ ರಾಜ್ಯದ 57 ಲಕ್ಷ ರೈತರಿಗೆ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಭರ್ಜರಿ ಗಿಫ್ಟ್ ನೀಡಿದ್ದಾರೆ. ಈ ಹಿಂದೆ ಘೋಷಣೆ ಮಾಡಲಾಗಿದ್ದ 2,500 ರ ಮೊದಲ ಕಂತಿನ ಬರ ಪರಿಹಾರದ ಹಣವನ್ನು ಬಿಡುಗಡೆ ಮಾಡಲಾಗಿದ್ದು, ಇದರೊಂದಿಗೆ ಒಟ್ಟು ಕನಿಷ್ಠ ಪರಿಹಾರದ ಮೊತ್ತವನ್ನು 5,000 ಕ್ಕೆ ಹೆಚ್ಚಿಸಲಾಗಿದೆ.

ರಾಜ್ಯ ಸರ್ಕಾರವು ತನ್ನದೇ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಪ್ರತಿ ಅರ್ಹ ರೈತರಿಗೆ ಗರಿಷ್ಠ 2,500 ತಾತ್ಕಾಲಿಕ ಪರಿಹಾರ ನೀಡುವುದಾಗಿ ಘೋಷಿಸಿತ್ತು. ಕೇವಲ 2,500 ನೀಡಿದರೆ ಸಣ್ಣ ರೈತರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ ಎಂಬುದನ್ನು ಮನಗಂಡು, ರಾಜ್ಯ ಸರ್ಕಾರವು ತನ್ನ ಸ್ವಂತ ನಿಧಿಯಿಂದಲೇ ಹೆಚ್ಚುವರಿ ಮೊತ್ತವನ್ನು ಭರಿಸಿ ಕನಿಷ್ಠ ಒಟ್ಟು ಪರಿಹಾರದ ಮಿತಿಯನ್ನು ಬರೋಬ್ಬರಿ 5,000 ಕ್ಕೆ ದುಪ್ಪಟ್ಟುಗೊಳಿಸಿದೆ. ಅದರಂತೆ, ಯಾದಗಿರಿ ಜಿಲ್ಲೆಯ ರೈತರ ಖಾತೆಗೆ ಡಿಬಿಟಿ ಮೂಲಕ ನೇರವಾಗಿ ಹಣ ಜಮೆ ಮಾಡುವ ಮೂಲಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರಕ್ರಿಯೆಗೆ ಚಾಲನೆ ನೀಡಿದ್ದು, ದೀಪಾವಳಿ ಮುಗಿದ ಬಳಿಕ ಮತ್ತೊಂದು ಕಂತಿನಲ್ಲಿ ಬಾಕಿ 2,500 ಹಣವನ್ನ ಸರ್ಕಾರ ನೀಡಲಿದೆ.


ರಾಜ್ಯದಲ್ಲಿ 57 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದ್ದು, ಒಟ್ಟು 226 ತಾಲ್ಲೂಕುಗಳನ್ನು ಬರಪೀಡಿತ ಎಂದು ಕೇಂದ್ರದ ಮಾರ್ಗಸೂಚಿ ಪ್ರಕಾರ ಘೋಷಿಸಲಾಗಿದ್ದು, ಬರಗಾಲದಿಂದ ಅಂದಾಜು 62,000 ಕೋಟಿ ನಷ್ಟ ಸಂಭವಿಸಿದ್ದು, 22,400 ಕೋಟಿ ನೆರವು ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದರು.



> ಬೆಂಗಳೂರಿನ ವಿಧಾನಸೌಧದಲ್ಲಿ ನಡೆದ ಅಧಿಕೃತ ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ನಮ್ಮ ಇಷ್ಟು ವರ್ಷದ ಅನುಭವದಲ್ಲಿ, ಇಷ್ಟು ಬರಗಾಲ ಯಾವತ್ತೂ ಕಂಡಿರಲಿಲ್ಲ.

ಸಿಎಂ ಡಿಕೆಶಿ ಎದುರಲ್ಲೇ ಸರ್ಕಾರಿ ಶಾಲೆಗಳ ಅವ್ಯವಸ್ಥೆ ಬಿಚ್ಚಿಟ್ಟ ಪುತ್ರಿ ಐಶ್ವರ್ಯಾ ಹೆಗ್ಡೆ

• ಉದಯವಾಹಿನಿ, ಬೆಂಗಳೂರು



ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ 'ನಮ್ಮ ಶಾಲೆ ನಮ್ಮ ಜವಾಬ್ದಾರಿ' ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಎದುರಲ್ಲೇ ಅವರ ಪುತ್ರಿ ಐಶ್ವರ್ಯಾ ಹೆಗ್ಡೆ ರಾಜ್ಯದ ಸರ್ಕಾರಿ ಶಾಲೆಗಳ ಅವ್ಯವಸ್ಥೆಯ ಕುರಿತು ಮುಕ್ತವಾಗಿ ಚರ್ಚಿಸಿ, ಸರ್ಕಾರಕ್ಕೆ ನೇರವಾಗಿಯೇ ಚಾಟಿ ಬೀಸಿದ್ದಾರೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಪ್ರಮುಖರಾಗಿ ಭಾಗವಹಿಸಿದ್ದ ಅವರು, ಸರ್ಕಾರಿ ಶಾಲೆಗಳ ಸದ್ಯದ ಸ್ಥಿತಿಗತಿಯನ್ನು ಸುಧಾರಿಸಲು ಹಲವು ಮಹತ್ವದ ಸಲಹೆಗಳನ್ನು ನೀಡಿದ್ದಾರೆ.

ನ್ಯಾಷನಲ್ ಎಜುಕೇಷನ್ ಫೌಂಡೇಶನ್‌ನ ಟ್ರಸ್ಟಿ ಕಾರ್ಯದರ್ಶಿಯೂ ಆಗಿರುವ ಐಶ್ವರ್ಯಾ ಡಿಕೆಎಸ್ ಹೆಗ್ಡೆ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಮ್ಮುಖದಲ್ಲೇ ಸರ್ಕಾರದ ವ್ಯವಸ್ಥೆಯನ್ನು ನೇರವಾಗಿ ಪ್ರಶ್ನಿಸಿದರು.

ಶಿಕ್ಷಕರಲ್ಲಿ ದಕ್ಷತೆ ಮತ್ತು ಸಂವಹನದ ಕೊರತೆ: ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆಗಿಂತಲೂ ಹೆಚ್ಚಾಗಿ ಇರುವ ಶಿಕ್ಷಕರಲ್ಲಿ ದಕ್ಷತೆ ಮತ್ತು ಸಂವಹನ ಕೌಶಲ್ಯದ ಕೊರತೆಯಿದೆ. ಶಿಕ್ಷಕರಿಗೆ ಸರಿಯಾದ ಸಂವಹನ ತರಬೇತಿ ನೀಡಬೇಕು ಹಾಗೂ ಅವರಲ್ಲಿನ ಈ ಸಮಸ್ಯೆಯನ್ನು ನಿವಾರಿಸಬೇಕು.

ಉತ್ತರದಾಯಿತ್ವದ ಕೊರತೆ: ಸರ್ಕಾರಿ ಶಾಲೆಗಳ ಶಿಕ್ಷಕರಿಗೆ ಲಕ್ಷಕ್ಕೂ ಅಧಿಕ ಸಂಬಳ ನೀಡುತ್ತಿದ್ದರೂ ಐದು ದಿನ ಸರಿಯಾಗಿ ಶಾಲೆಗೆ ಬರುತ್ತಿರಲಿಲ್ಲ ಎಂದು ತಮ್ಮದೇ ಶಾಲೆಯೊಂದರ ಉದಾಹರಣೆ ನೀಡಿದ ಅವರು, ಶಿಕ್ಷಕರಲ್ಲಿ ಉತ್ತರದಾಯಿತ್ವ ಮತ್ತು ಮೇಲ್ವಿಚಾರಣೆ ನಡೆಸುವ ವ್ಯವಸ್ಥೆ ಗಟ್ಟಿಯಾಗಬೇಕು ಎಂದಿದ್ದಾರೆ. ನಾವು ನೀಡುವ ಸಂಪನ್ಮೂಲಗಳನ್ನು ಸರಿಯಾಗಿ ಬಳಸಲಾಗುತ್ತಿದೆಯೇ ಎಂದು ಪರಿಶೀಲಿಸುವ ಹಕ್ಕು ಹಾಗೂ ವ್ಯವಸ್ಥೆ ಇರಬೇಕು.

ದೇವಾಲಯದ ಪವಾಡ ಪ್ರಶ್ನಿಸಿದ RJ ಪೃಥ್ವಿ

• ಉದಯವಾಹಿನಿ, ಬೆಂಗಳೂರು

ಪುರಿ ಜಗನ್ನಾಥ ದೇವಾಲಯದ ವಿಚಾರವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ ಚರ್ಚೆಗೆ ಗ್ರಾಸವಾಗಿದ್ದ ಆರ್‌ಜೆ ಪೃಥ್ವಿ, ಇದೀಗ ಹಾಸನಾಂಬೆ ದೇವಾಲಯದ ಸಂಪ್ರದಾಯ ಮತ್ತು ಆಚರಣೆಗಳ ಬಗ್ಗೆಯೂ ಪ್ರಶ್ನೆಗಳನ್ನು ಎತ್ತಿದ್ದಾರೆ.

ಈ ಕುರಿತು ಅವರು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡಿರುವ ಪೋಸ್ಟ್ ಇದೀಗ ಗಮನ ಸೆಳೆದಿದೆ. ಹಾಸನಾಂಬೆ ದೇವಾಲಯದ ಬಾಗಿಲು ಮುಚ್ಚಿದ ಬಳಿಕವೂ ಒಂದು ವರ್ಷ ಕಳೆದರೂ ದೇವಾಲಯದಲ್ಲಿ ಹಚ್ಚಿಟ್ಟ ದೀಪ ಆರಿಲ್ಲ, ದೇವಿಗೆ ಅರ್ಪಿಸಿದ ಹಣ್ಣುಗಳು ಕೊಳೆತಿಲ್ಲ ಎಂಬ ನಂಬಿಕೆ ಭಕ್ತರಲ್ಲಿದೆ.

ಈ ಪವಾಡದಂತಹ ನಂಬಿಕೆಯ ಕುರಿತು ಆರ್‌ಜೆ ಪೃಥ್ವಿ ತಮ್ಮ ಪೋಸ್ಟ್‌ನಲ್ಲಿ ಪ್ರಶ್ನೆ ಎತ್ತಿದ್ದಾರೆ. ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ 'ಹಾಸನಾಂಬೆ ಅರ್ಚಕರು ಏನಂದರು?' ಎಂದು ಪ್ರಶ್ನಿಸಿರುವ ಅವರು, ಮತ್ತೊಂದೆಡೆ 'ಒಂದು ವರ್ಷ ಆದರೂ ದೀಪ ಆರಿಲ್ಲ, ಹಣ್ಣು ಕೊಳೆತಿಲ್ಲ ಎಂಬ ಹೇಳಿಕೆಯನ್ನು ಉಲ್ಲೇಖಿಸಿದ್ದಾರೆ. ಈ ಮೂಲಕ ಹಾಸನಾಂಬೆ ದೇವಾಲಯದ ಆಚರಣೆಗಳ ಹಿಂದಿನ ವಾಸ್ತವಾಂಶದ ಬಗ್ಗೆ ಕುತೂಹಲ ಹಾಗೂ ಚರ್ಚೆಗೆ ಕಾರಣರಾಗಿದ್ದಾರೆ.

ಪೊಲೀಸರ ಮುಂದೆಯೇ ಸುಳ್ಳು ಹೇಳಿ ಸಿಕ್ಕಿಬಿದ್ದ ಧನ್ವೀರ್ ಗೌಡ

• ಉದಯವಾಹಿನಿ, ಬೆಂಗಳೂರು

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಿಡಿಯೋ ವೈರಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿ ಪೊಲೀಸರ ತನಿಖೆ ವೇಳೆ ಸ್ಯಾಂಡಲ್‌ವುಡ್ ನಟ ಧನ್ವೀರ್ ಗೌಡ ಅವರಿಗೆ ಬಿಗ್ ಶಾಕ್ ಎದುರಾಗಿದೆ. ಜೈಲಿನ ಒಳಗಿನ ವಿಡಿಯೋಗಳನ್ನು ವೈರಲ್ ಮಾಡಿದ ಆರೋಪ ಹೊತ್ತಿರುವ ಧನ್ವೀರ್, ಸಾಕ್ಷ್ಯ ನಾಶಪಡಿಸಲು ತಮ್ಮ ಮೊಬೈಲ್ ಫೋನ್



ಅನ್ನು ರಿಸೆಟ್ ಮಾಡಿದ್ದರು ಎನ್ನಲಾದ ರಹಸ್ಯ ಈಗ ವಿಧಿವಿಜ್ಞಾನ ಪ್ರಯೋಗಾಲಯದ ವರದಿಯಿಂದ ಬಯಲಾಗಿದೆ. ಕಳೆದ ವರ್ಷ ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಒಳಗಿನ ಕೆಲವು ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ವೈರಲ್ ಆಗಿದ್ದವು. ಜೈಲಿನ ಹೈ-ಸೆಕ್ಯುರಿಟಿ ಬ್ಯಾರಾಕ್‌ಗಳಲ್ಲಿದ್ದ ಶಂಕಿತ ಉಗ್ರರು, ಅತ್ಯಾಚಾರ ಅಪರಾಧಿ ಉಮೇಶ್ ರೆಡ್ಡಿ ಸೇರಿದಂತೆ ಪ್ರಮುಖ ಕೈದಿಗಳು ಆಂಡ್ರಾಯ್ಡ್ ಮೊಬೈಲ್ ಫೋನ್‌ಗಳನ್ನು ಬಳಸುತ್ತಿರುವುದು ಹಾಗೂ ಅವರಿಗೆ ವಿಶೇಷ ಸೌಲಭ್ಯಗಳನ್ನು ನೀಡಲಾಗುತ್ತಿರುವುದು ವಿಡಿಯೋಗಳಲ್ಲಿ ಬಹಿರಂಗವಾಗಿತ್ತು. ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡಿದವರ ಹಿಂದೆ ಯಾರು ಇದ್ದಾರೆ ಎಂದು ಪತ್ತೆಹಚ್ಚಲು ಸಿಸಿಬಿ ಪೊಲೀಸರು ತನಿಖೆ ಕೈಗೆತ್ತಿಕೊಂಡಿದ್ದರು. ಈ ತನಿಖೆಯ ವೇಳೆ, ನಟ ದರ್ಶನ್ ಅವರ ಆಪ್ತರಾಗಿದ್ದ ನಟ ಧನ್ವೀರ್ ಗೌಡ ಅವರ ಮೊಬೈಲ್ ಮೂಲಕವೇ ಈ ವಿಡಿಯೋಗಳು ಮತ್ತು ದತ್ತಾಂಶಗಳು ಹರಿದಾಡಿವೆ.

ಜನಪ್ರಿಯ ಶಾಸಕರು ಹಾಗೂ ಯುವ ನಾಯಕರು ವಿಜಯೇಂದ್ರ ಯಡಿಯೂರಪ್ಪ ಅವರಿಗೆ ಜನ್ಮದಿನದ ಶುಭಾಶಯಗಳು



• ಉದಯವಾಹಿನಿ, ಬೆಂಗಳೂರು

ರಾಜ್ಯ ಬಿಜೆಪಿ ಅಧ್ಯಕ್ಷರು ಶಿಕಾರಿಪುರ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ ವಿಜಯೇಂದ್ರ ಯಡಿಯೂರಪ್ಪ ಅವರನ್ನು ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡರು ಹಾಗೂ ಜನಪ್ರಿಯ ನಾಯಕರಾದ ಕೆ.ಉಮೇಶ್ ಶೆಟ್ಟಿ ಅವರು ಹಾಗೂ ಗೋವಿಂದರಾಜ ನಗರ ಎಲ್ಲಾ ಮುಖಂಡರೊಂದಿಗೆ ಹುಟ್ಟು ಹಬ್ಬದ ಶುಭಾಶಯಗಳನ್ನು ಕೋರಲಾಯಿತು.

ಮಂಡಲ ಅಧ್ಯಕ್ಷರಾದ ಎನ್.ಬಿ ಮಂಜುನಾಥ್, ಮಾಜಿ ಬಿಬಿಎಂಪಿ ಸದಸ್ಯರಾದ ಶ್ರೀ ಎಂ ರಾಮಪ್ಪ, ಶ್ರೀಮತಿ ರಾಜೇಶ್ವರಿ ಬೆಳಗೋಡು ಪಕ್ಷದ ಮುಖಂಡರು ಎಸ್ ರಾಜು, ಕ್ರಾಂತಿರಾಜು, ದೊಡ್ಡವೀರಯ್ಯ, ಹೇಮಂತ್ ಕುಮಾರ್, ಮಂಜುನಾಥ್, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಎಲ್ಲಾ ವಾರ್ಡ್ ಅಧ್ಯಕ್ಷರುಗಳು ಪದಾಧಿಕಾರಿಗಳು ಹಾಗೂ ಪಕ್ಷದ ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು.

ಐದು ಗ್ಯಾರಂಟಿಗಳಿಗಾಗಿ ರೂ. 20 ಸಾವಿರ ಕೋಟಿ ವೆಚ್ಚ!

ಮೃತಪಟ್ಟ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಹಣ ಜಮೆಯಾಗುವುದನ್ನು ತಡೆಯಲು ಈ ಕ್ರಮ ಕೈಗೊಳ್ಳಲಾಗುತ್ತಿದೆ

• ಉದಯವಾಹಿನಿ, ಬೆಂಗಳೂರು

1 ಮನೆ ಮನೆಗೆ ಭೇಟಿ ನೀಡಿ ಮರು-ಪರಿಶೀಲನೆ

2 ಬಯೋಮೆಟ್ರಿಕ್ ಅಥವಾ ಮುಖ ಗುರುತಿಸುವಿಕೆ

3 ಅಂದಾಜು 20 ಕೋಟಿ ರೂಪಾಯಿ ವೆಚ್ಚವಾಗಲಿದ್ದು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಐದು ಗ್ಯಾರಂಟಿ ಯೋಜನೆಗಳಿಗಾಗಿ ಇಲ್ಲಿಯವರೆಗೆ ಒಟ್ಟು 20,632 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಜಿ. ಕೃಷ್ಣಪ್ಪ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಗೃಹ ಲಕ್ಷ್ಮಿ' ಯೋಜನೆಯ ಫಲಾನುಭವಿಗಳ ಅರ್ಹತೆಯನ್ನು ಪರಿಶೀಲಿಸಲು ಶೀಘ್ರದಲ್ಲೇ ಮನೆ ಮನೆಗೆ ಭೇಟಿ ನೀಡಿ ಮರು-ಪರಿಶೀಲನೆ ನಡೆಸಲಿದೆ. ಅನರ್ಹರನ್ನು ಪಟ್ಟಿಯಿಂದ ಕೈಬಿಡಲು ಮತ್ತು ಮೃತಪಟ್ಟ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಹಣ ಜಮೆಯಾಗುವುದನ್ನು ತಡೆಯಲು ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅವರು ಹೇಳಿದರು.

ಈ ಮರು-ಪರಿಶೀಲನೆಯ ಸಂದರ್ಭದಲ್ಲಿ ಫಲಾನುಭವಿಗಳ ಬಯೋಮೆಟ್ರಿಕ್ ಅಥವಾ ಮುಖ ಗುರುತಿಸುವಿಕೆ ಪ್ರಕ್ರಿಯೆಯನ್ನು ನಡೆಸಲಾಗುವುದು. ಈ ಕಾರ್ಯಕ್ಕೆ ಅಂದಾಜು 20 ಕೋಟಿ ರೂಪಾಯಿ ವೆಚ್ಚವಾಗಲಿದ್ದು, ಇದಕ್ಕೆ ಸಂಬಂಧಿಸಿದ ಪ್ರಸ್ತಾವನೆಯು ಸಚಿವ ಸಂಪುಟದ ಅನುಮೋದನೆಗಾಗಿ ಕಾಯುತ್ತಿದೆ ಎಂದು ಕೃಷ್ಣಪ್ಪ ತಿಳಿಸಿದರು. 'ಡೈರೆಕ್ಟರೇಟ್ ಆಫ್ ಎಲೆಕ್ಟ್ರಾನಿಕ್ ಡೆಲಿವರಿ ಆಫ್ ಸಿಟಿಜನ್ ಸರ್ವೀಸಸ್'



> ವ್ಯಾಪ್ತಿಯಲ್ಲಿ 'ಗೃಹ ಲಕ್ಷ್ಮಿ' ಯೋಜನೆಯ 18,522 ಫಲಾನುಭವಿಗಳು ಮೃತಪಟ್ಟಿದ್ದು, ಅವರ ಖಾತೆಗಳಿಗೆ 7.18 ಕೋಟಿ ರೂಪಾಯಿ ವರ್ಗಾವಣೆಯಾಗಿದೆ. ಇಂತಹ ಖಾತೆಗಳಿಂದ 9.22 ಲಕ್ಷ ರೂಪಾಯಿಗಳನ್ನು ವಾಪಸ್ ಪಡೆಯಲಾಗಿದೆ ಎಂದು ಮಾಹಿತಿ ನೀಡಿದರು. –ಕೃಷ್ಣಪ್ಪ

ಅಭಿವೃದ್ಧಿಪಡಿಸಿದ ವೆಬ್ ಅಪ್ಲಿಕೇಶನ್ ಅಥವಾ ಮೊಬೈಲ್ ಅಪ್ಲಿಕೇಶನ್ ಬಳಸಿ ಈ ಮರು-ಪರಿಶೀಲನೆ ನಡೆಸಲು ಉದ್ದೇಶಿಸಿದೆ. ಮನೆ ಮನೆಗೆ ಭೇಟಿ ನೀಡುವ ಸಮೀಕ್ಷೆಯ ಜೊತೆಗೆ, ಗ್ರಾಮ ಒನ್, ಕರ್ನಾಟಕ ಒನ್, ಬೆಂಗಳೂರು ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳ ಮೂಲಕವೂ ಈ ಪರಿಶೀಲನೆ ನಡೆಯಲಿದೆ ಎಂದು ಅವರು ವಿವರಿಸಿದರು.

ಪ್ರಗತಿ ಸಾಧಿಸಿದೆ

ರಾಜ್ಯಾದ್ಯಂತ, 2023ರ ಜೂನ್‌ನಿಂದ ಈ ಐದು ಯೋಜನೆಗಳಿಗಾಗಿ ಒಟ್ಟು 1,54,861.58 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಗೃಹ ಜ್ಯೋತಿ' ಯೋಜನೆಯ ಮರು-ಪರಿಶೀಲನಾ ಪ್ರಕ್ರಿಯೆಯಲ್ಲಿ ಬೆಸ್ಕಾಂ ಶೇಕಡಾ 99.93ರಷ್ಟು ಪ್ರಗತಿಯನ್ನು ಸಾಧಿಸಿದೆ ಎಂದು ಸಮಿತಿ ತಿಳಿಸಿದೆ.

ಐದು ಗ್ಯಾರಂಟಿ ಯೋಜನೆಗಳ ಪೈಕಿ, 'ಗೃಹ ಜ್ಯೋತಿ' ಯೋಜನೆಗೆ ಅತಿ ಹೆಚ್ಚು ಅಂದರೆ 9,625 ಕೋಟಿ ರೂಪಾಯಿ ವೆಚ್ಚವಾಗಿದ್ದು, ಇದರಿಂದ 38.91 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳು ಪ್ರಯೋಜನ ಪಡೆದಿದ್ದಾರೆ. ನಂತರದ ಸ್ಥಾನದಲ್ಲಿ 'ಗೃಹ ಲಕ್ಷ್ಮಿ' ಯೋಜನೆ ಇದ್ದು, ಇದಕ್ಕಾಗಿ 5,309 ಕೋಟಿ ರೂಪಾಯಿ ವೆಚ್ಚವಾಗಿದೆ ಮತ್ತು 8,95,132ಕ್ಕೂ ಹೆಚ್ಚು ಫಲಾನುಭವಿಗಳು ಇದರ ಲಾಭ ಪಡೆದಿದ್ದಾರೆ. 'ಶಕ್ತಿ' ಯೋಜನೆಗಾಗಿ 3,963 ಕೋಟಿ ರೂಪಾಯಿ ವೆಚ್ಚವಾಗಿದ್ದು (ಇದರಡಿ 258.78 ಕೋಟಿ ಬಸ್ ಪ್ರಯಾಣಗಳು ನಡೆದಿವೆ) ಹಾಗೂ 'ಅನ್ನ ಭಾಗ್ಯ' ಯೋಜನೆಗಾಗಿ 1,672 ಕೋಟಿ ರೂಪಾಯಿ ವೆಚ್ಚವಾಗಿದ್ದು, 20,119 ಫಲಾನುಭವಿಗಳು ಇದರ ಪ್ರಯೋಜನ ಪಡೆದಿದ್ದಾರೆ.'ಬಿಎ ವ್ಯಾಪ್ತಿಯಲ್ಲಿರುವ 1,060 ನ್ಯಾಯಬೆಲೆ ಅಂಗಡಿಗಳು 5,48,038 ಪಡಿತರ ಚೀಟಿದಾರರಿಗೆ ಸೇವೆ ಒದಗಿಸುತ್ತಿದ್ದು, ಇದರ ಮೂಲಕ 18,83,817 ಫಲಾನುಭವಿಗಳು ಪ್ರಯೋಜನ ಪಡೆಯುತ್ತಿದ್ದಾರೆ. ನವೆಂಬರ್ 10ರವರೆಗೆ ಈ ಕಾರ್ಯ ಮುಂದುವರಿಯಲಿದೆ. ಆಹಾರ ಧಾನ್ಯಗಳನ್ನು ಸಂಗ್ರಹಿಸಿಡುವ 25ಕ್ಕೂ ಹೆಚ್ಚು ಗೋದಾಮುಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗುವುದು. ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಐರಿಸ್ ಸ್ಕ್ಯಾನರ್‌ಗಳನ್ನು ಅಳವಡಿಸಲಾಗುತ್ತದೆ.

ಅಕ್ರಮವಾಗಿ ಪಡಿತರ ಅಕ್ಕಿ ಸಾಗಾಟ: ವ್ಯಕ್ತಿ ಬಂಧನ

• ಉದಯವಾಹಿನಿ, ಗುಂಡ್ಲುಪೇಟೆ



ಉದಯವಾಹಿನಿ ಚಿತ್ರ

ಅಕ್ರಮವಾಗಿ ಪಡಿತರ ಅಕ್ಕಿ ಸಾಗಣೆ ಮಾಡುತ್ತಿದ್ದ ವ್ಯಕ್ತಿಯನ್ನು ತೆರಕಣಾಂಬಿ ಠಾಣೆ ಪೊಲೀಸರು ಮಾಲು ಸಮೇತ ಬಂಧಿಸಿರುವ ಘಟನೆ ತಾಲೂಕಿನ ಕಗ್ಗಳದಹುಂಡಿ ಗೇಟ್ ಸಮೀಪ ನಡೆದಿದೆ.

ಗುಂಡ್ಲುಪೇಟೆ ಪಟ್ಟಣದ ಸಿಕಂದರ್ ಅಹಮದ್ (40) ಬಂಧಿತ ಆರೋಪಿಯಾಗಿದ್ದು, ಕೆಎ-10-5607 ನೋಂದಣಿ ಸಂಖ್ಯೆಯ ಮಹೀಂದ್ರ ಮ್ಯಾಕ್ಸಿಮ್ ಗೂಡ್ಸ್ ವಾಹನದಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಸಾಗಿಸುತ್ತಿದ್ದ ಎನ್ನಲಾಗಿದೆ. ಖಚಿತ ಮಾಹಿತಿ ಮೇರೆಗೆ ತೆರಕಣಾಂಬಿ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕ ಕೆ.ಎಂ.ಮಹೇಶ್ ನೇತೃತ್ವದ ತಂಡ ಕಗ್ಗಳದಹುಂಡಿ ಗೇಟ್ ಬಳಿ ವಾಹನವನ್ನು ತಡೆದು ಪರಿಶೀಲನೆ ನಡೆಸಿದೆ. ಈ ವೇಳೆ ಸುಮಾರು 15 ಸಾವಿರ ರೂ. ಮೌಲ್ಯದ 1,000 ಕೆ.ಜಿ. (20 ಮೂಟೆ) ಪಡಿತರ ಅಕ್ಕಿ ಪತ್ತೆಯಾಗಿದ್ದು, ಅಕ್ಕಿ ಹಾಗೂ ವಾಹನವನ್ನು ವಶಕ್ಕೆ ಪಡೆದು ಆರೋಪಿಯನ್ನು ಬಂಧಿಸಲಾಗಿದೆ. ಘಟನೆ ಸಂಬಂಧ ಆಹಾರ ನಿರೀಕ್ಷಕ ಎಂ.ಪಿ.ಅರವಿಂದ್ ನೀಡಿದ ದೂರಿನ ಮೇರೆಗೆ ತೆರಕಣಾಂಬಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 101/2026ರ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಛಲವಾದಿ ನಾರಾಯಣಸ್ವಾಮಿ ವಿರುದ್ಧ ಎಫ್ಐಆರ್

• ಉದಯವಾಹಿನಿ, ಕೋಲಾರ


ಉದಯವಾಹಿನಿ ಚಿತ್ರ

ಕಾಂಗ್ರೆಸ್ಸಿಗರನ್ನು ತುಂಡು ತುಂಡು ಮಾಡಿ ಅರಬ್ಬಿಸಮುದ್ರಕ್ಕೆ ಎಸೆಯುವುದಾಗಿ ಹೇಳಿದ್ದ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವಿರುದ್ಧ ಕೋಲಾರ ನಗರ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ. ಅವರ ಮೇಲೆ ಪ್ರಕರಣ ದಾಖಲಿಸಲು ಸ್ಥಳೀಯ ನ್ಯಾಯಾಲಯದಿಂದ ಅನುಮತಿ ಪಡೆದು, ಪೊಲೀಸರು ಈ ಕ್ರಮವಹಿಸಿದ್ದಾರೆ. ಭಾರತೀಯ ನ್ಯಾಯ ಸಂಹಿತೆ (ಬಿಎನ್ಎಸ್) ಸೆಕ್ಷನ್ 351 (2) (ಕ್ರಿಮಿನಲ್ ಬೆದರಿಕೆ), ಸೆಕ್ಷನ್ 352 (ಶಾಂತಿ ಕದಡಲು ಉದ್ದೇಶಪೂರ್ವಕ ಪ್ರಚೋದನೆ) ಹಾಗೂ ಸೆಕ್ಷನ್ 353 (1)(ಬಿ) (ಸಾರ್ವಜನಿಕರಲ್ಲಿ ಭಯ ಹುಟ್ಟಿಸುವ ಹೇಳಿಕೆ) ಅಡಿ ಪ್ರಕರಣ ದಾಖಲಿಸಲಾಗಿದೆ. 'ಕಾಂಗ್ರೆಸ್ ಮುಖಂಡ ಬೆಳಗಾನಹಳ್ಳಿ ಮುನಿವೆಂಕಟಪ್ಪ ನೀಡಿದ ದೂರಿನ ಆಧಾರದಲ್ಲಿ ಛಲವಾದಿ ನಾರಾಯಣಸ್ವಾಮಿ ಅವರ ಮೇಲೆ ಎಫ್ಐಆರ್ ದಾಖಲಿಸಿದ್ದೇವೆ. ನೋಟಿಸ್ ನೀಡಿ ಅವರನ್ನು ವಿಚಾರಣೆಗೆ ಕರೆಯುತ್ತೇವೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕನ್ನಿಕಾ ಸಿಕ್ರಿವಾಲ್ 'ತಿಳಿಸಿದರು. ಕೋಲಾರದಲ್ಲಿ ಮಂಗಳವಾರ ಬಿಜೆಪಿ ಹಮ್ಮಿಕೊಂಡಿದ್ದ 'ಪ್ರಜಾಪ್ರಭುತ್ವ ಉಳಿಸಿ, ಅರಾಜಕತೆ ಅಳಿಸಿ' ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ಛಲವಾದಿ ನಾರಾಯಣಸ್ವಾಮಿ, 'ಕಾಂಗ್ರೆಸ್ ಪಕ್ಷದವರು ದೇಶದಲ್ಲಿ ಅರಾಜಕತೆ ಸೃಷ್ಟಿಸುವುದನ್ನು ಮೊದಲು ನಿಲ್ಲಿಸಬೇಕು.

ಉದಯ ವಾಹಿನಿ

ಪ್ರಾದೇಶಿಕ

ಶುಕ್ರವಾರ 06 ನವೆಂಬರ್ 2026 | 03

ಮಿನಿ ನ್ಯೂಸ್

ಡಿಸೆಂಬರ್ ಅಂತ್ಯಕ್ಕೆ ಪೂರ್ಣಗೊಳಿಸಿ: ನರೇಂದ್ರ ಸೂಚನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ತುಮಕೂರು

'ಬಾಕಿಯಾಗಿರುವ ಗಂಗಾ ಕಲ್ಯಾಣ ಯೋಜನೆಯ ಕೊಳವೆಬಾವಿಗಳನ್ನು ಡಿಸೆಂಬರ್ ಅಂತ್ಯದೊಳಗೆ ಕೊರೆಯಿಸಿ, ವಿದ್ಯುತ್ ಸಂಪರ್ಕ ಒದಗಿಸಿ, ಫಲಾನುಭವಿಗಳಿಗೆ ಹಸ್ತಾಂತರಿಸಲು ಕ್ರಮವಹಿಸಬೇಕು' ಎಂದು ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಸಿ.ನರೇಂದ್ರ, ಅಧಿಕಾರಿಗಳಿಗೆ ಸೂಚಿಸಿದರು. ನಗರದ ಜಿಲ್ಲಾ ಪಂಚಾಯಿತಿಯಲ್ಲಿ ನಡೆದ ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಬೆಂಗಳೂರು ವಿಭಾಗೀಯ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, 'ಕೃಷಿಗೆ ನೀರು ಒದಗಿಸಿದರೆ ಜನರು ನಿಗಮವನ್ನು ದೇವರಂತೆ ಭಾವಿಸುತ್ತಾರೆ. ಹಾಗಾಗಿ, ಬಡವರ ಕೆಲಸವನ್ನು ತ್ವರಿತವಾಗಿ ಮಾಡಿಕೊಡಬೇಕು. ಅಧಿಕಾರಿಗಳು ಏಜೆನ್ಸಿಯೊಂದಿಗೆ ನಿರಂತರ ಸಂಪರ್ಕ ಹೊಂದಿ ಕೊಳವೆಬಾವಿ ಕೊರೆಸಲು ಕ್ರಮ ಕೈಗೊಳ್ಳಬೇಕು. ಅದೇರೀತಿ, ಬೆಸ್ಕಾಂ ಅಧಿಕಾರಿಗಳ ಜತೆಗೂಡಿ ವಿದ್ಯುತ್ ಸಂಪರ್ಕ ನೀಡಿ ಪಂಪು, ಮೋಟಾರ್ ಒದಗಿಸಬೇಕು' ಎಂದು ನಿರ್ದೇಶನ ನೀಡಿದರು. 'ಗಂಗಾಕಲ್ಯಾಣ ಮತ್ತು ಇನ್ನಿತರ ಯೋಜನೆಗಳಲ್ಲಿ ಶಾಸಕರಿಗೆ ಶೇ 80, ಅಧಿಕಾರಿಗಳು ಮತ್ತು ನಿಗಮದ ಅಧ್ಯಕ್ಷರಿಗೆ ತಲಾ ಶೇ 10ರಷ್ಟು ಫಲಾನುಭವಿಗಳ ಆಯ್ಕೆಗೆ ಅವಕಾಶವಿದೆ.

50 ಹಳ್ಳಿಗಳಲ್ಲಿ ಬಸ್ ತಂಗುದಾಣ ನಿರ್ಮಿಸಿ

ಮೈಸೂರು ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಗೆ ತೆರಳುವ ಮಾರ್ಗದಲ್ಲಿ ಸಚಿವ ಖಂಡ್ರೆ ಸೂಚನೆ ಕಾರಿನಲ್ಲೇ ಸಿಇಒ ಜೊತೆ ಸಭೆ..

• ಉದಯವಾಹಿನಿ, ಮಂಡ್ಯ

1 ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಹಲವು ಸೂಚನೆ

2 ಕೊಳವೆಬಾವಿ ಮರುಪೂರಣ ಗುಂಡಿ ಹಾಗೂ ಕೃಷಿ ಹೊಂಡ ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು.

3 ಮಹಿಳಾ ಸ್ವಸಹಾಯ ಗುಂಪುಗಳಿಗೆ ನಿರ್ವಹಣೆ ಜವಾಬ್ದಾರಿ ನೀಡಬೇಕು



ಉದಯವಾಹಿನಿ ಚಿತ್ರ

ಜಿಲ್ಲೆಯಲ್ಲಿ ಹೆಚ್ಚು ಜನ ಸಂಚಾರವಿರುವ 50 ಗ್ರಾಮಗಳನ್ನು ಗುರುತಿಸಿ, ವಿಬಿಜಿ ರಾಮ್ ಜಿ ಯೋಜನೆಯಡಿ ಸುಸಜ್ಜಿತ ಬಸ್ ಪ್ರಯಾಣಿಕರ ತಂಗುದಾಣ ನಿರ್ಮಿಸಬೇಕು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ, ಸೂಚಿಸಿದರು.

ಮೈಸೂರು ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಗೆ ತೆರಳುವ ಮಾರ್ಗದಲ್ಲಿ ಮಂಡ್ಯ ಜಿಲ್ಲೆಯ ಗಡಿಯಿಂದ ಮೈಸೂರು ಗಡಿಯವರೆಗೆ ಕಾರಿನಲ್ಲೇ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್. ನಂದಿನಿ ಅವರೊಂದಿಗೆ ಚರ್ಚೆ ನಡೆಸಿದ ಸಚಿವರು.

ಜಿಲ್ಲೆಯ ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಹಲವು ಸೂಚನೆಗಳನ್ನು ನೀಡಿದರು.

ಮಹಿಳೆಯರಿಗೆ ಜೀವನೋಪಾಯ ಕಲ್ಪಿಸುತ್ತಿರುವ 'ಅಕ್ಕ ಕೆಫೆ'ಗಳು ಲಾಭದಾಯಕವಾಗಿರುವುದರಿಂದ, ಹೆಚ್ಚಿನ ಸಂಖ್ಯೆಯಲ್ಲಿ ಇವುಗಳನ್ನು ಆರಂಭಿಸಿ ಮಹಿಳಾ ಸ್ವಸಹಾಯ ಗುಂಪುಗಳಿಗೆ ನಿರ್ವಹಣೆ ಜವಾಬ್ದಾರಿ ನೀಡಬೇಕು ಎಂದು ಸೂಚಿಸಿದರು.

ಗ್ರಾಮೀಣಾಭಿವೃದ್ಧಿ ಇಲಾಖೆಯ ಅನುದಾನ ಹಾಗೂ ತೆರಿಗೆ ರೂಪದಲ್ಲಿ ಸಂಗ್ರಹವಾಗುವ ಹಣ ಸೇರಿದಂತೆ ಎಲ್ಲ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ವಿಬಿಜಿ ರಾಮ್ ಜಿ ಯೋಜನೆಯಡಿ ಅವಕಾಶವಿರುವ 375 ಕಾಮಗಾರಿಗಳನ್ನು ಕೈಗೆತ್ತಿಕೊಂಡು ಗ್ರಾಮಗಳಲ್ಲಿ ಶಾಶ್ವತ ಹಾಗೂ ಉಪಯುಕ್ತ ಆಸ್ತಿಗಳನ್ನು ಸೃಷ್ಟಿಸಬೇಕು ಎಂದರು.

ನೀರಿನ ಸಮಸ್ಯೆ ಪರಿಹರಿಸಿ: ವಿಬಿಜಿ ರಾಮ್ ಜಿ ಯೋಜನೆಯಡಿ ಗ್ರಾಮಸಭೆ ನಡೆಸಿ ಅರ್ಹರಿಗೆ ದನದ ಕೊಟ್ಟಿಗೆ, ಕುರಿ- ಮೇಕೆ ಕೊಟ್ಟಿಗೆ, ಕೊಳವೆಬಾವಿ ಮರುಪೂರಣ ಗುಂಡಿ ಹಾಗೂ ಕೃಷಿ ಹೊಂಡ ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು. ಎಲ್‌ನೊ ಪ್ರಭಾವದಿಂದ ಮಳೆ ಕೊರತೆಯಾಗಿರುವ ಹಿನ್ನೆಲೆಯಲ್ಲಿ ಮುಂದಿನ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ. ಹೀಗಾಗಿ ಜಲ ಬಜೆಟ್ ಸಿದ್ದಪಡಿಸಿ.

ಸಮಸ್ಯೆ ಎದುರಾಗಬಹುದಾದ ಗ್ರಾಮಗಳನ್ನು ಗುರುತಿಸಿ ಮುನ್ನೆಚ್ಚರಿಕೆ ವಹಿಸಬೇಕು. ಜಲಮೂಲಗಳನ್ನೂ ಗುರುತಿಸಬೇಕು ಎಂದರು. ಜಿಲ್ಲಾ ಪಂಚಾಯಿತಿ ಸಿಇಒ ವಾರದಲ್ಲಿ ಎರಡು ದಿನ ಕನಿಷ್ಠ ನಾಲ್ಕು ಗ್ರಾಮಗಳಿಗೆ ಭೇಟಿ ನೀಡಿ ರಸ್ತೆ, ನೀರು, ಬೀದಿದೀಪ, ಇ-ಸ್ವತ್ತು. ನಕ್ಷೆ ಮಂಜೂರಾತಿ, ನೈರ್ಮಲ್ಯ, ಕೆರೆ ಅಭಿವೃದ್ಧಿ ಹಾಗೂ ಯೋಜನೆಗಳ ಪ್ರಗತಿ ಕುರಿತು ಸಾರ್ವಜನಿಕರ ಅಹವಾಲು ಆಲಿಸಿ ಸ್ಥಳದಲ್ಲೇ ಪರಿಹಾರ ಕಲ್ಪಿಸಬೇಕು. ಯೋಜನೆಯಡಿ ಕೆಲಸ ಮಾಡಿದ ಅಕುಶಲ ಕಾರ್ಮಿಕರಿಗೆ 15 ದಿನಗಳೊಳಗೆ ಕೂಲಿ ಪಾವತಿಯಾಗುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಸೂಚಿಸಿದರು.

ನಕಲಿ ಇ-ಸ್ವತ್ತು ರದ್ದುಪಡಿಸಿ

ಇಂಡವಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅಕ್ರಮ ಬಡಾವಣೆಗಳಿಗೆ ಅವಕಾಶ ನೀಡಿ 1,881 ಅಕ್ರಮ ಇ ಸ್ವತ್ತುಗಳನ್ನು ವಿತರಿಸಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ, ನಕಲಿ ದಾಖಲೆ ಆಧರಿಸಿ ಯಾವುದೇ ಪಂಚಾಯಿತಿಯಲ್ಲಿ ಇ-ಸ್ವತ್ತು ನೀಡಿದ್ದರೆ ಅವುಗಳನ್ನು ರದ್ದುಪಡಿಸಬೇಕು. ಇ-ಸ್ವತ್ತು ಅಭಿಯಾನದಲ್ಲಿ ಲೋಪ ಹಾಗೂ ಭ್ರಷ್ಟಾಚಾರಕ್ಕೆ ಅವಕಾಶ ನೀಡಬಾರದು ಎಂದು ಸಚಿವ ಈಶ್ವರ ಖಂಡ್ರೆ, ಎಚ್ಚರಿಸಿದರು. ಗ್ರಾಮಠಾಣಾ ವ್ಯಾಪ್ತಿಯಲ್ಲಿ ಇ-ಸ್ವತ್ತು ವಿತರಿಸುವಾಗ ಅರ್ಜಿ ಬಂದ ಕೂಡಲೇ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಬೇಕು. ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿ, ವಿಳಂಬವಿಲ್ಲದೆ ಇ-ಸ್ವತ್ತು ವಿತರಿಸಬೇಕು ಎಂದು ಸೂಚಿಸಿದರು.

ಕೆರೆ ಒತ್ತುವರಿ ತೆರವುಗೊಳಿಸಿ

ಜಿಲ್ಲೆಯ ಗ್ರಾ. ಪಂ. ವ್ಯಾಪ್ತಿಯಲ್ಲಿ 417 ಕೆರೆಗಳಿದ್ದು, 155 ಕೆರೆಗಳ 319 ಎಕರೆ ಜಮೀನು ಒತ್ತುವರಿಯಾಗಿತ್ತು. ಈ ಪೈಕಿ 133 ಕೆರೆಗಳ 162 ಎಕರೆ ಒತ್ತುವರಿ ತೆರವುಗೊಳಿಸಲಾಗಿದೆ. ಉಳಿದ 22 ಕೆರೆಗಳ 157 ಎಕರೆ ಒತ್ತುವರಿ ತೆರವುಗೊಳಿಸಬೇಕು. ಮನೆಗಳನ್ನು ಹೊರತುಪಡಿಸಿ ಉಳಿದ ಒತ್ತುವರಿಯನ್ನು ತೆರವುಗೊಳಿಸಿ ಕೆರೆಗಳನ್ನು ಸಂರಕ್ಷಿಸಬೇಕು. ರಾಜಕಾಲುವೆಗಳ ಅಡೆತಡೆ ನಿವಾರಿಸಿ ಕೆರೆಗಳಿಗೆ ನೀರು ಹರಿಸುವ ಮೂಲಕ ಅಂತರ್ಜಲ ಹೆಚ್ಚಿಸಬೇಕು.

ಟೋಲ್ ಸಂಗ್ರಹಕ್ಕೆ ಆಸಕ್ತಿ; ದುರಸ್ತಿಗೆ ನಿರಾಸಕ್ತಿ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಗೌರಿಬಿದನೂರು

ಬೆಂಗಳೂರಿನಿಂದ ತಾಲ್ಲೂಕಿನ ಮೂಲಕ ಹೈದರಾಬಾದ್‌ಗೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿಯಲ್ಲಿ ಅಲ್ಲಲ್ಲಿ ಗುಂಡಿಗಳು ಬಿದ್ದಿದ್ದು, ವಾಹನ ಸವಾರರು ಸಂಚರಿಸಲು ಪರದಾಡುತ್ತಿದ್ದಾರೆ. ನಗರದ ನ್ಯಾಷನಲ್ ಕಾಲೇಜು, ಅಯ್ಯಪ್ಪಸ್ವಾಮಿ ದೇವಸ್ಥಾನ, ನಾಗಪ್ಪ ಬ್ಲಾಕ್, ಮಾದನಹಳ್ಳಿ, ತಾಯಿ ಮತ್ತು ಮಕ್ಕಳ ಆಸ್ಪತ್ರೆ ಮುಂಭಾಗ ಸೇರಿದಂತೆ ವಿವಿಧೆಡೆ ರಸ್ತೆಯ ಸಂಪೂರ್ಣ ಹದಗೆಟ್ಟಿದ್ದು, ದೊಡ್ಡ ಗುಂಡಿಗಳು ವಾಹನ ಸವಾರರಿಗೆ ಅಪಾಯ ತಂದೊಡ್ಡಿವೆ. ಗುಂಡಿಗಳನ್ನು ತಪ್ಪಿಸುವ ಸಮಯದಲ್ಲಿ ವಾಹನ ಸವಾರರಿಗೆ ಅಪಘಾತಗಳ ಆತಂಕವೂ ಹೆಚ್ಚಾಗಿದೆ. ಈ ರಸ್ತೆಯಲ್ಲಿ ಸಂಚರಿಸುವ ವಾಹನಗಳಿಂದ ನಿಯಮಿತವಾಗಿ ಟೋಲ್ ಶುಲ್ಕ ಸಂಗ್ರಹಿಸಲಾಗುತ್ತಿದೆ. ಆದರೆ ರಸ್ತೆ ನಿರ್ವಹಣೆ ಮತ್ತು ದುರಸ್ತಿಗೆ ಸಂಬಂಧಿಸಿದ ಅಧಿಕಾರಿಗಳು ಮಾತ್ರ ನಿರ್ಲಕ್ಷ್ಯ ವಹಿಸಿದ್ದಾರೆ ಎಂಬ ಆರೋಪ ಸಾರ್ವಜನಿಕರಿಂದ ಕೇಳಿಬಂದಿದೆ. ಟೋಲ್ ಸಂಗ್ರಹಕ್ಕೆ ತೋರುವ ಆಸಕ್ತಿಯನ್ನು ರಸ್ತೆ ನಿರ್ವಹಣೆಗೂ ತೋರಿಸಬೇಕು ಎಂಬುದು ಜನರ ಒತ್ತಾಯವಾಗಿದೆ. ನಗರವೂ ವೇಗವಾಗಿ ಬೆಳೆಯುತ್ತಿದ್ದು, ದಿನದಿಂದ ದಿನಕ್ಕೆ ವಾಹನಗಳ ಸಂಚಾರ, ದಟ್ಟಣೆ ಹೆಚ್ಚಾಗುತ್ತಿದೆ. ಈ ರಸ್ತೆಯಲ್ಲಿ ಸಂಚರಿಸುವಾಗ ಗುಂಡಿಗಳನ್ನು ತಪ್ಪಿಸಲು ಹೋಗಿ ಅಪಘಾತ ಸಂಭವಿಸುತ್ತಿವೆ.

ಹೊನ್ನೇಗೌಡನಹಳ್ಳಿಯಲ್ಲಿ ಹುಲಿ ದಾಳಿಗೆ ಕರು ಬಲಿ

• ಉದಯವಾಹಿನಿ, ಗುಂಡ್ಲುಪೇಟೆ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗೋಪಾಲಸ್ವಾಮಿ ಬೆಟ್ಟ ವಲಯ ವ್ಯಾಪ್ತಿಯ ಹೊನ್ನೇಗೌಡನಹಳ್ಳಿ ಗ್ರಾಮದಲ್ಲಿ ಹುಲಿ ದಾಳಿಗೆ ಕರು ಬಲಿಯಾಗಿರುವ ಘಟನೆ ನಡೆದಿದೆ. ಗ್ರಾಮದ ಕುಮಾರ್ ಎಂಬವರಿಗೆ ಸೇರಿದ ಕರು ಹುಲಿಯ ದಾಳಿಗೆ ಸಿಲುಕಿ ಮೃತಪಟ್ಟಿದ್ದು, ಇದರಿಂದ ರೈತ ಕುಟುಂಬಕ್ಕೆ ನಷ್ಟ ಉಂಟಾಗಿದೆ. ಇತ್ತೀಚಿನ ದಿನಗಳಲ್ಲಿ ಗ್ರಾಮ ಸುತ್ತಮುತ್ತ ವನ್ಯಜೀವಿಗಳ ಹಾವಳಿ ಹೆಚ್ಚಾಗುತ್ತಿದ್ದು, ಜಾನುವಾರುಗಳ ಮೇಲೆ ನಿರಂತರ ದಾಳಿ ನಡೆಯುತ್ತಿರುವುದರಿಂದ ಗ್ರಾಮಸ್ಥರು ಆತಂಕಕ್ಕೆ ಒಳಗಾಗಿದ್ದಾರೆ. ಸತತ ವನ್ಯಮೃಗಗಳ ಕಾಟದಿಂದ ರೈತರು ಬೆಚ್ಚಿಬಿದ್ದಿದ್ದು, ಜಾನುವಾರುಗಳನ್ನು ಮೇಯಿಸಲು ಹಾಗೂ ರಾತ್ರಿ ವೇಳೆ ಕೊಟ್ಟಿಗೆಯಲ್ಲಿ ಕಟ್ಟಿಹಾಕಲು ಭಯಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಘಟನೆಯ ಮಾಹಿತಿ ತಿಳಿದು ಜಿ.ಎಸ್. ಬೆಟ್ಟ ವಲಯದ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಹುಲಿಯ ಚಲನವಲನ ಪತ್ತೆಹಚ್ಚಿ ಸೆರೆಹಿಡಿಯಲು ಕಾರ್ಯಾಚರಣೆ ನಡೆಸುವುದಾಗಿ ಭರವಸೆ ನೀಡಿದ್ದಾರೆ. ವನ್ಯಜೀವಿಗಳ ಹಾವಳಿಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಗ್ರಾಮಸ್ಥರು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.

ತೀವ್ರ ಮಳೆ ಕೊರತೆ- ಇಳುವರಿ ಕುಸಿತ

• ಉದಯವಾಹಿನಿ, ಶಿರಾ

ಸುಗ್ಗಿ ಸಮಯದಲ್ಲಿ ಶೇಂಗಾದಿಂದ ತುಂಬಿ ತುಳುಕುತ್ತಿದ್ದ ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಈ ಬಾರಿ ಶೇಂಗಾ ಇಲ್ಲದೆ ಕಳೆಗುಂದಿ ಬಿಕೋ ಎನ್ನುತ್ತಿದೆ. ಮಾರುಕಟ್ಟೆಯ ಯಾವುದೇ ಮೂಲೆ ನೋಡಿದರೂ ಶೇಂಗಾ ಕಾಣುತ್ತಿತ್ತು. ಆದರೆ ಈ ಬಾರಿ ಮಳೆಯಿಲ್ಲದೆ ತೀವ್ರ ಬರಗಾಲದಿಂದಾಗಿ ಶೇಂಗಾ ಇಳುವರಿ ಕುಂಠಿತವಾಗಿದ್ದು ಮಾರುಕಟ್ಟೆಯಲ್ಲಿ ಶೇಂಗಾವನ್ನು ಹುಡುಕುವಂತಾಗಿದೆ.

ಹಿರಿಯೂರು, ಪಾವಗಡ, ಮಡಕಶಿರಾ, ಮಧುಗಿರಿ ತಾಲ್ಲೂಕಿನಿಂದ ಹೆಚ್ಚಿನ ಸಂಖ್ಯೆಯ ರೈತರು ಶೇಂಗಾವನ್ನು ನಗರದ ಮಾರುಕಟ್ಟೆಗೆ ತರುತ್ತಿದ್ದರು. ದಾವಣಗೆರೆ, ಹಿರಿಯೂರು, ಚಳ್ಳಕೆರೆ ಸೇರಿದಂತೆ ಆಂಧ್ರಪ್ರದೇಶದ ವರ್ತಕರು ಶೇಂಗಾ ಖರೀದಿಗೆ ಬರುತ್ತಿದ್ದರು.

'ಶೇಂಗಾ ನಾಡು' ಎಂದು ಪ್ರಸಿದ್ಧಿ ಪಡೆದಿರುವ ತಾಲ್ಲೂಕಿನಲ್ಲಿ ಶೇಂಗಾ ಪ್ರಮುಖ ಬೆಳೆಯಾಗಿದ್ದು ಈ ಬಾರಿ ಮಳೆ ಇಲ್ಲದೆ ಬಹುತೇಕ ಕಡೆ ಬಿತ್ತನೆ ಸಹ ಮಾಡಿಲ್ಲ. ಕೊಳವೆಬಾವಿ ಸೌಲಭ್ಯ ಇರುವವರು ಬಿತ್ತನೆ ಮಾಡಿದ್ದರೂ ಬೆಳೆ ವಿಫಲವಾಗಿದೆ. ತಾಲ್ಲೂಕಿನ ರೈತರ ಆರ್ಥಿಕ ಸ್ಥಿತಿ ಬಹುತೇಕ ಶೇಂಗಾ ಬೆಳೆಯನ್ನೇ ಅವಲಂಬಿಸಿದೆ. ಆದರೆ ಬೆಳೆ ಸತತ ವಿಫಲವಾಗುತ್ತಿರುವ ಕಾರಣ ರೈತರಲ್ಲಿ ಮುಂದಿನ ಬದುಕು ಕಟ್ಟಿಕೊಳ್ಳುವುದು ಹೇಗೆ ಎನ್ನುವ ಪ್ರಶ್ನೆ ಮೂಡುವಂತಾಗಿದೆ.

ರೈತರಿಗೆ ಅನುಕೂಲವಾಗುವಂತೆ ಹಿಂದೆ ವಾರದ ಎರಡು ದಿನ ಶೇಂಗಾ ಮಾರುಕಟ್ಟೆ ನಡೆಸಲಾಗುತ್ತಿತ್ತು. ಆದರೆ ಈಗ ತಿಂಗಳಿಗೆ ಬರುವಷ್ಟು ಶೇಂಗಾ ಹಿಂದೆ ಒಂದೇ ದಿನ ಮಾರುಕಟ್ಟೆಗೆ ಬರುತ್ತಿತ್ತು. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ 292.08 ಕ್ವಿಂಟಲ್, ಅಕ್ಟೋಬರ್‌ನಲ್ಲಿ 2.975.81 ಕ್ವಿಂಟಲ್, ನವೆಂಬರ್‌ನಲ್ಲಿ 884.12 ಕ್ವಿಂಟಲ್ ಸೇರಿದಂತೆ ಮೂರು ತಿಂಗಳಲ್ಲಿ 4,252 ಕ್ವಿಂಟಲ್ ಮಾರುಕಟ್ಟೆಗೆ ಬಂದಿತ್ತು. ಈ ವರ್ಷ ಸೆಪ್ಟೆಂಬರ್‌ನಲ್ಲಿ 268 ಕ್ವಿಂಟಲ್, ಅಕ್ಟೋಬರ್‌ನಲ್ಲಿ 498 ಕ್ವಿಂಟಲ್ ಬಂದಿದೆ.

ಇನ್ನೆರಡು ವಾರ ಮಾರುಕಟ್ಟೆಗೆ ಶೇಂಗಾ ಬಂದರೆ ಹೆಚ್ಚು ಎನ್ನುವಂತಾಗಿದೆ. ಕಳೆದ ವರ್ಷದ ಅರ್ಧದಷ್ಟು ಸಹ ಈ ಬಾರಿ ಶೇಂಗಾ ಆವಕವಾಗಿಕಲ್ಲ. ವರ್ಷದಿಂದ ವರ್ಷಕ್ಕೆ ಮಾರುಕಟ್ಟೆಗೆ ಬರುವ ಶೇಂಗಾದ ಪ್ರಮಾಣ ಕಡಿಮೆಯಾಗುತ್ತಿದ್ದು ಮಾರುಕಟ್ಟೆ ತನ್ನ ವೈಭವ ಕಳೆದುಕೊಳ್ಳುತ್ತಿದೆ. ಪ್ರಮಾಣ ಕಡಿಮೆಯಾಗುತ್ತಿದ್ದು ಮಾರುಕಟ್ಟೆ ತನ್ನ ವೈಭವ ಕಳೆದುಕೊಳ್ಳುತ್ತಿದೆ.

ಸುಧಾರಿತ ಪದ್ಧತಿಯಲ್ಲಿ ಶೇಂಗಾವನ್ನು ಒಂದು ಎಕರೆ ಪ್ರದೇಶದಲ್ಲಿ ಬೆಳೆಯಲು ಬಿತ್ತನೆ ಬೀಜ ಮತ್ತು ಕೂಲಿಗೆ 10,600, ಕೊಟ್ಟಿಗೆ ರಸಗೊಬ್ಬರಕ್ಕೆ 6 ಸಾವಿರ. ಮೂರು ಬಾರಿ ಕುಂಟೆ ಹೊಡೆಯಲು 9 ಸಾವಿರ, ಕಳೆ ತೆಗೆಯಲು 8 ಸಾವಿರ, ಸಸ್ಯ ಸಂರಕ್ಷಣೆಗೆ 1 ಸಾವಿರ, ಕಟಾವು, ಸಾಗಣೆ ಮತ್ತು ಇತರೆ ವೆಚ್ಚ 10 ಸಾವಿರ ಸೇರಿದಂತೆ ಒಟ್ಟು 44,600 ಖರ್ಚು ಬರುತ್ತಿದೆ ಎಂದರು.



ಉದಯವಾಹಿನಿ ಚಿತ್ರ

ವೀರ ಸಾವರ್ಕರ್ ಯುವ ಬಳಗದಿಂದ ಪ್ರತಿಭಟನೆ

• ಉದಯವಾಹಿನಿ,ಮೈಸೂರು

ರಂಗಕರ್ಮಿ ಅಡ್ಡಂಡ ಕಾರ್ಯಪ್ಪ ಅವರ ಮೇಲೆ ನಡೆದ ಹಲ್ಲೆ ಮತ್ತು ಕಪ್ಪು ಮಸಿ ಬಳಿದಿರುವ ಘಟನೆ ಖಂಡಿಸಿ ವೀರ ಸಾವರ್ಕರ್ ಯುವ ಬಳಗದ ಸದಸ್ಯರು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಅಡ್ಡಂಡ ಕಾರ್ಯಪ್ಪ ಅವರಿಗೆ ಕಪ್ಪು ಮಸಿ ಬಳಿದು, ಹಲ್ಲೆ ನಡೆಸಿರುವುದು ಕೇವಲ ವ್ಯಕ್ತಿಯೊಬ್ಬರ ಮೇಲಿನ ದಾಳಿಯಲ್ಲ. ಸಂವಿಧಾನ ಪ್ರತಿಯೊಬ್ಬ ನಾಗರಿಕನಿಗೂ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳ ಮೇಲಿನ ದಾಳಿ. ಆದ್ದರಿಂದ ಕೂಡಲೇ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಬಳಗದ ಅಧ್ಯಕ್ಷ ರಾಕೇಶ್ ಭಟ್ ಮಾತನಾಡಿ, ಯಾವುದೇ ವ್ಯಕ್ತಿಯ ವಿಚಾರಧಾರೆ ಕುರಿತು ಭಿನ್ನಾಭಿಪ್ರಾಯ ಇದ್ದರೆ, ತರ್ಕದ ಮೂಲಕ ಎದುರಿಸಬೇಕೇ ಹೊರತು ದೈಹಿಕವಾಗಿ ಹಲ್ಲೆ ಮಾಡಿ ಬೆದರಿಕೆ ಒಡ್ಡಬಾರದು. ಕಾನೂನನ್ನು ಕೈಗೆತ್ತಿಕೊಳ್ಳುವ ಹಕ್ಕು ಯಾರಿಗೂ ಇಲ್ಲ. ಕಾರ್ಯಪ್ಪ ಅವರ ಮೇಲೆ ಹಲ್ಲೆ ಮಾಡಿ, ಮಸಿ ಬಳಿದಿರುವುದು ಖಂಡನೀಯ, ಕಾನೂನು ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿ ಹೊತ್ತಿರುವ ಸರ್ಕಾರ ಕೂಡಲೇ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕೂಲ್ಲೂರು ಕೆರೆ ಅಭಿವೃದ್ಧಿಗೆ 3.80 ಕೋಟಿ ಅನುದಾನ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಚನ್ನಪಟ್ಟಣ

ತಾಲ್ಲೂಕಿನ ಕೂಡೂರು ಕೆರೆ ಅಭಿವೃದ್ಧಿಗೆ ಸರ್ಕಾರದ ಸಣ್ಣ ನೀರಾವರಿ ಇಲಾಖೆಯು 3.80 ಕೋಟಿ ಅನುದಾನ ಮಂಜೂರು ಮಾಡಿ ಆದೇಶ ಹೊರಡಿಸಿದೆ. ಅನುದಾನದಲ್ಲಿ ಕೂಡೂರು ಕೆರೆ ಅಭಿವೃದ್ಧಿ, ಕೆರೆ ಒತ್ತುವರಿ ತೆರವು ಮಾಡಿ ಗಡಿಗಳನ್ನು ಭದ್ರಪಡಿಸುವುದು ಹಾಗೂ ಕೆರೆ ಸುತ್ತಲೂ ಏರಿ (ಬಂಡ್) ನಿರ್ಮಿಸುವ ಕಾಮಗಾರಿ ಕೈಗೊಳ್ಳುವಂತೆ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ವೈ.ಎನ್.ವೀಣಾ ಆದೇಶದಲ್ಲಿ ತಿಳಿಸಿದ್ದಾರೆ.

ಕಳೆದ ವರ್ಷ ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ತಾಲ್ಲೂಕಿನ ವಿವಿಧ ಕೆರೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಆ ವೇಳೆ ತಾಲ್ಲೂಕಿನ ಕೂಲ್ಲೂರು ಕೆರೆಗೂ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಕೆರೆ ಕಲುಷಿತ, ಒತ್ತುವರಿ, ಸ್ವಚ್ಛತೆ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದರು.

ಬಳಿಕ ಅವರು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಎರಡು ಬಾರಿ ಸಭೆ ನಡೆಸಿ ತಾಲ್ಲೂಕಿನ ಕೆರೆಗಳ ಅಭಿವೃದ್ಧಿ ಹಾಗೂ ಸಂರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು. ಜತೆಗೆ ಸಣ್ಣ ನೀರಾವರಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗೆ ಪತ್ರ ಬರೆದಿದ್ದರು. ಇದರ ಭಾಗವಾಗಿ ನಗರದ ಶೆಟ್ಟಿಹಳ್ಳಿ ಕೆರೆ ಅಭಿವೃದ್ಧಿಗೆ ಜಿಲ್ಲಾಡಳಿತ ಚಾಲನೆ ನೀಡಿ ಕಾಮಗಾರಿ ಪ್ರಗತಿಯಲ್ಲಿದೆ. ಅದರ ಮುಂದುವರಿದ ಭಾಗವಾಗಿ ತಾಲ್ಲೂಕಿನ ಕೂಲ್ಲೂರು ಕೆರೆ ಅಭಿವೃದ್ಧಿಗೆ ಈಗ ಅನುದಾನ ಮಂಜೂರಾಗಿದೆ.

ನಿರಂತರ ಪ್ರಯತ್ನದ ಫಲವಾಗಿ ಕೂಡೂರು ಕೆರೆ ಅಭಿವೃದ್ಧಿಗೆ ಅನುದಾನ ಬಿಡುಗಡೆಯಾದಂತಾಗಿದೆ. ಕೆರೆ ಅಭಿವೃದ್ಧಿ ಹಾಗೂ ಸಂರಕ್ಷಣೆಗೆ ಈಗ ಮಹತ್ವದ ಹೆಜ್ಜೆ ಇಟ್ಟಂತಾಗಿದೆ.

ಕಾಂಗ್ರೆಸ್ಸಿಗರನ್ನು ತುಂಡು ಮಾಡಿ ಎಸೆಯುವ ಹೇಳಿಕೆ: ಛಲವಾದಿ ಬಂಧನಕ್ಕೆ ಆಗ್ರಹ

• ಉದಯವಾಹಿನಿ, ಕೋಲಾರ


ಉದಯವಾಹಿನಿ ಚಿತ್ರ

ಕಾಂಗ್ರೆಸ್ಸಿಗರನ್ನು ತುಂಡು ತುಂಡಾಗಿ ಕತ್ತರಿಸಿ ಅರಬ್ಬಿ ಸಮುದ್ರಕ್ಕೆ ಎಸೆಯಬೇಕೆಂಬ ಹೇಳಿಕೆ ನೀಡಿರುವ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವಿರುದ್ಧ ಕೊಲೆ ಬೆದರಿಕೆ ಪ್ರಕರಣ ದಾಖಲಿಸುವಂತೆ ಕೋಲಾರ ನಗರ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎಂ.ಎಲ್.ಅನಿಲ್ ಕುಮಾರ್ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕೆ.ವಿ.ಗೌತಮ್ ತಿಳಿಸಿದರು.


ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋಲಾರದಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ ಪಾದಯಾತ್ರೆಯಲ್ಲಿ ಛಲವಾದಿ ನಾರಾಯಣಸ್ವಾಮಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ನಾಯಕರ ವಿರುದ್ಧ ಪ್ರಚೋದನಕಾರಿ ಹೇಳಿಕೆ ನೀಡಿ ಜೀವ ಬೆದರಿಕೆಯೊಡ್ಡಿದ್ದಾರೆ. ಕೂಡಲೇ ಎಫ್ಐಆರ್ ದಾಖಲಿಸಿಕೊಂಡು ಅವರನ್ನು ಬಂಧಿಸಬೇಕು' ಎಂದು ಆಗ್ರಹಿಸಿದರು. ಎಂ.ಎಲ್.ಅನಿಲ್ ಕುಮಾರ್ ಮಾತನಾಡಿ, ಛಲವಾದಿ ನಾರಾಯಣಸ್ವಾಮಿ ನೀಡಿರುವ ಹೇಳಿಕೆ ಪ್ರಜಾಪ್ರಭುತ್ವದ ಅಸ್ತಿತ್ವಕ್ಕೆ ಧಕ್ಕೆ ತರುವಂತದ್ದಾಗಿದೆ. ವ್ಯಕ್ತಿಯೊಬ್ಬರನ್ನು ಕತ್ತರಿಸುವುದಾಗಿ ಹೇಳಿಕೆ ನೀಡಿದರೆ ಯಾವ ಸೆಕ್ಷನ್ ಅಡಿ ಪ್ರಕರಣ ದಾಖಲಾಗುತ್ತದೆ ಹೇಳಿ? ಸಂವಿಧಾನ ಬಾಹಿರ ಹೇಳಿಕೆ ನೀಡಿರುವ ಅವರ ವಿರುದ್ಧ ಕೊಲೆ ಬೆದರಿಕೆ ಹಾಗೂ ರಾಷ್ಟ್ರಪತಿ ಅಂಗಳದಲ್ಲಿರುವ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ (ವಿದೇಯಕ 2025) ಕಾಯ್ದೆಯಡಿ ಕಠಿಣ ಮೊಕದ್ದಮೆ ಹೂಡಬೇಕು. ಈ ಸಂಬಂಧ ಠಾಣೆಯಲ್ಲಿ ಒಟ್ಟು 3 ದೂರುಗಳನ್ನು ನೀಡಲಾಗಿದೆ' ಎಂದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಕೂಡ ಈಚೆಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಇವರಿಬ್ಬರ ಮಾತುಗಳನ್ನು ಕೇಳಿದರೆ ನಿಜವಾದ ಅರಾಜಕತೆ ಬಿಜೆಪಿಯಲ್ಲಿದೆ ಎಂಬುದು ಸ್ಪಷ್ಟವಾಗುತ್ತದೆ.

ಕೆ.ವಿ.ಗೌತಮ್ ಮಾತನಾಡಿ, 'ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ತೆಗೆಯಲು ನಮ್ಮ ಹೋರಾಟ ಸಾಗಿದೆ. ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ನೆಪ ಮಾಡಿ ಕೊಂಡು ಬಿಜೆಪಿಗೆ ವೋಟು ಹಾಕದ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದುಹಾಕಲಾಗುತ್ತಿದೆ. 2024ರ ಲೋಕಸಭಾ ಚುನಾವಣೆಯಿಂದ ಹಿಡಿದು ಇಲ್ಲಿಯವರೆಗೆ ಬಿಜೆಪಿ ಅಕ್ರಮ ಮತ್ತು ಮೋಸದಿಂದಲೇ ಚುನಾವಣೆ ಗೆಲ್ಲುತ್ತಿದೆಯೇ ಹೊರತು ನ್ಯಾಯಯುತವಾಗಿ ಗೆದ್ದಿಲ್ಲ. ತಾವು ಗೆಲ್ಲಲು ಇತರರನ್ನು ಸೋಲಿಸುವ ತಂತ್ರ ಮಾಡುತ್ತಿದ್ದಾರೆ.

ಕೇಂದ್ರದಲ್ಲಿ ಬಿಜೆಪಿ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ ಮೇಲೆ ದೇಶವನ್ನು ಸರ್ವಾಧಿಕಾರಿ ರಾಷ್ಟ್ರವನ್ನಾಗಿ ಮಾಡಲಾಗಿದೆ.

ಬಿಜೆಪಿಗೆ ವೋಟ್ ಹಾಕದವರನ್ನು ದೇಶದ್ರೋಹಿಗಳು ಎಂಬ ಹಣೆಪಟ್ಟಿ ಕಟ್ಟಿ ಜೈಲಿಗೆ ಹಾಕುವ ಕೆಲಸ ನಡೆಯುತ್ತಿದೆ. ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭಯ ಶುರುವಾಗಿದೆ' ಎಂದು ವಾಗ್ದಾಳಿ ನಡೆಸಿದರು.ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ವೈ.ಶಿವಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷಮೈಲಾಂಡಹಳ್ಳಿ ಮುರಳಿ, ಸೈಯದ್ ಅಪ್ಸರ್, ಜಿಲ್ಲಾ ಎಟ್‌ಟಿ ಘಟಕದ ಅಧ್ಯಕ್ಷ ಎನ್.ಅಂಬರೀಶ್, ಮುಖಂಡರಾದ ಬೆಳಗಾನಹಳ್ಳಿ ಮುನಿವೆಂಕಟಪ್ಪ, ಸಂಗೀತಾ, ಅನ್ವರ್ ಪಾಷ, ಖಾದ್ರಿಪುರ ಬಾಬು ಇದ್ದರು.

ಕಣ್ಣೇಗಾಲದಲ್ಲಿ ಸಾಮೂಹಿಕ ಲಕ್ಷ್ಮಿ ಪೂಜೆ ಹಾಗೂ ಧಾರ್ಮಿಕ ಸಭೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ಹಂಗಳ ವಲಯದ ಕಣ್ಣೇಗಾಲ ಗ್ರಾಮದ ಸೋಮೇಶ್ವರ ದೇವಸ್ಥಾನದಲ್ಲಿ ಸಾಮೂಹಿಕ ಲಕ್ಷ್ಮಿ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಪ್ರಧಾನ ಅರ್ಚಕರಾದ ಗೋಪಾಲಕೃಷ್ಣ ಭಟ್ ರವರು ಲಕ್ಷ್ಮಿ ಪೂಜೆಯನ್ನು ನೆರವೇರಿಸಿ, ಧಾರ್ಮಿಕ ಪ್ರವಚನದ ಮೂಲಕ ಭಕ್ತರಿಗೆ ಶುಭ ಹಾರೈಸಿದರು. ಇದೇ ಸಂದರ್ಭದಲ್ಲಿ ಶ್ರೀಗಳು ಕೈಗೊಂಡಿರುವ ಸಮಾಜಮುಖಿ ಕಾರ್ಯಕ್ರಮಗಳು ಹಾಗೂ ವಿವಿಧ ಯೋಜನೆಗಳ ಕುರಿತು ಚಾಮರಾಜನಗರ ಜಿಲ್ಲಾ ನಿರ್ದೇಶಕ ದಿನೇಶ್ ಎ. ಮಾತನಾಡಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕಿನ ಯೋಜನಾಧಿಕಾರಿ ಚಂದ್ರಶೇಖರ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಡಿ. ಮಾದಪ್ಪ, ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ನಾಗಸ್ವಾಮಿ, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಮಹೇಂದ್ರ ಎಚ್.ಪಿ., ಪ್ರಗತಿಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ಅಧ್ಯಕ್ಷೆ ರತ್ನಮ್ಮ, ವಲಯ ಮೇಲ್ವಿಚಾರಕಿ ಚೇತನ, ವಲಯದ ಸೇವಾ ಪ್ರತಿನಿಧಿಗಳು, ಗ್ರಾಮದ ಗಣ್ಯರು, ಮುಖಂಡರು ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

ದಾಬಸ್‌ಪೇಟೆಗೆ ನೀರು ಪೂರೈಸಲು ರೂಪಿಸಿರುವ ಯೋಜನೆ ನಿಲ್ಲಿಸಿ: ರೈತರ ಪ್ರತಿಭಟನೆ

ರಹಸ್ಯವಾಗಿ ನೀರು ಹರಿಸುವ ಹುನ್ನಾರ: ಮಾಜಿ ಶಾಸಕ ಎನ್.ಮಹೇಶ್ ಆರೋಪ

• ಉದಯವಾಹಿನಿ, ಯಳಂದೂರು

1 ಸ್ಥಳಕ್ಕೆ ಬಂದಿದ್ದ ಜೆಸಿಬಿ ಯಂತ್ರದ ಕಾರ್ಯಾಚರಣೆ

2 ಕಬಿನಿ ನದಿಯಿಂದ ನೀರು ಹರಿಸಿ ಅನ್ನದಾತರು ಕೃಷಿ ಚಟುವಟಿಕೆ

3 ಕಾಮಗಾರಿಯನ್ನು ತಕ್ಷಣ ಸ್ಥಗಿತ


ಉದಯವಾಹಿನಿ ಚಿತ್ರ

ಅಗರ-ಮದ್ದೂರು ಕೆರೆಯಿಂದ ತುಮಕೂರು ಜಿಲ್ಲೆಯ ದಾಬಸ್‌ಪೇಟೆ ಕೈಗಾರಿಕಾ ಪ್ರದೇಶಕ್ಕೆ ನೀರು ಪೂರೈಸಲು ರೂಪಿಸಿರುವ ಯೋಜನೆಯನ್ನು ತಕ್ಷಣವೇ ಸ್ಥಗಿತಗೊಳಿಸಬೇಕು ಎಂದು ಆಗ್ರಹಿಸಿ ಮಾಜಿ ಶಾಸಕ ಎನ್.ಮಹೇಶ್ ನೇತೃತ್ವದಲ್ಲಿ ರೈತರು ಕೆರೆಗೆ ಇಳಿದು ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ಅಗರ ಅಚ್ಚುಕಟ್ಟು ವ್ಯಾಪ್ತಿಯ ಕೆರೆಯನ್ನು ಸರ್ವೆ ನಡೆಸಲು ಗುತ್ತಿಗೆದಾರರು ಮುಂದಾಗಿದ್ದ ವೇಳೆ ರೈತರು ಆಕ್ಷೇಪ ವ್ಯಕ್ತಪಡಿಸಿದರು. ಸ್ಥಳಕ್ಕೆ ಬಂದಿದ್ದ ಜೆಸಿಬಿ ಯಂತ್ರದ ಕಾರ್ಯಾಚರಣೆಯನ್ನು ತಕ್ಷಣ ನಿಲ್ಲಿಸುವಂತೆ ಒತ್ತಾಯಿಸಿದರು.

ಮಾಜಿ ಶಾಸಕ ಎನ್.ಮಹೇಶ್ ಮಾತನಾಡಿ, ಅಗರ ಮತ್ತು ಮದ್ದೂರು ಕೆರೆಗಳಿಗೆ ಸುವರ್ಣಾವತಿ ಅಥವಾ ಕಬಿನಿ ನದಿಯಿಂದ ನೀರು ಹರಿಸಿ ಅನ್ನದಾತರು ಕೃಷಿ ಚಟುವಟಿಕೆ ನಡೆಸುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ಈ ಕೆರೆಗಳ ನೀರನ್ನು ಡಾಬಸ್‌ಪೇಟೆ ಕೈಗಾರಿಕಾ ಪ್ರದೇಶಕ್ಕೆ ಹರಿಸಲು ಯಾರ ಗಮನಕ್ಕೂ ಬಾರದಂತೆ ಯೋಜನೆ ರೂಪಿಸಿರುವುದು ಅಕ್ಷಮ್ಯ. ಇದರಿಂದ ಸ್ಥಳೀಯ ಕೃಷಿ ಭೂಮಿಗೆ ನೀರಿನ ಕೊರತೆ ಎದುರಾಗಲಿದ್ದು, ರೈತರು ಸಂಕಷ್ಟಕ್ಕೆ ಸಿಲುಕಲಿದ್ದಾರೆ' ಎಂದು ಆತಂಕ ವ್ಯಕ್ತಪಡಿಸಿದರು.

ಸುಮಾರು 869 ಕೋಟಿ ವೆಚ್ಚದ ಯೋಜನೆಯ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಬೇಕು. ಸ್ಥಳೀಯ ರೈತರು, ಗ್ರಾಮಸ್ಥರು ಹಾಗೂ ಜನ ಪ್ರತಿನಿಧಿಗಳ ಸಭೆ ಕರೆದು ಯೋಜನೆಯ ಉದ್ದೇಶ, ನೀರಿನ ಮೂಲ ಮತ್ತು ಪೂರೈಕೆಯ ಪ್ರಮಾಣದ ಬಗ್ಗೆ ಮಾಹಿತಿ ನೀಡಬೇಕು. ಈಗಾಗಲೇ ಶುದ್ಧ ಕುಡಿಯುವ ನೀರಿಗಾಗಿ ಪರದಾಡುತ್ತಿರುವ ಗಡಿ ಜಿಲ್ಲೆಯ ಜನರ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರ ಕೈಗೊಳ್ಳಬೇಕು. ಅಲ್ಲಿಯವರೆಗೆ ಕಾಮಗಾರಿ ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಿದರು.

ಏಕಾಏಕಿ ಕೆರೆಯ ಸರ್ವೆ ಮತ್ತು ಸ್ವಚ್ಛತಾ ಕಾರ್ಯ ಆರಂಭಿಸಿರುವುದು ಪಾಳೇಗಾರಿಕೆ ಮನಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ನೀರಾವರಿ ಮತ್ತು ಕೃಷಿ ಇಲಾಖೆಯ ಅಧಿಕಾರಿಗಳಿಗೂ ಯೋಜನೆಯ ಸಂಪೂರ್ಣ ರೂಪುರೇಷೆಗಳ ಬಗ್ಗೆ ಮಾಹಿತಿ ಇಲ್ಲ. ವ್ಯಾಪ್ತಿಯ ಏಳು ಗ್ರಾಮಗಳ ರೈತರಿಗೂ ತಿಳಿದಿಲ್ಲ ಎಂದು ದೂರಿದರು.

ಕೃಷಿಕರಾದ ವಿನೋದ್, ರಾಮಣ್ಣ, ಗೋವಿಂದನಾಯಕ, ನಂಜುಂಡನಾಯಕ, ದೇವರಾಜು, ಮುದ್ದನಾಯಕ, ನಾಗರಾಜು, ರಾಜುಗೌಡ, ಚೇತನ್, ಮದ್ದೂರು ಸುರೇಶ್, ಕಿನಕಹಳ್ಳಿ ಸೋಮಶೇಖರ್ ಇದ್ದರು.

ಕಾರ್ಯ ಸ್ಥಗಿತಗೊಳಿಸಿ

ಅಗರ ಕೆರೆಯ ಸುತ್ತಮುತ್ತಲಿನ ಏಳು ಗ್ರಾಮಗಳಲ್ಲಿ ಹಿಂಡಿ ಮಾರಮ್ಮ ಗ್ರಾಮ ದೇವತೆಯ ಹಬ್ಬ ನಡೆಯುತ್ತಿರುವ ಸಂದರ್ಭದಲ್ಲಿ ರೈತರು ಹಾಗೂ ಗ್ರಾಮಸ್ಥರ ಗಮನಕ್ಕೆ ತರದೆ ಸರ್ವೆ ಮತ್ತು ಸ್ವಚ್ಛತಾ ಕಾರ್ಯ ಕೈಗೊಂಡಿರುವುದಕ್ಕೆ ಬೇಸಾಯಗಾರರಿಂದ ಆಕ್ಷೇಪ ವ್ಯಕ್ತವಾಯಿತು. ಯೋಜನೆಯ ಸಂಪೂರ್ಣ ಮಾಹಿತಿ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಇಂಜಿನಿಯರ್‌ಗಳನ್ನು ಒತ್ತಾಯಿಸಿದರು. ಸಮರ್ಪಕ ಮಾಹಿತಿ ದೊರೆಯದ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ತಕ್ಷಣ ಸ್ಥಗಿತಗೊಳಿಸುವಂತೆ ರೈತರು ಪಟ್ಟುಹಿಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧ ನಡೆ

ರೈತ ಮುದ್ದುನಾಯಕ, 'ರಾಜಧಾನಿಯಲ್ಲಿ ಕುಳಿತ ಪಟ್ಟಭದ್ರ ಹಿತಾಸಕ್ತಿಗಳು ಜಿಲ್ಲೆಯ ಗಡಿಯಿಂದ ಮದ್ದೂರು, ಮಳವಳ್ಳಿ ಮಾರ್ಗವಾಗಿ ಸುಮಾರು 150 ಕಿ.ಮೀ. ದೂರದ ದಾಬಸ್‌ಪೇಟೆಗೆ ನೀರು ಪೂರೈಸುವ ಯೋಜನೆ ರೂಪಿಸಿದ್ದಾರೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧ ನಡೆಯಾಗಿದೆ. ಕೈಗಾರಿಕೆಗಳಿಗೆ ಸ್ಥಳೀಯವಾಗಿಯೇ ನೀರಿನ ವ್ಯವಸ್ಥೆ ಮಾಡಿಕೊಡುವ ಬದಲು ಯಳಂದೂರು ತಾಲ್ಲೂಕುಗಳ ಕೆರೆಗಳ ಮೇಲೆ ಕಣ್ಣಿಟ್ಟಿರುವುದರ ಹಿಂದೆ ದೊಡ್ಡ ಕೈಗಾರಿಕೋದ್ಯಮಿಗಳ ಹಿತಾಸಕ್ತಿ

ಅಂತರಾಳದಿಂದ... EDITORIAL

ಅಗ್ನಿವೀರರ ಸೇವಾವಧಿ ವಿಸ್ತರಣೆ ನೇಮಕಾತಿಯಲ್ಲಿ ಸ್ಪಷ್ಟತೆ ಅಗತ್ಯ



ಕೇಂದ್ರ ಸರಕಾರದ ಅತ್ಯಂತ ಮಹತ್ವಾಕಾಂಕ್ಷಿ ಯೋಜನೆಗಳಲ್ಲೊಂದಾದ ಅಗ್ನಿವೀರ್ ಯೋಜನೆಯಡಿ ಭಾರತೀಯ ಸೇನಾಪಡೆಗಳಿಗೆ ಮೊದಲ ಹಂತದಲ್ಲಿ ನೇಮಕವಾದ ಅಗ್ನಿವೀರರಿಗೆ ಕೇಂದ್ರ ಸರಕಾರ ದೀಪಾವಳಿ ಕೊಡುಗೆ ನೀಡಿದೆ. ಯೋಜನೆಯ ಮೂಲ ನಿಯಮದಂತೆ ಮುಂದಿನ ತಿಂಗಳು 4 ವರ್ಷಗಳ ಸೇವಾವಧಿಯನ್ನು ಪೂರ್ಣಗೊಳಿಸಲಿರುವ ಅಗ್ನಿವೀರರ ಪೈಕಿ ಶೇ.25ರಷ್ಟು ಮಂದಿ ಸೇನೆಯ ಸಾಮಾನ್ಯ ಸೈನಿಕರಾಗಿ ಮುಂದುವರಿಯಲಿದ್ದರೆ, ಉಳಿದ ಶೇ.75ರಷ್ಟು ಅಗ್ನಿವೀರರು ಸೇನಾ ಕರ್ತವ್ಯದಿಂದ ಮುಕ್ತರಾಗಬೇಕಿತ್ತು. ಇದರ ಬದಲಾಗಿ ಸರಕಾರ ಹಾಲಿ ನಿಯಮಾವಳಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿ ಈ ಶೇ.75ರಷ್ಟು ಅಗ್ನಿವೀರರ ಸೇವೆಯನ್ನು ಇನ್ನೂ 2 ವರ್ಷಗಳ ಮಟ್ಟಿಗೆ ವಿಸ್ತರಿಸಿದೆ.

ಸರಕಾರದ ಈ ನಿರ್ಧಾರದಿಂದ ತಮ್ಮ 4 ವರ್ಷಗಳ ಅವಧಿಯನ್ನು ಪೂರ್ಣಗೊಳಿಸಿ ಸೇನೆಯಿಂದ ನಿರ್ಗಮಿಸಬೇಕಿದ್ದ 18,000 ಭಾರತೀಯ ಸೇನಾಪಡೆಗಳಲ್ಲಿ ಹೆಚ್ಚಿನ ಸಂಖ್ಯೆಯ ಯೋಧರು ಉತ್ತರ ಭಾರತದವರೇ ಆಗಿದ್ದು, ಅಗ್ನಿವೀರ ಯೋಜನೆಯಡಿ ನೇಮಕಗೊಂಡವರ ಪೈಕಿಯೂ ಬಹುತೇಕರು ಉತ್ತರ ಭಾರತೀಯರೇ ಆಗಿದ್ದಾರೆ. ಮುಂದಿನ ವರ್ಷದ ಆರಂಭದಲ್ಲಿ ಉತ್ತರಪ್ರದೇಶ, ಪಂಜಾಬ್, ಉತ್ತರಾಖಂಡ ರಾಜ್ಯಗಳ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಈ ನಿರ್ಧಾರ ಕೈಗೊಂಡಿದೆ ಎಂಬ ವಿಶ್ಲೇಷಣೆಗಳು ಈಗಾಗಲೇ ನಡೆಯಲಾರಂಭಿಸಿದೆ.

ರಾಜಕೀಯ ಲೆಕ್ಕಾಚಾರ, ತಂತ್ರಗಾರಿಕೆಗಳೇನೇ ಇರಲಿ, 18,000 ಅಗ್ನಿವೀರರಿಗೆ ಸೇನೆಯಲ್ಲಿ ಸೇವೆ ಮುಂದುವರಿಯಲು ಅವಕಾಶ ಲಭಿಸಿರುವುದು ಅವರನ್ನು ತತ್‌ಕ್ಷಣದ ಅತಂತ್ರತೆಯಿಂದ ಪಾರುಮಾಡಿದಂತಾಗಿದೆ. ಅಗ್ನಿವೀರ ಯೋಜನೆ ಜಾರಿಯ ಆರಂಭದಲ್ಲಿಯೇ ಸೇನಾ ವಲಯದಿಂದ ಈ ಬಗ್ಗೆ ಒಂದಿಷ್ಟು ಅಪಸ್ವರ ವ್ಯಕ್ತವಾಗಿತ್ತು. ದೇಶದ ರಕ್ಷಣೆಯ ಕಾರ್ಯಕ್ಕೂ ಈ ತಾತ್ಕಾಲಿಕ ನೇಮಕಾತಿ ವ್ಯವಸ್ಥೆಯನ್ನು ಜಾರಿಗೊಳಿಸುವ ಮೂಲಕ ಸರಕಾರ ತನ್ನ ಮೇಲಣ ಆರ್ಥಿಕ ಹೊರೆಯನ್ನು ಕಡಿಮೆ ಮಾಡಲು ಮುಂದಾಗಿದೆ ಎಂಬ ಸಾರ್ವತ್ರಿಕ ಆರೋಪಗಳು ಕೇಳಿಬಂದಿದ್ದವು. ಈಗ ಇದೇ ಅಗ್ನಿವೀರರ ಸೇವೆಯನ್ನು ಇನ್ನೂ ಎರಡು ವರ್ಷಗಳ ಅವಧಿಗೆ ವಿಸ್ತರಿಸುವ ಮೂಲಕ ಮತ್ತದೇ ತಂತ್ರಕ್ಕೆ ಶರಣಾಗಿದೆಯೇ ಎಂಬ ಅನುಮಾನ ಕಾಡಲಾರಂಭಿಸಿದೆ. ಸೇವಾವಧಿ ವಿಸ್ತರಣೆಯ ಬದಲಾಗಿ ಅಗ್ನಿವೀರರಾಗಿ ಸೇನೆಗೆ ನೇಮಕಗೊಂಡ ಯುವಕರಿಗೆ ಸೂಕ್ತ ತರಬೇತಿಯನ್ನು ನೀಡಿ ಅವರನ್ನು ಖಾಯಂ ಯೋಧರನ್ನಾಗಿ ಪರಿಗಣಿಸಲು ಸರಕಾರ ಕಾರ್ಯಯೋಜನೆ ರೂಪಿಸುವುದು ಸೂಕ್ತ.

ಸೇನಾ ನೇಮಕಾತಿಯಂತಹ ಗಂಭೀರ ವಿಷಯಗಳಲ್ಲಿ ಸರಕಾರ ಯಾವುದೇ ಗೊಂದಲಕ್ಕೆ ಆಸ್ಪದ ನೀಡದೆ ಸ್ಪಷ್ಟ ನಿಯಮವನ್ನು ಹೊಂದಿರುವುದು ಅತ್ಯಗತ್ಯ. ನಿಯಮಾವಳಿಗಳನ್ನು ಸಂದರ್ಭಕ್ಕನುಸಾರವಾಗಿ ಬದಲಾಯಿಸುವುದರಿಂದ ಇಡೀ ಯೋಜನೆಯ ಮೂಲ ಆಶಯಕ್ಕೆ ಕುಂದುಂಟಾಗುವುದಲ್ಲದೆ ಸೇನಾಪಡೆಗಳ ಕಾರ್ಯನಿರ್ವಹಣೆಯ ಮೇಲೂ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದೆ ಎಂಬ ಎಚ್ಚರಿಕೆ ಅಗತ್ಯ.

ಅಗ್ನಿವೀರರು ನಿಟ್ಟುಸಿರು ಬಿಡುವಂತಾಗಿದೆ. ದೇಶದ ಯುವಜನತೆಯನ್ನು ದೇಶರಕ್ಷಣೆಯ ಕಾರ್ಯಗಳಲ್ಲಿ ತೊಡಗಿಕೊಳ್ಳುವಂತೆ ಮಾಡುವ ದಿಸೆಯಲ್ಲಿ ಕೇಂದ್ರ ಸರಕಾರ 2022ರಲ್ಲಿ ಅಗ್ನಿವೀರ್ ಯೋಜನೆಯಡಿ ತಾತ್ಕಾಲಿಕ ನೆಲೆಯಲ್ಲಿ ಸೇನೆಗೆ ನೇಮಕಾತಿ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡಿತ್ತು. ಇದೀಗ ಸರಕಾರ ಇವರ ಸೇವಾವಧಿಯನ್ನೂ ಇನ್ನೂ 2 ವರ್ಷಗಳ ಅವಧಿಗೆ ವಿಸ್ತರಿಸಿರುವುದರ ಜತೆಯಲ್ಲಿ ಅವರಿಗೆ ಹೆಚ್ಚಿನ ವೇತನ, ಸೌಲಭ್ಯ ನೀಡುವುದಾಗಿ ಪ್ರಕಟಿಸಿದೆ. ಈ ಹೆಚ್ಚುವರಿ ಅವಧಿಯಲ್ಲಿ ಅಗ್ನಿವೀರರು ತೋರುವ ಕಾರ್ಯಕ್ಷಮತೆ ಮತ್ತು ಸೇವಾ ಮೌಲ್ಯ ಮಾಪನದ ಫಲಿತಾಂಶವನ್ನು ಆಧರಿಸಿ ನಿಗದಿತ ಆಯ್ಕೆ ಪ್ರಕ್ರಿಯೆ ನಡೆಸಿ ಅವರನ್ನು ಸೇನೆಯಲ್ಲಿ ಖಾಯಂ ಸಾಮಾನ್ಯ ಸೈನಿಕರಾಗಿ ಮುಂದುವರಿಸುವ ಬಗ್ಗೆ ನಿರ್ಧಾರ ಕೈಗೊಳ್ಳುವುದಾಗಿ ಸರಕಾರ ತಿಳಿಸಿರುವುದರಿಂದ ಅಗ್ನಿವೀರರಿಗೆ ತಮ್ಮ ಸಾಮರ್ಥ್ಯವನ್ನು ಒರೆಗೆಹಚ್ಚಲು ಮತ್ತಷ್ಟು ಕಾಲಾವಕಾಶ ಲಭಿಸಿದೆ.



ಪರೀಕ್ಷಾ ಸಂಭ್ರಮ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

30

ಮುಖದ ನರ ಸಡಿಲಗೊಳಿಸುವ ಸರಳ ವಿಧಾನ

ಆತಂಕದಲ್ಲಿ ಮುಖದ ಸ್ನಾಯುಗಳು ಅನೈಚ್ಛಿಕವಾಗಿ ಬಿಗಿಯಾಗುತ್ತವೆ. ಹಣೆ, ಕಣ್ಣು, ದವಡೆಗಳಲ್ಲಿ ಒತ್ತಡ ಸೇರಿ ಹಲ್ಲು ಕಡಿಯುವುದು, ಹುಬ್ಬು ಗಂಟಿಕ್ಕುವುದು ಹೆಚ್ಚುತ್ತದೆ.

ಕನ್ನಡಿಯಲ್ಲಿ ಮುಖದಲ್ಲಿ ಬಳಲಿಕೆ ಎದ್ದು ಕಾಣುತ್ತದೆ. ಈ ಬಿಗಿತದಿಂದ ತಲೆನೋವು, ಕಣ್ಣಿನ ಸುಸ್ತು, ಏಕಾಗ್ರತೆಯ ಕೊರತೆ ಉಂಟಾಗುತ್ತದೆ. ಮುಖ ಸಡಿಲವಾದರೆ ಮನಸ್ಸೂ ಹಗುರವಾಗುತ್ತದೆ ಎಂಬುದು ವೈಜ್ಞಾನಿಕ.

ಇದರೊಂದಿಗೆ ಬೆರಳ ತುದಿಯಿಂದ ಹಣೆಯಿಂದ ಕೆನ್ನೆಯವರೆಗೆ ಮೃದುವಾಗಿ ಮಸಾಜ್ ಮಾಡಿ, ಕಿವಿಯ ಮುಂಭಾಗವನ್ನು ನಯವಾಗಿ ಉಜ್ಜಿ. ಒಂದು ನಿಮಿಷ ಬೆಚ್ಚಗಿನ ಟವೆಲ್ ಒತ್ತಿದರೆ ನರಗಳು ಶಮನಗೊಂಡು ರಕ್ತಸಂಚಾರ ಸುಧಾರಿಸುತ್ತದೆ.

ದಿನಕ್ಕೆ ಎರಡು ಬಾರಿ ಮಾಡಿದರೆ ಸಾಕು, ಪರದೆ ನೋಡುವವರಿಗೆ ಇದು ವರದಾನ. ಮುಖದಲ್ಲಿ ಒತ್ತಡವಿದ್ದರೆ ಮೆದುಳೂ ಒತ್ತಡದಲ್ಲಿರುತ್ತದೆ. ಮುಖ ಸಡಿಲಿಸಿದರೆ ಉಸಿರಾಟ ಸುಧಾರಿಸಿ ಆಲೋಚನೆ ಸ್ಪಷ್ಟವಾಗುತ್ತದೆ. ಶಾಂತ ಮುಖದಿಂದ ಬರೆದ ಪರೀಕ್ಷೆಯಲ್ಲಿ ಆತ್ಮವಿಶ್ವಾಸವೇ ನಿಮ್ಮ ದೊಡ್ಡ ಅಂಕ.

ಪರೀಕ್ಷೆಗೂ ಮುನ್ನ ಮತ್ತು ಓದಿನ ನಡುವೆ ಎರಡು ನಿಮಿಷ ಈ ಅಭ್ಯಾಸ ಮಾಡಿ. ಕಣ್ಣು ಮುಚ್ಚಿ ಹಣೆಯನ್ನು ಮೇಲಕ್ಕೆತ್ತಿ ಮೂರು ಸೆಕೆಂಡು ಹಿಡಿದು ಸಡಿಲಿಸಿ. ಕಣ್ಣುಗಳನ್ನು ಬಿಗಿಯಾಗಿ ಮುಚ್ಚಿ ತೆರೆಯಿರಿ. ಕೆನ್ನೆಗೆ ಗಾಳಿ ತುಂಬಿ ನಿಧಾನವಾಗಿ ಬಿಡಿ. ದವಡೆಯನ್ನು ಅಗಲವಾಗಿ ತೆರೆದು ಮುಚ್ಚಿ, ನಾಲಿಗೆಯನ್ನು ಮೇಲೆ-ಕೆಳಗೆ, ಅಕ್ಕಪಕ್ಕಕ್ಕೆ ಚಲಿಸಿ. ಕೊನೆಯಲ್ಲಿ ಮುಖದ ಎಲ್ಲಾ ಸ್ನಾಯುಗಳನ್ನು ಒಟ್ಟಿಗೆ ಬಿಗಿಗೊಳಿಸಿ ಮೂರು ಸೆಕೆಂಡುಗಳ ಬಳಿಕ ಸಂಪೂರ್ಣ ಬಿಡಿ.



ದೀಪಾವಳಿ ಬೆಳಕಿನ ಹಬ್ಬ, ಬದುಕಿನ ಸಂಭ್ರಮ

ದೀಪದಾನ, ಯಮದೀಪ, ಲಕ್ಷ್ಮೀಪೂಜೆ, ನರಕ ಚತುರ್ದಶಿ, ಬಲಿಪಾಡ್ಯಮಿ ಹಾಗೂ ಗೋ ಪೂಜೆಯ ಮೂಲಕ ಧರ್ಮ ಸಂಸ್ಕೃತಿಯ ಸಂದೇಶ ದೀಪಾವಳಿ ಎಂದರೆ ಕೇವಲ ದೀಪಗಳನ್ನು ಬೆಳಗಿಸುವ ಹಬ್ಬವಲ್ಲ ಅಜ್ಞಾನವೆಂಬ ಕತ್ತಲೆಯನ್ನು ಕಳೆದು ಜ್ಞಾನ, ಧರ್ಮ ಮತ್ತು ಸತ್ಕರ್ಮಗಳ ಬೆಳಕನ್ನು ಬದುಕಿನಲ್ಲಿ ತುಂಬಿಕೊಳ್ಳುವ ಪರ್ವಕಾಲ.

ದೀಪದಾನ, ಯಮದೀಪ, ಲಕ್ಷ್ಮೀಪೂಜೆ, ನರಕ ಚತುರ್ದಶಿ, ಬಲಿಪಾಡ್ಯಮಿ, ಗೋ ಪೂಜೆ ಮೊದಲಾದ ಆಚರಣೆಗಳು ಈ ಹಬ್ಬದ ಧಾರ್ಮಿಕ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಸಾರುತ್ತವೆ. ಧನತ್ರಯೋದಶಿಯಂದು ಮನೆಯ ಬಾಗಿಲಲ್ಲಿ ದಕ್ಷಿಣಾಭಿಮುಖವಾಗಿ ಯಮದೀಪವನ್ನು ಬೆಳಗಿಸಿ ಕುಟುಂಬದವರ ಆರೋಗ್ಯ, ಆಯುಷ್ಯ ಮತ್ತು ಕ್ಷೇಮಕ್ಕಾಗಿ ಪ್ರಾರ್ಥಿಸುವ ಸಂಪ್ರದಾಯವಿದೆ. ದೇವಾಲಯ, ತುಳಸಿಕಟ್ಟೆ, ಮನೆಬಾಗಿಲು ಹಾಗೂ ಪವಿತ್ರ ಜಲಾಶಯಗಳ ಬಳಿ ದೀಪದಾನ ಮಾಡುವುದು ಪುಣ್ಯಕಾರ್ಯವೆಂದು ಪರಿಗಣಿಸಲಾಗಿದೆ. ನರಕ ಚತುರ್ದಶಿಯಂದು ಶ್ರೀಕೃಷ್ಣನು ಸತ್ಯಭಾಮೆಯ ಸಹಕಾರದಿಂದ ನರಕಾಸುರನನ್ನು ಸಂಹರಿಸಿದ ವಿಜಯವನ್ನು ಸ್ಮರಿಸಲಾಗುತ್ತದೆ. ಈ ದಿನ ಮುಂಜಾನೆ ಎಣ್ಣೆಸ್ನಾನ ಮಾಡಿ, ಹೊಸ ಬಟ್ಟೆ ಧರಿಸಿ, ದೇವರ ಪೂಜೆ ಸಲ್ಲಿಸುವುದು ವಿಶೇಷ.

ದೀಪಾವಳಿಯ ಪ್ರಮುಖ ಆಚರಣೆಗಳಲ್ಲಿ ಲಕ್ಷ್ಮೀಪೂಜೆಗೆ ಮಹತ್ವದ ಸ್ಥಾನವಿದೆ. ಮನೆಯನ್ನು ಸ್ವಚ್ಛಗೊಳಿಸಿ, ರಂಗೋಲಿ ಬಿಡಿಸಿ, ದೀಪಗಳಿಂದ ಅಲಂಕರಿಸಿ ಗಣಪತಿ ಹಾಗೂ ಮಹಾಲಕ್ಷ್ಮಿಯನ್ನು ಪೂಜಿಸಲಾಗುತ್ತದೆ. ವ್ಯಾಪಾರಸ್ಥರು ಅಂಗಡಿಗಳಲ್ಲಿ ಲೆಕ್ಕಪತ್ರ ಪುಸ್ತಕಗಳು ಮತ್ತು ವ್ಯಾಪಾರ ಸಾಮಗ್ರಿಗಳಿಗೆ ಪೂಜೆ ಸಲ್ಲಿಸುತ್ತಾರೆ.

ಸಂಪತ್ತು ಎಂದರೆ ಕೇವಲ ಹಣವಲ್ಲ ಸತ್ಯನಿಷ್ಠೆ, ಶಾಂತಿ, ಸಂತೃಪ್ತಿ ಮತ್ತು ಸತ್ಕಾರ್ಯಗಳೂ ನಿಜವಾದ ಐಶ್ವರ್ಯ ಎಂಬ ಸಂದೇಶವನ್ನು ಈ ಆಚರಣೆ ಸಾರುತ್ತದೆ. ರಾಮನು ಹದಿನಾಲ್ಕು ವರ್ಷಗಳ ವನವಾಸ ಮುಗಿಸಿ, ರಾವಣನನ್ನು ಸಂಹರಿಸಿ ಸೀತಾ-ಲಕ್ಷ್ಮಣರೊಂದಿಗೆ ಅಯೋಧ್ಯೆಗೆ ಮರಳಿದಾಗ ಪ್ರಜೆಗಳು ದೀಪಗಳನ್ನು ಬೆಳಗಿಸಿ ಸ್ವಾಗತಿಸಿದರೆಂಬ ನಂಬಿಕೆಯೂ ದೀಪಾವಳಿಯೊಂದಿಗೆ ಬೆಸೆದುಕೊಂಡಿದೆ. ಕರಾವಳಿ ಭಾಗದಲ್ಲಿ ಜಲಪೂರಣ, ಅಂಗಡಿ ಪೂಜೆ, ವಾಹನ ಪೂಜೆ, ವಿಶೇಷ ರಂಗೋಲಿ ಮೊದಲಾದ ಸ್ಥಳೀಯ ಸಂಪ್ರದಾಯಗಳು ಹಬ್ಬದ ಸೊಬಗನ್ನು ಹೆಚ್ಚಿಸುತ್ತವೆ.

ಬಲಿಪಾಡ್ಯಮಿಯಂದು ವಾಮನನಿಗೆ ಮೂರು ಹೆಜ್ಜೆ ಭೂಮಿಯನ್ನು ದಾನಮಾಡಿದ ಬಲಿಚಕ್ರವರ್ತಿಯ ಕಥೆಯನ್ನು ಸ್ಮರಿಸಲಾಗುತ್ತದೆ. ಈ ದಿನ ಗೋ ಪೂಜೆ, ಧಾನ್ಯಲಕ್ಷ್ಮಿ ಪೂಜೆ, ದೀಪೋತ್ಸವ ಹಾಗೂ ಕುಟುಂಬದವರೊಂದಿಗೆ ಸಾಂಪ್ರದಾಯಿಕ ಆಟಗಳಲ್ಲಿ ಪಾಲ್ಗೊಳ್ಳುವ ಪದ್ಧತಿಯಿದೆ. ಗೋವಿಗೆ ಸ್ನಾನ ಮಾಡಿಸಿ, ಹೂಮಾಲೆ, ಅರಿಶಿನ-ಕುಂಕುಮಗಳಿಂದ ಅಲಂಕರಿಸಿ ಪೂಜಿಸುವುದು ಕೃಷಿ ಮತ್ತು ಗೋಸಂಸ್ಕೃತಿಯ ಮಹತ್ವವನ್ನು ನೆನಪಿಸುತ್ತದೆ. ಹೊಸದಾಗಿ ಬಂದ ಧಾನ್ಯವನ್ನು ಪೂಜಿಸುವುದು ಅನ್ನದಾತನ ಶ್ರಮಕ್ಕೂ ಅನ್ನದ ಮಹತ್ವಕ್ಕೂ ಸಲ್ಲಿಸುವ ಗೌರವವಾಗಿದೆ.

ದೀಪಾವಳಿಯ ನಿಜವಾದ ಆಶಯವೆಂದರೆ ಹೊರಗಿನ ಮನೆಗಳಷ್ಟೇ ಅಲ್ಲ, ಅಂತರಂಗವನ್ನೂ ಸ್ವಚ್ಛಗೊಳಿಸುವುದು. ದ್ವೇಷ, ಅಸೂಯೆ, ಅಹಂಕಾರಗಳನ್ನು ತೊರೆದು ಪ್ರೀತಿ, ಸಹನೆ, ದಾನ, ಸೇವೆ ಮತ್ತು ಸೌಹಾರ್ದದ ದೀಪವನ್ನು ಮನದಲ್ಲಿ ಬೆಳಗಿಸಬೇಕು. ಅಗತ್ಯವಿರುವವರಿಗೆ ನೆರವು ನೀಡುವುದು, ಅನ್ನದಾನ ಮಾಡುವುದು, ಪರಿಸರಸ್ನೇಹಿ ರೀತಿಯಲ್ಲಿ ಹಬ್ಬ ಆಚರಿಸುವುದು ನಮ್ಮ ಹೊಣೆಗಾರಿಕೆ. ಹೀಗೆ ದೀಪಾವಳಿ ಸಂಪ್ರದಾಯಗಳ ಆಚರಣೆಯೊಂದಿಗೆ ಬದುಕಿನ ಮೌಲ್ಯಗಳನ್ನು ಜಾಗೃತಗೊಳಿಸುವ ಬೆಳಕಿನ ಹಬ್ಬವಾಗಿದೆ. ದೀಪದ ಬೆಳಕು ಮನೆಮನೆಯನ್ನೂ, ಜ್ಞಾನದ ಬೆಳಕು ಮನಸ್ಸುಗಳನ್ನೂ ಬೆಳಗಿಸಲಿ ಎಂಬುದೇ ಈ ಮಹಾಪರ್ವದ ಸಾರ್ಥಕ ಸಂದೇಶ.



ಡಾ. ಗುರುರಾಜ ಪೋಶೆಟ್ಟಿಹಳ್ಳಿ (ಪ್ರಣವ), ಸಂಸ್ಕೃತಿ ಚಿಂತಕರು



ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಪಂಚಭೂತಗಳಾದ ಭೂಮಿ,ಆಕಾಶ,ಗಾಳಿ, ನೀರು,ಬೆಂಕಿ ಇವು ಪ್ರಕೃತಿದತ್ತವಾಗಿ, ದೈವದತ್ತವಾಗಿ ಮಿಗಿಲಾಗಿ ಸೃಷ್ಟಿಯ ಮೂಲದಿಂದ ಬಂದಿರುವ ಪ್ರಕೃತಿಯ ಕೊಡುಗೆಗಳು. ಇವುಗಳು ಇಲ್ಲ ಅಂದರೆ ನಾವೂ ಸೇರಿ ಇನ್ನೂ ಜೀವಿಸುವ ಯಾವ ಸಕಲಿಷ್ಟು ಜೀವರಾಶಿಯೂ ಸಹ ಈ ಭೂಮಿಯ ಮೇಲೆ ಬದುಕಲು ಸಾಧ್ಯವಿಲ್ಲ ಮಿಗಿಲಾಗಿ ಇಡೀ ಜಗತ್ತೇ ಕತ್ತಲು. ಇವುಗಳು ಯಾರ ಅಧೀನದಲ್ಲೂ ಇಲ್ಲ, ಯಾರ ಒಡೆತನದಲ್ಲೂ ಇಲ್ಲ,ಯಾರ ಮಾಲೀಕರೂ ಅಲ್ಲ ಈ ಬ್ರಹ್ಮಾಂಡದಲ್ಲಿ ಎಲ್ಲವೂ ಸೃಷ್ಟಿಯ ಮೂಲ ಅಷ್ಟೇ. ಇವುಗಳ ಅಡಿಯಲ್ಲಿ ಮನುಷ್ಯ ಸೇರಿ ಎಲ್ಲಾ ಜೀವರಾಶಿಗಳು ಅವುಗಳನ್ನ ಬಳಸಿ ಆರೋಗ್ಯಕರವಾದ ಬದುಕನ್ನು ಕಟ್ಟಿಕೊಂಡು ಸ್ವಶಕ್ತಿಯಿಂದ ಜೀವಿಸಬೇಕು. ಹೀಗಿರುವಲ್ಲಿ ಪಂಚಭೂತಗಳು ಅಗತ್ಯತೆಗೆ ತಕ್ಕಂತೆ ಇರಬೇಕೆಂದು ಮಾನವ ಸದಾ ಬಯಸುತ್ತಾನೆ. ಇಲ್ಲಿ ಮಾನವನಲ್ಲಿ ಸ್ವಾರ್ಥ ಕಂಡು ಬರುತ್ತದೆ. ಉದಾಹರಣೆಗೆ: ಭೂಮಿಯು ಫಲವತ್ತಾಗಿ ಬೇಕಾದಾಗ ಒಳ್ಳೆಯ ಬೆಳೆ ಬರಬೇಕು, ಆಕಾಶದಲ್ಲಿ ಅವಶ್ಯಕತೆ ಇದ್ದಾಗ ಮೋಡ ಕಟ್ಟಿ ಮಳೆ ಬರುವಂತಿರಬೇಕು, ಅಗತ್ಯತೆಗೆ ತಕ್ಕಂತೆ ಒಳ್ಳೆಯ ಗಾಳಿ ಬೀಸುವಂತಿರಬೇಕು, ಒಳ್ಳೆಯ ಶುದ್ಧ ನೀರಿರಬೇಕು,ಒಳ್ಳೆಯ ಬೆಳಕಿರಬೇಕು.

ದೈವೀಸೃಷ್ಟಿ ಶಕ್ತಿಗಳಾದ ಪಂಚಭೂತಗಳಿಗೆ ಟೀಕೆ ಮಾಡುವವರು ಇನ್ನೂ ಮಾನವ ಯಾವ ಲೆಕ್ಕ

ಒಂದು ವೇಳೆ ಮೇಲ್ಕಂಡ ಪಂಚಭೂತಗಳು ಮಾನವನ ಬದುಕಿಗೆ ಅಡಚಣೆ ಅಥವಾ ಪ್ರಕೃತಿ ವಿಕೋಪವಾದರೆ ತಡಮಾಡದೇ ಪ್ರಕೃತಿಯನ್ನು ನಿಂದಿಸುವುದು ಮಾತ್ರ ತಪ್ಪುವುದಿಲ್ಲ. ಪ್ರಕೃತಿಯಲ್ಲಿ ಆಗುವ ಬದಲಾವಣೆಗಳನ್ನು ಯಾರೂ ಸಹ ಊಹಿಸಲು ಸಾಧ್ಯವಿಲ್ಲ ಮಿಗಿಲಾಗಿ ಭೂಗರ್ಭ ಶಾಸ್ತ್ರದ ವಿಜ್ಞಾನಿಗಳು, ಖಗೋಳಶಾಸ್ತ್ರಜ್ಞ ವಿಜ್ಞಾನಿಗಳು, ಪ್ರಕೃತಿಯ ವಿಜ್ಞಾನಿಗಳು, ಹವಾಮಾನ ವಿಜ್ಞಾನಿಗಳು ಇನ್ನೂ ಇತರೆ ಸಂಬಂಧ ಪಟ್ಟ ವಿಜ್ಞಾನಿಗಳಿಗೂ ಕೂಡ ದೊಡ್ಡ ಸವಾಲಾಗಿವೆ. **ಉದಾಹರಣೆಗೆ:** ಭೂಮಿಯಲ್ಲಿ ಬೆಳೆದ ಬೆಳೆ ಶೂನ್ಯವಾದರೆ, ಸೂರ್ಯನ ಉಷ್ಣಾಂಶ ಜಾಸ್ತಿ ಅಥವಾ ಕಡಿಮೆ ಇದ್ದರೂ, ಆಕಾಶದಲ್ಲಿ ಮೋಡ ಕಟ್ಟಿ ಮಳೆ ಬಂದರೂ ಅಥವಾ ಬರೆದಿದ್ದರೂ,ತಂಪಾದ ಗಾಳಿ,ಬಿಸಿಯಾದ ಗಾಳಿ,ಸುಂಟರಗಾಳಿ ಆದರೂ, ಸಿಹಿ ನೀರು ಅಥವಾ ಉಪ್ಪು ನೀರು ಆದರೂ ಮಾನವ ಅವುಗಳ ವಿರುದ್ಧ ಧ್ವನಿ ಎತ್ತುವುದು ಮಾತ್ರ ತಪ್ಪುವುದಿಲ್ಲ.

ಮತ್ತೊಂದು ಉದಾಹರಣೆ ಏನ್ ಭೂಕಂಪ, ಏನ್ ಜ್ವಾಲಾಮುಖಿ, ಏನ್ ಸುನಾಮಿ ,ಏನ್ ಪ್ರವಾಹ, ಏನ್ ಬಿಸಿಲು, ಏನ್ ಮಳೆ, ಏನ್ ಚಳಿ, ಏನ್ ಬಿರುಗಾಳಿ , ಏನ್ ಸೆಕೆ ಇತ್ಯಾದಿ ಅನ್ನುವುದನ್ನ ಮಾತ್ರ ಮರೆಯುವುದಿಲ್ಲ. ಒಟ್ಟಾರೆ ಮಾನವ ಹೇಳಿದ ಹಾಗೆ ಪಂಚಭೂತಗಳು ಕೇಳಬೇಕು.

ಪಂಚಭೂತಗಳು ಇದ್ದ ಹಾಗೆ ಅನುಸರಿಸುವ ಅಥವಾ ಅನುಕರಿಸುವ ಬುದ್ಧಿ, ಜ್ಞಾನ ಇನ್ನೂ ಮನುಷ್ಯನಿಗೆ ಬೆಳೆದಿಲ್ಲ ಬೆಳೆಯುವುದೂ ಇಲ್ಲ.ನಾವೆಲ್ಲಾ ಮೂಲತಃ ಸ್ವಾರ್ಥಿಗಳು. ಇಂತಹ ಪಂಚಭೂತ ದೈವೀ ಶಕ್ತಿಗಳಿಗೆ ಮಾನವ ಟೀಕೆ ಮಾಡುವಾಗ ಅಥವಾ ಟೀಕೆ ಮಾಡುವುದು ಸಹಜವಾಗಿರುವಾಗ ಇನ್ನೂ ಮಾನವ ಯಾವ ಲೆಕ್ಕ.ಇಂತಹ ಪುಣ್ಯಭೂಮಿಯಲ್ಲಿ ಕೆಲವರು ಮಾನವರಾಗಿ ಹುಟ್ಟಿ ಮಾನವೀಯ ಗುಣಗಳನ್ನ ಬೆಳೆಸಿಕೊಂಡು ದೈವೀ ಸೃಷ್ಟಿ ಶಕ್ತಿಗಳಿಗೆ ಗೌರವ ನೀಡಿ ದೈವತ್ವ ಗುಣಗಳನ್ನ ಅಳವಡಿಸಿಕೊಂಡು ದೇವರಾದರು. ಅಂಥವರ ಪೈಕಿ ಕೆಲವರನ್ನು ನೆನೆಯುವುದಾದರೆ ಬುದ್ಧ, ಮಹಾವೀರ, ಪರಮಹಂಸರು, ವಿವೇಕಾನಂದರು, ಗುರುನಾನಕ್, ಶಂಕರಾಚಾರ್ಯ, ಬಸವಣ್ಣ, ಕಬೀರ್, ಚೈತನ್ಯ ಪ್ರಭು, ರಮಣ ಮಹರ್ಷಿ, ಶ್ರೀ ಸಿದ್ದೇಶ್ವರ ಸ್ವಾಮಿ ಇನ್ನೂ ಇತರರು.

ಇಂತಹ ಮಹಾನ್ ಮಹಾತ್ಮರು ಈ ಭೂಮಿಯ ಮೇಲೆ ಜನಿಸಿ ವಿಸ್ಮಯ ಮೂಡಿಸಿ ಅಮರರಾದರು. ಪಂಚಭೂತಗಳನ್ನು ಮತ್ತು ಇಂತಹ ದೇವರಂತ ದೇವರನ್ನು, ಮಹಾತ್ಮರಲ್ಲಿ ಮಹಾತ್ಮರನ್ನು ಟೀಕೆ ಮಾಡುವಾಗ ಇನ್ನೂ ಸಾಮಾನ್ಯ ಜನರು ಯಾವ ಲೆಕ್ಕ ಎಂಬ ನಿರ್ಧಾರಕ್ಕೆ ಬರಬೇಕಾಗುತ್ತದೆ. ಒಟ್ಟಾರೆ ಒಂದು ನೀತಿ ಪಾಠ ಇದರಿಂದ ಕಲಿಯುವುದೇನೆಂದರೆ ಇಷ್ಟೆಲ್ಲಾ ಮಾನವನಿಂದ ಪಂಚಭೂತಗಳಿಗೆ ಟೀಕೆ ಇದ್ದರೂ ದೈವೀ ಸೃಷ್ಟಿ ಈ ಪ್ರಕೃತಿ ಶಕ್ತಿಗಳು ಶಾಶ್ವತ, ನಾವು ಶಾಶ್ವತವಲ್ಲ. ಆದ್ದರಿಂದ ಪ್ರಕೃತಿಯ ಅಡಿಯಲ್ಲಿ ಬದುಕನ್ನು ಕಟ್ಟಿಕೊಂಡು ಯಾವುದೇ ಟೀಕೆಗಳಿಗೆ ಕಿವಿಕೊಡದೇ ಈ ಭೂಮಿಯ ಮೇಲೆ ನನ್ನ ಪಾತ್ರ ಏನು ಎಂಬ ಸಾಮಾನ್ಯ ಜ್ಞಾನದ ಅರಿವು ಇಟ್ಟುಕೊಂಡು ಜೀವಿಸಿ ಒಳ್ಳೆಯ ಮಾನವನಾಗಬೇಕು ಅದೇ ಮಾನವ ಧರ್ಮ.



• ಹಿಂದಿನ

121ನೆಯ ಅಧ್ಯಾಯ

ಜಗದ್ಧಾತ್ರಿಯೇ ಕೇಳು, ದಿತಿಸುತಾಧಿಪನು ರವಿವಂಶಕುಲಲಾಮನ ಬಾಣಾಹತಿಯಿಂದ ನೊಂದು ವಾಪಸು ಅರಮನೆಗೆ ಬಂದರೂ ಅವನ ಕಣ್ಣುಗಳಿಗೆ ನಿದ್ದೆ ಇಳಿಯದಾಯಿತು. ತನಗಾದ ಭಂಗವನ್ನು ಹೋಗಲಾಡಿಸಿಕೊಳ್ಳಲು ಮಾಡಬೇಕಾದ ಕರ್ತವ್ಯವನ್ನು ಕುರಿತು ಆಲೋಚಿಸಲು ದಾನವಮುಖ್ಯರ ಸಭೆಯಲ್ಲಿ ಸಿಂಹಾಸನವನ್ನೇರಿ ಕುಳಿತುಕೊಂಡು, ರಾಮನ ಬಾಣಗಳ ಆಹತಿಯನ್ನು ನೆನೆನೆನೆಯುತ್ತ, ಪ್ರತಿಪಕ್ಷದ ಬಲವನ್ನು ಗಮನಿಸಿ, ಸಿಂಹದಿಂದ ಪೆಟ್ಟು ತಿಂದ ಆನೆಯಂತೆಯೂ ಗರುಡನ ಕೊಕ್ಕಿನಿಂದ ತಿವಿಯಲ್ಪಟ್ಟ ಹಾವಿನಂತೆಯೂ ಮರುಗಿದ. ಅವನಿಗೆ ಆದುದನ್ನು ಜ್ಞಾಪಿಸಿಕೊಂಡಾಗ, ರಾಮನು ಬಿಡುತ್ತಿದ್ದವೇನು ಬಾಣಗಳೋ ಬ್ರಹ್ಮದಂಡಗಳೋ, ಕುಡಿಮಿಂಚಿನ ಮರಿಗಳೋ, ಗರಿಗಳುಳ್ಳ ಕೆಂಡಗಳೋ ಎಂಬಂತೆ ಇದ್ದರೆ, ರಾಮನೇನು ಮನುಷ್ಯನೋ ವೈರಿಗಳನ್ನು ತರಿದಿಡುವ ಕಲ್ಪಾಂತಭೈರವನೋ ಎನ್ನಿಸುತ್ತಿತ್ತು. ''ಅಯ್ಯೋ, ವಿಧಿವಶದಿಂದ ಈ ಸಮರದಲ್ಲಿ ನಾನು ನರನೊಬ್ಬನಿಂದ ಪರಾಭೂತನಾದೆ. ಶಿವನೇ, ನಿನ್ನ ವರಗಳ ಮಹಿಮೆ ಅಮೋಘವಾದುದು, ಆದರೆ ನನ್ನ ದೌರ್ಭಾಗ್ಯದ ಕಾಲದಲ್ಲಿ, ಅಕಟಕಟ ಯುದ್ಧರಂಗದಲ್ಲಿ ನಾನು ಮಾಡಿದ ಅತುಲ ತಪಸ್ಸಿಗೆ ಏನಾಯಿತೋ, ನಾನು ಪೂಜನೆ ಮಾಡಿದ ದೈವಕ್ಕೇ ಏನಾಯಿತೋ, ನಾನು ಪಡೆದ ವರಗಳ ಮಹಿಮೆ ಎಲ್ಲಿ ಹೋಯಿತೋ! ನನಗೆ ಮಾನಭಂಗವಾಯಿತಲ್ಲ, ಒಬ್ಬ ನರನ ದೆಸೆಯಿಂದ ನನ್ನ ಮಹಾಬಲವು ಹೀನಾಯವಾಗಿ ಸೋಲುಣ್ಣುವಂತಾಯಿತೇ! ಶಿವ ಶಿವಾ, ನಾನು ನಿರ್ವೀರ್ಯನಾಗಿಬಿಟ್ಟೆ, ದೇವ ದಾನವ ಗಂಧರ್ವರಿಂದಲೂ, ಯಕ್ಷ ರಾಕ್ಷಸ ಪನ್ನಗ ಕಿನ್ನರರಿಂದಲೂ ನನಗೆ ಸಾವು ಬಾರದಂತೆ ಬ್ರಹ್ಮನು ವರವನ್ನೇನೋ ಕೊಟ್ಟ ಆದರೆ ನರವಾನರರಿಂದ ಸಾವು ಬರಬಾರದೆಂಬುದನ್ನು ಕೇಳಲು ಮರೆತುಬಿಟ್ಟೆನಲ್ಲ, ಅಯ್ಯೋ! ಇಕ್ಷ್ವಾಕುವಂಶದ ಅನರಣ್ಯನು ತನ್ನ ವಂಶದಲ್ಲಿ ಹುಟ್ಟುವ ಪುರುಷನೊಬ್ಬನಿಂದ ನಿನ್ನ ಹಾಗೂ ನಿನ್ನ ಮಕ್ಕಳು ಮರಿಗಳ ಸಂಹಾರವಾಗುವುದು ಎಂದು ಹೇಳಿದ್ದ ಈ ರಾಮನೇ ಆ ಪುರುಷನಾಗಿರಬಹುದೇ? ಹಿಂದೆ ಪಾರ್ವತಿ ನಂದೀಶ ವರುಣಾತ್ಮಜೆಯರ ಕಾರಣದಿಂದ ನಾನು ಪಡೆದ ಶಾಪ ಮತ್ತು ಅಪ್ಸರಾಂಗನೆಯ ಅಚಿಂತ್ಯ ನುಡಿಗಳು ಹಾಗೂ ಮುನಿವಚನಗಳು ಎಂದಿಗಾದರೂ ಹುಸಿಯಾದಾವೇ? ಕಂತುಪರವಶತೆಯಿಂದ ನಾನು ವೇದಾವತಿಯನ್ನು ಬಲಾತ್ಕರಿಸಲು ಆ ಕಾಂತೆಯು, ನಾನು ಸೀತೆಯ ರೂಪದಲ್ಲಿ ಮತ್ತೊಂದು ಜನ್ಮವೆತ್ತಿ ಬಂದು ನಿನ್ನನ್ನು ಕೊಲ್ಲುತ್ತೇನೆ' ಎಂದ ಕಾರಣದಿಂದಲೇ ಸೀತೆಯು ನನ್ನ ನಗರವನ್ನು ಪ್ರವೇಶಿಸುವಂತಾಯಿತೇ? ಯಾವ ಯಾವ ರೀತಿಯಲ್ಲಿ ಆಲೋಚಿಸಿದರೂ ನನಗೆ ಜಯವು ದೊರೆಯುವ ಸೂಚನೆಯು ಕಾಣಿಸುತ್ತಿಲ್ಲ. ರಾಮನು ಕಾಳ್ಗಿಚ್ಚಿನಂತೆ ಬಂದು ದಿತಿವಂಶವನ್ನು ಉನ್ಮೂಲನ ಮಾಡುತ್ತಿದ್ದಾನೆ. ಇದಕ್ಕೆಲ್ಲ ಏನು ಪರಿಹಾರ, ಈ ಸಮಸ್ಯೆಗೆ ಏನು ಉಪಾಯಗಳುಂಟೋ ಅವನ್ನೆಲ್ಲ ನೀವು ಮನಸ್ಸಿನಲ್ಲಿಯೇ ಆಲೋಚಿಸಿಕೊಂಡು ಹೇಳಿರಿ'' ಎಂದು ಖಿನ್ನವದನನಾಗಿ ಹೇಳಿದ. ರಾವಣನ ಆ ನಿರೂಪಣೆಯನ್ನು ಕೇಳಿದ ದಾನವರೆಲ್ಲ ಭೀತಿದುಃಖಗಳಿಂದ ಕೂಡಿದರು, ಯಾರೂ ಮಾತನಾಡಲಿಲ್ಲ ಎಲ್ಲರೂ ಮೌನವಾಗಿರುವುದನ್ನು ನೋಡಿದ ದಾನವೇಂದನು ನಿಟ್ಟುಸಿರುಗಳನ್ನು ಬಿಡುತ್ತ ತಾನೇ ಮಾತಾಡತೊಡಗಿದ''ಈ ರಾಘವನನ್ನು ಸಮರಾಂಗಣದಲ್ಲಿ ಎದುರಿಸಿ ಹೋರಾಡುವ ವೀರನು ನಮ್ಮಲ್ಲಿ ಯಾರಿದ್ದಾರೆ? ಕುಂಭಕರ್ಣನನ್ನು ಬಿಟ್ಟು ಹೀಗೆ ನಿಲ್ಲಬಲ್ಲವರನ್ನು ಬುವಿಯಲ್ಲಿ ಯಾರನ್ನೂ ಕಾಣೆ, ಆದರೆ ಆ ಮಹಾಸುರನು ಈಗ ಒಂಬತ್ತು ದಿನಗಳ ಹಿಂದೆ ನಮ್ಮೊಡನೆ ಸಮಾಲೋಚನೆಯಲ್ಲಿ ಭಾಗವಹಿಸಿ ಅಂದಿನಿಂದ ನಿದ್ರಾವಶನಾಗಿ ಮಲಗಿದ್ದಾನೆ, ಇನ್ನೂ ಒಂಬತ್ತು ತಿಂಗಳೂ ಹಾಗೆಯೇ ನಿದ್ರಿಸುತ್ತಾನೆ. ಜಗತ್ತಿನಲ್ಲಿ ಆಗುತ್ತಿರುವ ಯಾವುದನ್ನೂ ಅರಿಯದೆ, ತಿಂಗಳು ವರುಷಗಳನ್ನು ತಿಳಿಯದೆ ಅವನು ಮಲಗಿದ್ದಾನೆ. ಈ ಯುದ್ಧದಲ್ಲಿ ನಮಗೆ ಬಂದೊದಗಿರುವ ಅಪಜಯವು ಅವನಿಗೆ ಗೊತ್ತೇ ಇಲ್ಲ. ಬ್ರಹ್ಮನ ಶಾಪಕ್ಕೊಳಗಾದ ಅವನು ನಮಗೆ ಈ ಸಂಕ್ಲೇಶವುಂಟಾದ ಕಾಲಕ್ಕೆ ಸರಿಯಾಗಿ ನಿದಿಸುತ್ತಿದ್ದಾನೆ.

ನೀವೆಲ್ಲ ಹೋಗಿ ಅವನನ್ನು ಎಚ್ಚರಗೊಳಿಸಿರಿ: ಭೀಮಬಲನಾದ ಅವನು ಬಂದು ತನ್ನ ಶೌರ್ಯಾಡಂಬರದಿಂದ ವಾನರಸಂಕುಲವನ್ನು ಸಂಹರಿಸಿ ಒಂದೇ ಕ್ಷಣದಲ್ಲಿ ನಮಗೆ ಜಯವನ್ನು ತಂದೀಯುತ್ತಾನೆ ಎಂದು ಹೇಳಲು ನೆರೆದಿದ್ದವರೆಲ್ಲ ಎದ್ದರು. ಕುಂಭಕರ್ಣನನ್ನು ಎಚ್ಚರಿಸಲು ಪ್ರಯತ್ನಿಸಿದರೆ ತಮಗೇನು ಆಪತ್ತು ಬಂದೊದಗುವುದೋ ಎಂದು ಭಯಪಟ್ಟರೂ, ಹೋಗದಿದ್ದರೆ ರಾವಣನೇ ತಮಗೆ ವಿಪತ್ಕಾರಿಯಾಗುತ್ತೆಂಬುದನ್ನು ಬಲ್ಲವರಾದ ಅವರು ಅಡಕೊತ್ತಿನಲ್ಲಿ ಸಿಕ್ಕಿದವರಂತೆ ಹಲುಬುತ್ತ ಅಂತೂ ಕುಂಭಕರ್ಣನ ಮನೆಯನ್ನು ತಲುಪಿದರು.

ಮುಂದುವರೆಯುವುದು

ಡಾ. ದೇವಿ ಶೆಟ್ಟಿ ಅವರಿಗೆ ಫ್ರಾನ್ಸ್‌ನ Chevalier de l'Ordre national du Mérite ಗೌರವ ಪ್ರದಾನ

• ಉದಯವಾಹಿನಿ, ಬೆಂಗಳೂರು

ನಾರಾಯಣ ಹೆಲ್ತ್ ಸಂಸ್ಥಾಪಕರು ಮತ್ತು ಅಧ್ಯಕ್ಷರಾದ ಡಾ. ದೇವಿ ಶೆಟ್ಟಿ ಅವರಿಗೆ ಫ್ರಾನ್ಸ್‌ನ ಪ್ರತಿಷ್ಠಿತ Chevalier de l'Ordre national du Mérite ಪುರಸ್ಕಾರವನ್ನು ನೀಡಿ ಗೌರವಿಸಿರುವುದಾಗಿ ಬೆಂಗಳೂರಿನ ಫ್ರೆಂಚ್ ಕಾನ್ಸುಲೇಟ್ ಜನರಲ್ ಘೋಷಿಸಿದೆ. ಬೆಂಗಳೂರಿನ ನಾರಾಯಣ ಹೆಲ್ತ್ ಸಿಟಿಯಲ್ಲಿ ನಡೆದ ಸಮಾರಂಭದಲ್ಲಿ ಈ ಗೌರವವನ್ನು ಪ್ರದಾನ ಮಾಡಲಾಯಿತು. 1963ರ ಡಿಸೆಂಬರ್ 3ರಂದು ಫ್ರೆಂಚ್ ಅಧ್ಯಕ್ಷ ಚಾರ್ಲ್ಸ್ ಡಿ ಗಾಲ್ ಅವರಿಂದ ಸ್ಥಾಪಿಸಲ್ಪಟ್ಟ Chevalier de l'Ordre national du Mérite ಫ್ರಾನ್ಸ್‌ನ ಎರಡು ರಾಷ್ಟ್ರೀಯ ಪ್ರಶಸ್ತಿಗಳಲ್ಲಿ ಒಂದಾಗಿದೆ ಹಾಗೂ ಲೀಜನ್ ಆಫ್ ಆನರ್ ನಂತರದ ದೇಶದ ಎರಡನೇ ಅತ್ಯುನ್ನತ ರಾಷ್ಟ್ರೀಯ ಗೌರವವಾಗಿದೆ. ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ನಾಗರಿಕ ಹಾಗೂ ಮಿಲಿಟರಿ ವಿಭಾಗಗಳಲ್ಲಿ ಫ್ರೆಂಚ್ ಪ್ರಜೆಗಳು ಮತ್ತು ವಿದೇಶಿ ಪ್ರಜೆಗಳು ಸಲ್ಲಿಸಿದ ವಿಶಿಷ್ಟ ಸೇವೆ ಹಾಗೂ ಅತ್ಯುತ್ಕೃಷ್ಟ ಕೊಡುಗೆಗಳನ್ನು ಇದು ಗುರುತಿಸುತ್ತದೆ. ಈ ಪುರಸ್ಕಾರವು ನೈಟ್, ಆಫೀಸರ್, ಕಮಾಂಡರ್, ಗ್ರ್ಯಾಂಡ್ ಆಫೀಸರ್ ಮತ್ತು ಗ್ರ್ಯಾಂಡ್ ಕ್ರಾಸ್ ಎಂಬ ಐದು ಶ್ರೇಣಿಗಳನ್ನು ಒಳಗೊಂಡಿದೆ.

ಕೋವಿಡ್-19 ಸಾಂಕ್ರಾಮಿಕ ರೋಗದ ಅವಧಿಯಲ್ಲಿ ಬೆಂಗಳೂರಿನಲ್ಲಿರುವ ಫ್ರೆಂಚ್ ಸಮುದಾಯಕ್ಕೆ ನೀಡಿದ ನಿಸ್ವಾರ್ಥ ನೆರವು, ಸದಾ ಲಭ್ಯತೆ ಮತ್ತು ಬದ್ಧತೆಗಾಗಿ ಡಾ. ಶೆಟ್ಟಿ ಅವರನ್ನು ಈ ಗೌರವಕ್ಕೆ ಆಯ್ಕೆ ಮಾಡಲಾಗಿದೆ. ಅಭೂತಪೂರ್ವ ಸವಾಲುಗಳಿದ್ದ ಆ ಸಮಯದಲ್ಲಿ, ಲಸಿಕೆ ಅಭಿಯಾನಗಳು ಮತ್ತು ಸೇವೆಯ ಮೂಲಕ ಅವರು ಹಾಗೂ ನಾರಾಯಣ ಹೆಲ್ತ್ ಸಂಸ್ಥೆಯು ಫ್ರೆಂಚ್ ಕಾನ್ಸುಲೇಟ್ ಮತ್ತು ವ್ಯಾಪಕ ಫ್ರೆಂಚ್ ಸಮುದಾಯಕ್ಕೆ ಮುಕ್ತವಾಗಿ ಸಹಕರಿಸಿ, ಅಸಾಧಾರಣ ಸಹಕಾರ ಮತ್ತು ಒಗ್ಗಟ್ಟಿನ ಮನೋಭಾವವನ್ನು ಮೆರೆದಿದ್ದರು.

ತಮ್ಮ ಸುದೀರ್ಘ ವೃತ್ತಿಜೀವನದುದ್ದಕ್ಕೂ ಜಾಗತಿಕ ಆರೋಗ್ಯ ಸೇವೆಗೆ ನೀಡಿದ ಕೊಡುಗೆಗಾಗಿ ಡಾ. ಶೆಟ್ಟಿ ಅವರು ವ್ಯಾಪಕವಾಗಿ ಗುರುತಿಸಲ್ಪಟ್ಟಿದ್ದಾರೆ. ವೃತ್ತಿಯಲ್ಲಿ ಹೃದಯ ಶಸ್ತ್ರಚಿಕಿತ್ಸಕರಾಗಿರುವ ಇವರು, ನವೀನ ಸೇವಾ ಮಾದರಿಗಳು, ತಂತ್ರಜ್ಞಾನ ಮತ್ತು ಸಂಸ್ಥೆಗಳನ್ನು ಕಟ್ಟುವ ಮೂಲಕ ಜನಸಾಮಾನ್ಯರಿಗೆ ಆರೋಗ್ಯ ಸೇವೆ ಸುಲಭವಾಗಿ ಸಿಗುವಂತೆ ಮಾಡಲು ಶ್ರಮಿಸಿದ್ದಾರೆ.

ಇವರ ಕಾರ್ಯವು ಭಾರತದಲ್ಲಿ ವೈದ್ಯಕೀಯ ಆರೈಕೆಯ ವ್ಯಾಪ್ತಿಯನ್ನು ವಿಸ್ತರಿಸುವುದರ ಜೊತೆಗೆ, ಕೇಮನ್ ಐಲ್ಯಾಂಡ್ಸ್ ಮತ್ತು ಯುನೈಟೆಡ್ ಕಿಂಗ್‌ಡಮ್‌ನ ನೆಟ್‌ವರ್ಕ್‌ಗಳ ಮೂಲಕ ವಿದೇಶಗಳಲ್ಲೂ ಗಮನಾರ್ಹ ಪ್ರಭಾವ ಬೀರಿದೆ. ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆಯ ಹೊರತಾಗಿ, ಅವರು ಕೈಗೆಟುಕುವ ಆರೋಗ್ಯ ವಿಮೆ ಹಾಗೂ ಇತರ ಆರೋಗ್ಯ ನೀತಿ ಕ್ರಮಗಳಿಗಾಗಿಯೂ ಧ್ವನಿ ಎತ್ತಿದ್ದಾರೆ.ಸನ್ಮಾನ ಸಮಾರಂಭದಲ್ಲಿ ಬೆಂಗಳೂರಿನ ಫ್ರಾನ್ಸ್‌ನ ಕಾನ್ಸುಲ್ ಜನರಲ್ ಮಾರ್ಕ್ ಲಾಮಿ ಮಾತನಾಡಿ, ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಬೆಂಗಳೂರಿನ ಫ್ರೆಂಚ್ ಸಮುದಾಯಕ್ಕೆ ನೀಡಿದ ಉದಾರತೆ ಮತ್ತು ಅಚಲ ಬೆಂಬಲಕ್ಕಾಗಿ ಡಾ. ದೇವಿ ಶೆಟ್ಟಿ ಅವರನ್ನು ಸನ್ಮಾನಿಸಲು ನಾವು ಹೆಮ್ಮೆಪಡುತ್ತೇವೆ. ಅವರ ಈ ಕಾರ್ಯಗಳು ಒಗ್ಗಟ್ಟಿನ ಮನೋಭಾವ ಹಾಗೂ ಫ್ರಾನ್ಸ್-ಭಾರತ ನಡುವಿನ ಶಾಶ್ವತ ಸ್ನೇಹವನ್ನು ಪ್ರತಿಬಿಂಬಿಸುತ್ತವೆ'' ಎಂದರು.

ಈ ಗೌರವವನ್ನು ಸ್ವೀಕರಿಸಿ ಮಾತನಾಡಿದ ಡಾ. ದೇವಿ ಶೆಟ್ಟಿ ಅವರು''ಫ್ರಾನ್ಸ್ ಸರ್ಕಾರದಿಂದ ಈ ಮನ್ನಣೆ ಪಡೆದಿರುವುದು ನನಗೆ ನಿಜಕ್ಕೂ ಗೌರವ ತಂದಿದೆ. ಸಾಂಕ್ರಾಮಿಕ ರೋಗದ ಸಮಯದಲ್ಲಿ ಬೆಂಗಳೂರಿನ ಫ್ರೆಂಚ್ ಸಮುದಾಯಕ್ಕೆ ನೆರವು ನೀಡಲು ನಮಗೆ ಸಂತೋಷವಾಗಿತ್ತು. ಅದು ಪ್ರತಿಯೊಬ್ಬರಿಗೂ ಕಷ್ಟದ ಸಮಯವಾಗಿತ್ತು, ಮತ್ತು ಒಟ್ಟಾಗಿ ನಿಂತು ಒಬ್ಬರಿಗೊಬ್ಬರು ಸಹಾಯ ಮಾಡುವುದೇ ಎಲ್ಲಕ್ಕಿಂತ ಮುಖ್ಯವಾಗಿತ್ತು.

ಇದನ್ನು ಸಾಧ್ಯವಾಗಿಸಿದ ನಮ್ಮ ಸಮಗ್ರ ತಂಡಕ್ಕೆ ನಾನು ಆಭಾರಿಯಾಗಿದ್ದೇನೆ'' ಎಂದು ಹೇಳಿದರು.

ಈ ಸಮಾರಂಭದಲ್ಲಿ ಫ್ರಾನ್ಸ್ ಕಾನ್ಸುಲೇಟ್ ಜನರಲ್, ನಾರಾಯಣ ಹೆಲ್ತ್‌ನ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ, ಫ್ರೆಂಚ್ ಸಮುದಾಯದ ಸದಸ್ಯರು ಹಾಗೂ ಇತರ ಗಣ್ಯ ಆಹ್ವಾನಿತರು ಉಪಸ್ಥಿತರಿದ್ದರು.



ಲೀಜನ್ ಆಫ್ ಆನರ್ ನಂತರದ ದೇಶದ ಎರಡನೇ ಅತ್ಯುನ್ನತ ರಾಷ್ಟ್ರೀಯ ಗೌರವ

''ದೇವಿಯ ದರ್ಶನ ಪಡೆಯುವುದು ನಮ್ಮ ಭಕ್ತಿ; ದೇವಾಲಯದ ಪರಿಸರವನ್ನು ಸ್ವಚ್ಛವಾಗಿಡುವುದು ನಮ್ಮ ಕರ್ತವ್ಯ. ಭಕ್ತಿಯ ಪಾವಿತ್ರ್ಯ ಕಾಪಾಡುವುದರ ಜೊತೆಗೆ ಶಿಸ್ತು ಮತ್ತು ಸ್ವಚ್ಛತೆಯನ್ನು ಪಾಲಿಸುವುದೇ ನಿಜವಾದ ಧಾರ್ಮಿಕ ಜವಾಬ್ದಾರಿ.'



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

ಹಾಸನಾಂಬೆ ಉತ್ಸವ: ಭಕ್ತಿಯ ಸಂಭ್ರಮಕ್ಕೆ ಸ್ವಚ್ಛತೆ ಮತ್ತು ಶಿಸ್ತಿನ ಸಾಥ್!

ಕರ್ನಾಟಕದ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾಗಿರುವ ಹಾಸನಾಂಬೆ ದೇವಿಯ ದರ್ಶನೋತ್ಸವವು ಹಾಸನ ನಗರದಲ್ಲಿ ಭಕ್ತಿಯ ಸಂಭ್ರಮವನ್ನು ಮೂಡಿಸಿದೆ. ವರ್ಷಕ್ಕೊಮ್ಮೆ ಮಾತ್ರ ಸಾರ್ವಜನಿಕ ದರ್ಶನಕ್ಕೆ ಅವಕಾಶ ದೊರೆಯುವ ಈ ವಿಶಿಷ್ಟ ಸಂಪ್ರದಾಯದಿಂದಾಗಿ ರಾಜ್ಯದ ವಿವಿಧ ಭಾಗಗಳಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಹಾಸನಕ್ಕೆ ಆಗಮಿಸುತ್ತಾರೆ.

ದೇವಿಯ ದರ್ಶನಕ್ಕಾಗಿ ಭಕ್ತರು ಕಾತರದಿಂದ ಕಾಯುವ ಈ ಸಂದರ್ಭದಲ್ಲಿ ಭಕ್ತಿಯಷ್ಟೇ ಮಹತ್ವವನ್ನು ಸ್ವಚ್ಛತೆ, ಶಿಸ್ತು ಮತ್ತು ಸಾರ್ವಜನಿಕ ಜವಾಬ್ದಾರಿಗೂ ನೀಡಬೇಕಾಗಿದೆ.ಹಾಸನಾಂಬೆ ಉತ್ಸವವು ಕೇವಲ ಧಾರ್ಮಿಕ ಆಚರಣೆಯಲ್ಲ. ಅದು ನಮ್ಮ ಸಾಮಾಜಿಕ ಜವಾಬ್ದಾರಿ ಮತ್ತು ನಾಗರಿಕ ಪ್ರಜ್ಞೆಯನ್ನು ಪ್ರದರ್ಶಿಸುವ ಸಂದರ್ಭವೂ ಹೌದು. ಲಕ್ಷಾಂತರ ಜನರು ಒಂದೇ ಸ್ಥಳದಲ್ಲಿ ಸೇರುವ ಸಂದರ್ಭದಲ್ಲಿ ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ಅರಿತು ನಡೆದುಕೊಂಡರೆ ಮಾತ್ರ ಉತ್ಸವವು ಸುಗಮವಾಗಿ ನಡೆಯಲು ಸಾಧ್ಯ. ಸ್ವಚ್ಛತೆ ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ ದೇವಿಯ ದರ್ಶನಕ್ಕಾಗಿ ಆಗಮಿಸುವ ಭಕ್ತರು ದೇವಾಲಯದ ಆವರಣ, ರಸ್ತೆಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆಯನ್ನು ಕಾಪಾಡಬೇಕು.

ಪ್ಲಾಸ್ಟಿಕ್ ಬಾಟಲಿಗಳು, ಆಹಾರದ ಪೊಟ್ಟಣಗಳು, ಕಾಗದ ಮತ್ತು ಇತರ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಎಸೆಯದೆ ನಿಗದಿತ ಕಸದ ಬುಟ್ಟಿಗಳಲ್ಲಿ ಹಾಕಬೇಕು. ಸ್ವಚ್ಛತಾ ಕಾರ್ಮಿಕರು ಹಗಲಿರುಳು ಶ್ರಮಿಸುತ್ತಾರೆ ಎಂಬ ಕಾರಣಕ್ಕೆ ಸಾರ್ವಜನಿಕರು ತಮ್ಮ ಜವಾಬ್ದಾರಿಯಿಂದ ಹಿಂದೆ ಸರಿಯಬಾರದು. ಸ್ವಚ್ಛತೆ ಕೇವಲ ಸರ್ಕಾರದ ಅಥವಾ ಪೌರಕಾರ್ಮಿಕರ ಕೆಲಸವಲ್ಲ, ಅದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ದೇವಿಯ ಸನ್ನಿಧಿಗೆ ಸಲ್ಲಿಸುವ ಗೌರವವೂ ಹೌದು. **ಸರದಿಯಲ್ಲಿ ಶಿಸ್ತು, ಹಿರಿಯರಿಗೆ ಆದ್ಯತೆ :** ದೇವಿಯ ದರ್ಶನಕ್ಕಾಗಿ ಗಂಟೆಗಟ್ಟಲೆ ಕಾಯುವ ಸಂದರ್ಭದಲ್ಲಿ ಸರದಿಯನ್ನು ಮುರಿಯುವುದು, ನೂಕುನುಗ್ಗಲು ಮಾಡುವುದು ಮತ್ತು ಇತರರಿಗೆ ತೊಂದರೆ ನೀಡುವುದು ಸರಿಯಲ್ಲ. ಪೊಲೀಸ್ ಇಲಾಖೆ ಮತ್ತು ಸ್ವಯಂಸೇವಕರು ನೀಡುವ ಸೂಚನೆಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕು. ವೃದ್ಧರು,



ಮಹಿಳೆಯರು, ಮಕ್ಕಳು ಹಾಗೂ ವಿಶೇಷ ಅಗತ್ಯಗಳಿರುವ ಭಕ್ತರಿಗೆ ಅಗತ್ಯ ಸಹಕಾರ ನೀಡಬೇಕು. ಆತುರ ಮತ್ತು ಅವಸರಕ್ಕಿಂತ ಸಹನೆ ಮತ್ತು ಶಿಸ್ತು ಮುಖ್ಯ. ನಮ್ಮ ಒಂದು ಸಣ್ಣ ಸಹಕಾರವೂ ಮತ್ತೊಬ್ಬ ಭಕ್ತನಿಗೆ ನೆಮ್ಮದಿಯ ದರ್ಶನದ ಅವಕಾಶ ಕಲ್ಪಿಸಬಹುದು. **ಆಡಳಿತದೊಂದಿಗೆ ಸಾರ್ವಜನಿಕರ ಸಹಕಾರ :** ಹಾಸನಾಂಬೆ ಉತ್ಸವದ ಸಂದರ್ಭದಲ್ಲಿ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ನಗರಸಭೆ, ಆರೋಗ್ಯ ಇಲಾಖೆ ಮತ್ತು ವಿವಿಧ ಸೇವಾ ಸಂಘಟನೆಗಳು ಭಕ್ತರ ಅನುಕೂಲಕ್ಕಾಗಿ ಶ್ರಮಿಸುತ್ತವೆ. ಕುಡಿಯುವ ನೀರು, ಶೌಚಾಲಯ, ವಾಹನ ನಿಲುಗಡೆ, ವೈದ್ಯಕೀಯ ನೆರವು ಮತ್ತು ಸಂಚಾರ ನಿಯಂತ್ರಣದಂತಹ ವ್ಯವಸ್ಥೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು ಸಾರ್ವಜನಿಕರ ಜವಾಬ್ದಾರಿಯಾಗಿದೆ.ಅನಗತ್ಯ ವಾಹನ ಸಂಚಾರ ತಪ್ಪಿಸುವುದು, ಸಾರ್ವಜನಿಕ ಸ್ಥಳಗಳಲ್ಲಿ ಗದ್ದಲ ಮಾಡದಿರುವುದು ಮತ್ತು ತುರ್ತು ಸೇವೆಗಳಿಗೆ ಅಡ್ಡಿಯಾಗದಂತೆ ನಡೆದುಕೊಳ್ಳುವುದು ಅತ್ಯಗತ್ಯ.

ಭಕ್ತಿಯೊಂದಿಗೆ ನಾಗರಿಕ ಪ್ರಜ್ಞೆಯೂ ಬೆಳೆಯಲಿ ದೇವಿಯ ಮುಂದೆ ಕೈಮುಗಿದು ಪ್ರಾರ್ಥಿಸುವುದಷ್ಟೇ ಭಕ್ತಿಯಲ್ಲ; ಇತರರಿಗೆ ತೊಂದರೆ ನೀಡದೆ ನಡೆದುಕೊಳ್ಳುವುದು, ಪರಿಸರವನ್ನು ರಕ್ಷಿಸುವುದು ಮತ್ತು ಸಾರ್ವಜನಿಕ ಆಸ್ತಿಯನ್ನು ಕಾಪಾಡುವುದೂ ನಿಜವಾದ ಭಕ್ತಿಯ ಮೌಲ್ಯಗಳಾಗಿವೆ.ಹಾಸನಾಂಬೆ ಉತ್ಸವವು ನಮ್ಮ ಧಾರ್ಮಿಕ ಪರಂಪರೆಯ ಹೆಮ್ಮೆಯ ಸಂಕೇತ. **ಈ ಉತ್ಸವದ ಯಶಸ್ಸು ಕೇವಲ ಭಕ್ತರ ಸಂಖ್ಯೆಯಿಂದ ನಿರ್ಧಾರವಾಗುವುದಿಲ್ಲ:** ಸ್ವಚ್ಛತೆ, ಶಿಸ್ತು, ಸುರಕ್ಷತೆ ಮತ್ತು ಸಾರ್ವಜನಿಕರ ಸಹಕಾರದಿಂದಲೂ ನಿರ್ಧಾರವಾಗುತ್ತದೆ. ಜೈ ಹಾಸನಾಂಬೆ! ದೇವಿಯ ದರ್ಶನದಿಂದ ಮನಸ್ಸು ಪವಿತ್ರವಾಗಲಿ.

ನಮ್ಮ ನಡವಳಿಕೆಯಿಂದ ಪರಿಸರ ಸುಂದರವಾಗಲಿ. ಭಕ್ತಿಯ ಜೊತೆಗೆ ಸ್ವಚ್ಛತೆ ಮತ್ತು ಶಿಸ್ತನ್ನು ಪಾಲಿಸುವ ಮೂಲಕ ಹಾಸನಾಂಬೆ ಉತ್ಸವವನ್ನು ಮಾದರಿ ಉತ್ಸವವನ್ನಾಗಿ ರೂಪಿಸೋಣ.

ಒಂದೆಡೆ ಕಬ್ಬಿನ ಬೆಲೆ ಕಿಚ್ಚು, ಮತ್ತೊಂದೆಡೆ ನೀರಿಗಾಗಿ ರೈತರ ಸಮರ!

ಬೆಳೆ ಉಳಿಸಿಕೊಳ್ಳಲು ಅನ್ನದಾತರ ಹೋರಾಟ ತೀವ್ರ: ಇಂದು ಯಾದಗಿರಿ ಜಿಲ್ಲಾ ಬಂದ್‌ಗೆ ಕರೆ

• **ಇಲಿಯಾಸ್ ಪಟೇಲ್. ಬಳಗಾನೂರ ರಾಜ್ಯ ವಿಶೇಷ ವರದಿಗಾರರು**

• **ಉದಯವಾಹಿನಿ, ಯಾದಗಿರಿ:**


ಒಂದೆಡೆ ಕಬ್ಬಿನ ಬೆಲೆಗೆ ಸೂಕ್ತ ದರ ನಿಗದಿಪಡಿಸುವಂತೆ ರೈತರ ಹೋರಾಟ ತೀವ್ರಗೊಳ್ಳುತ್ತಿದ್ದರೆ, ಮತ್ತೊಂದೆಡೆ ಬೆಳೆದ ಬೆಳೆಗಳನ್ನು ಉಳಿಸಿಕೊಳ್ಳಲು ನೀರಿಗಾಗಿ ಅನ್ನದಾತರು ಬೀದಿಗಿಳಿದಿದ್ದಾರೆ. ಬಸವಸಾಗರ ಜಲಾಶಯದ ನೀರನ್ನು ನಂಬಿಕೊಂಡು ಸಾವಿರಾರು ಎಕರೆ ಪ್ರದೇಶದಲ್ಲಿ ವಿವಿಧ ಬೆಳೆಗಳನ್ನು ಬೆಳೆದಿರುವ ಯಾದಗಿರಿ ಜಿಲ್ಲೆಯ ರೈತರು, ಕಾಲುವೆಗಳಿಗೆ ನಿರಂತರ ನೀರು ಹರಿಸುವಂತೆ ಆಗ್ರಹಿಸಿ ಸರ್ಕಾರದ ವಿರುದ್ಧ ಹೋರಾಟಕ್ಕೆ ಮುಂದಾಗಿದ್ದಾರೆ.

ಜಿಲ್ಲೆಯ ರೈತರು ಭತ್ತ, ಹತ್ತಿ, ತೊಗರಿ, ಮೆಣಸಿನಕಾಯಿ ಸೇರಿದಂತೆ ಹಲವು ಬೆಳೆಗಳನ್ನು ಬೆಳೆದಿದ್ದು, ಇದೀಗ ಅವು ಬೆಳವಣಿಗೆಯ ನಿರ್ಣಾಯಕ ಹಂತದಲ್ಲಿವೆ. ಈ ಸಂದರ್ಭದಲ್ಲಿ ಕಾಲುವೆಗಳಿಗೆ ನೀರು ಸ್ಥಗಿತಗೊಂಡರೆ ರೈತರು ಭಾರೀ ನಷ್ಟ ಅನುಭವಿಸಬೇಕಾಗುತ್ತದೆ ಎಂಬ ಆತಂಕ ಎದುರಾಗಿದೆ. ಹೀಗಾಗಿ ಬಸವಸಾಗರ ಜಲಾಶಯದ ಎಡದಂಡೆ ಹಾಗೂ ಬಲದಂಡೆ ಕಾಲುವೆಗಳಿಗೆ ಡಿಸೆಂಬರ್ ಅಂತ್ಯದವರೆಗೆ ನಿರಂತರವಾಗಿ ನೀರು ಹರಿಸಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ಡಿಸೆಂಬರ್ ಅಂತ್ಯದವರೆಗೆ ನೀರು ಹರಿಸಲು ಪಟ್ಟು

ಕಾಲುವೆಗಳಿಗೆ ನವೆಂಬರ್ 12ರವರೆಗೆ ನೀರು ಹರಿಸುವ ಕುರಿತು ಪರಿಶೀಲಿಸಿ ಮುಂದಿನ ನಿರ್ಧಾರ ಕೈಗೊಳ್ಳುವುದಾಗಿ ಸರ್ಕಾರ ಭರವಸೆ ನೀಡಿದೆ ಎನ್ನಲಾಗಿದೆ. ಆದರೆ ಈ ಭರವಸೆಗೆ ರೈತರು ತೃಪ್ತರಾಗಿಲ್ಲ. ಬೆಳೆಗಳು ಕಟಾವಿಗೆ ಬರುವವರೆಗೆ ನೀರಿನ ಅಗತ್ಯವಿದ್ದು, ಕೇವಲ ಕೆಲವೇ ದಿನಗಳ ಕಾಲ ನೀರು ಹರಿಸಿದರೆ ರೈತರ ಸಮಸ್ಯೆ ಬಗೆಹರಿಯುವುದಿಲ್ಲ ಎಂಬುದು ಹೋರಾಟಗಾರರ ವಾದವಾಗಿದೆ.

ಈಗಾಗಲೇ ಬೀಜ, ಗೊಬ್ಬರ, ಕೂಲಿ ಸೇರಿದಂತೆ ಕೃಷಿ ಚಟುವಟಿಕೆಗಳಿಗೆ ಅಪಾರ ಹಣ ಹೂಡಿರುವ ರೈತರು, ಕೊನೆಯ ಹಂತದಲ್ಲಿ ನೀರಿಲ್ಲದೆ ಬೆಳೆ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ. ಆದ್ದರಿಂದ ಸರ್ಕಾರ ಡಿಸೆಂಬರ್ ಅಂತ್ಯದವರೆಗೆ ನೀರು ಹರಿಸುವ ಕುರಿತು ಸ್ಪಷ್ಟ ಆದೇಶ ಹೊರಡಿಸಬೇಕು ಎಂದು ಆಗ್ರಹಿಸಿದ್ದಾರೆ.



> ರೈತರು ಸರ್ಕಾರದ ವಿರುದ್ಧ ಹೋರಾಟಕ್ಕೆ ಇಳಿಯುವಂತಹ ಪರಿಸ್ಥಿತಿ ನಿರ್ಮಾಣವಾಗಬಾರದು. ಅನ್ನದಾತರ ಬದುಕಿನೊಂದಿಗೆ ಸರ್ಕಾರ ಚೆಲ್ಲಾಟವಾಡಬಾರದು. ನವೆಂಬರ್ 6ರಂದು ನಡೆಯಲಿರುವ ಜಿಲ್ಲಾ ಬಂದ್‌ಗೆ ರೈತರು, ಸಾರ್ವಜನಿಕರು ಹಾಗೂ ವ್ಯಾಪಾರಸ್ಥರು ಬೆಂಬಲ ನೀಡಬೇಕು. ಈ ಹೋರಾಟಕ್ಕೆ ಯಾವುದೇ ರಾಜಕೀಯ ಉದ್ದೇಶವಿಲ್ಲ. ರೈತರ ಬೆಳೆಗಳನ್ನು ಉಳಿಸಿ, ಅವರಿಗೆ ನೀರಿನ ಭದ್ರತೆ ಕಲ್ಪಿಸುವುದೇ ನಮ್ಮ ಪ್ರಮುಖ ಉದ್ದೇಶವಾಗಿದೆ
> – ಅಮೀನರೆಡ್ಡಿ ಯಾಳಗಿ, ಮಾಜಿ ಸಚಿವ

ನವೆಂಬರ್ 6ರಂದು ಜಿಲ್ಲಾ ಬಂದ್‌ಗೆ ಕರೆ

ರೈತರ ಬೇಡಿಕೆಗೆ ಸರ್ಕಾರ ಸ್ಪಂದಿಸದ ಹಿನ್ನೆಲೆಯಲ್ಲಿ ನವೆಂಬರ್ 6ರಂದು ಯಾದಗಿರಿ ಜಿಲ್ಲಾ ಬಂದ್‌ಗೆ ಕರೆ ನೀಡಲಾಗಿದೆ. ಮಾಜಿ ಸಚಿವ ಹಾಗೂ ಶಾಸಕ ನರಸಿಂಹ ನಾಯಕ

> ಯಾದಗಿರಿ ಜಿಲ್ಲೆಯ ರೈತರು ಬಸವಸಾಗರ ಜಲಾಶಯದ ನೀರನ್ನು ನಂಬಿಕೊಂಡು ಸಾವಿರಾರು ಎಕರೆ ಪ್ರದೇಶದಲ್ಲಿ ಬೆಳೆಗಳನ್ನು ಬೆಳೆದಿದ್ದಾರೆ. ಇದೀಗ ಬೆಳೆಗಳು ನಿರ್ಣಾಯಕ ಹಂತದಲ್ಲಿದ್ದು, ಈ ಸಂದರ್ಭದಲ್ಲಿ ನೀರು ಸ್ಥಗಿತಗೊಂಡರೆ ರೈತರ ವರ್ಷಪೂರ್ತಿ ಶ್ರಮ ವ್ಯರ್ಥವಾಗಲಿದೆ. ಕೇವಲ ಭರವಸೆ ನೀಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಡಿಸೆಂಬರ್ ಅಂತ್ಯದವರೆಗೆ ನಿರಂತರ ನೀರು ಹರಿಸುವ ಸ್ಪಷ್ಟ ಆದೇಶವನ್ನು ಸರ್ಕಾರ ಹೊರಡಿಸಬೇಕು
> –ನರಸಿಂಹ ನಾಯಕ (ರಾಜುಗೌಡ) ಮಾಜಿ ಸಚಿವ

(ರಾಜುಗೌಡ) ಅವರ ನೇತೃತ್ವದಲ್ಲಿ ಸುರಪುರ ಭಾಗದಲ್ಲಿ ಹೋರಾಟಕ್ಕೆ ಸಿದ್ಧತೆ ನಡೆದಿದ್ದು, ಯಾದಗಿರಿಯಲ್ಲಿ ಮಹೇಶ್ ರೆಡ್ಡಿ ಸೇರಿದಂತೆ ಬಿಜೆಪಿ ಮುಖಂಡರು ಹಾಗೂ ವಿವಿಧ ರೈತಪರ ಸಂಘಟನೆಗಳು ಬಂದ್‌ಗೆ ಬೆಂಬಲ ಸೂಚಿಸಿವೆ.

ಜಿಲ್ಲೆಯ ರೈತರ ನೀರಾವರಿ ಸಮಸ್ಯೆ ಒಂದು ತಾಲ್ಲೂಕಿನ ಸಮಸ್ಯೆಯಾಗಿರದೆ ಇಡೀ ಜಿಲ್ಲೆಯ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ವಿಚಾರವಾಗಿದೆ. ಹೀಗಾಗಿ ರೈತರು, ವ್ಯಾಪಾರಸ್ಥರು, ಸಾರ್ವಜನಿಕರು ಹಾಗೂ ವಿವಿಧ ಸಂಘ–ಸಂಸ್ಥೆಗಳು ಪಕ್ಷಾತೀತವಾಗಿ ಬಂದ್‌ಗೆ ಬೆಂಬಲ ನೀಡುವಂತೆ ಮುಖಂಡರು ಮನವಿ ಮಾಡಿದ್ದಾರೆ.

ನಿರಂತರ ನೀರು ಹರಿಸುವಂತೆ ಆಗ್ರಹಿಸಿ ಹೋರಾಟ

ಒಟ್ಟಿನಲ್ಲಿ, ಕಬ್ಬಿನ ಬೆಲೆ ವಿಚಾರದ ಬೆನ್ನಲ್ಲೇ ನೀರಾವರಿ ಸಮಸ್ಯೆಯೂ ರೈತರ ಆಕ್ರೋಶಕ್ಕೆ ಕಾರಣವಾಗಿದೆ. ಈಗಾಗಲೇ ಬೆಳೆ ಉಳಿಸಿಕೊಳ್ಳಲು ಹೋರಾಟದ ಹಾದಿ ಹಿಡಿದಿರುವ ಅನ್ನದಾತರ ಬೇಡಿಕೆಗೆ ಸರ್ಕಾರ ಯಾವ ರೀತಿ ಸ್ಪಂದಿಸಲಿದೆ ಎಂಬುದು ಕುತೂಹಲ ಮೂಡಿಸಿದೆ. ನವೆಂಬರ್ 6ರ ಜಿಲ್ಲಾ ಬಂದ್‌ಗೆ ಜಿಲ್ಲೆಯಾದ್ಯಂತ ಎಂತಹ ಪ್ರತಿಕ್ರಿಯೆ ವ್ಯಕ್ತವಾಗಲಿದೆ ಎಂಬುದರತ್ತ ಎಲ್ಲರ ಗಮನ ನೆಟ್ಟಿದೆ.

ಮುಲ್ಲಾಮಾರಿ ನದಿಗೆ 0.05ಟಿಎಂಸಿ ನೀರು ಬಿಡುಗಡೆ: ಸಾರ್ವಜನಿಕರು ಹರ್ಷ

• **ಉದಯವಾಹಿನಿ ಚಿಂಚೋಳಿ:**

ತಾಲ್ಲೂಕಿನ ನಾಗರಾಳ ಜಲಾಶಯದಿಂದ ಕೆಳದಂಡೆ ಮುಲ್ಲಾಮಾರಿ ನದಿಗೆ 0.05ಟಿಎಂಸಿ ನೀರು ಹರಿ ಬಿಡಲಾಗಿದೆ ಎಂದು ಜಲಾಶಯ ಎಇಇ ಅಮೃತ ಪವ್ವಾರ ತಿಳಿಸಿದ್ದಾರೆ.

ಕಲಬುರ್ಗಿ ವಿಭಾಗದ ಪ್ರಾದೇಶಿಕ ಆಯುಕ್ತರು ಆದೇಶದ ಮೇರೆಗೆ ಕೆಳದಂಡೆ ಮುಲ್ಲಾಮಾರಿ ನದಿಯು ಬತ್ತಿ ಹೋಗಿರುವುದರಿಂದ ಧನಕರುಗಳಿಗೆ,ಕುರಿ ಮೇಕೆಗಳಿಗೆ ಕುಡಿಯಲು ನೀರು ಮತ್ತು ಸಾರ್ವಜನಿಕರಿಗೆ ಕುಡಿಯುವ ನೀರು ಧಾಹ ನಿಗಿಸಲು ಮುಲ್ಲಾಮಾರಿ ನದಿಗೆ ನೀರು ಬಿಡಲಾಗಿದೆ ಇದರಿಂದ ಬೋರವೇಲ್‌ಗಳಲ್ಲಿ ನೀರು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಪೈಪ್ಲೈನ್ ಮೂಲಕ ಸರಬರಾಜು ಮಾಡಲು ಅನುಕೂಲವಾಗುತ್ತದೆ ಇದರ ಸದುಪಯೋಗ ಪಡೆದುಕೊಳ್ಳಬೇಕು ಹಾಗೂ ಅನೇಕ ಷರತ್ತುಗಳು ಹಾಕಿ ಆದೇಶ ಹೊರಡಿಸಲಾಗಿದೆ ಎಂದರು.

ನಂ.04ರಂದು 11–45ಗಂಟೆಗೆ ಜಲಾಶಯ ನೀರು ಬಿಡಲಾಗಿದ್ದು ನಾಗರಾಳ,ಚಿಮ್ಮಾನಚೋಡ,ತಾದಲಾಪೂರ, ಕನಕಪುರ,ಗಾರಂಪಳ್ಳಿ,ಗೌನಳ್ಳಿ, ನೀಮಾಹೋಸಳ್ಳಿ,ಮೂಲಕ ಚಿಂಚೋಳಿಗೆ ನ.05ರಂದು ಮಧ್ಯಾಹ್ನ 01ಗಂಟೆಗೆ ತಲುಪಿವೆ,ಮಧ್ಯಾಹ್ನ ನಂತರ ಚಂದಾಪೂರ,ಪೋಲಕಪಳ್ಳಿ, ಅಣವಾರ,ಗಂಗನಪಳ್ಳಿ ಮೂಲಕ ನೀರು ಹಾದುಹೋಗಿವೆ ಎಂದರು.



> ಗ್ರಾ.ಪಂ.ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಪೈಪ್ಲೈನ್ ಮೂಲಕ ಸರಬರಾಜು ಮಾಡುವ ಕುಡಿಯುವ ನೀರು ಅನುಕೂಲವಾಗುತ್ತವೆ ಹೀಗಾಗಿ ನೀರಿನಿಂದ ಬಹಳಷ್ಟು ಅನುಕೂಲವಾಗುತ್ತದೆ ಎಂದು ವ್ಯಕ್ತಪಡಿಸಿದರು.
> –ಗೋಪಾಲ ಗಾರಂಪಳ್ಳಿ ಹರ್ಷ

ತಾಲ್ಲೂಕಿನ ರೈತ ಮುಖಂಡರು,ಹೋರಾಟಗಾರರು ನೀರಿಗಾಗಿ ಸಾಕಷ್ಟು ಹೋರಾಟ ಮಾಡಿದ ಪ್ರಮಾಣವಾಗಿ ಆಯುಕ್ತರು,ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಅಧಿಕಾರಿಗಳು ನಿನ್ನೆ ನಾಗರಾಳ ಜಲಾಶಯದ ನೀರು ಮುಲ್ಲಾಮಾರಿ ನದಿಗೆ ಬಿಟ್ಟಿರುವುದರಿಂದ ಧನಕರುಗಳಿಗೆ ಸಾರ್ವಜನಿಕರಿಗೆ ಕುರಿ ಮೇಕೆಗಳಿಗೆ ಬಹಳಷ್ಟು ಅನುಕೂಲವಾಗಿದೆ ಬತ್ತಿ ಹೋಗಿದ ಬೋರವೇಲ್ ಗಳಲ್ಲಿ ನೀರು ಬರುತ್ತವೆ .

ಮುಲ್ಲಾಮಾರಿ ನದಿಗೆ ನೀರಿನ ಆಗಮನ

• **ಉದಯವಾಹಿನಿ,ಚಿಂಚೋಳಿ:**

ತಾಲ್ಲೂಕಿನ ನಾಗರಾಳ ಜಲಾಶಯದಿಂದ ಕೆಳದಂಡೆ ಮುಲ್ಲಾಮಾರಿ ನದಿಯು ಬತ್ತಿ ಹೋಗಿರುವುದರಿಂದ ಧನಕರುಗಳಿಗೆ ಕುರಿ ಮೇವು ಸಾರ್ವಜನಿಕರಿಗೆ ಕುಡಿಯಲು ನೀರಿನ ಅಭಾವ ಆಗಿರುವುದರಿಂದ ತಾಲ್ಲೂಕಿನ ಹೋರಾಟಗಾರರು ಸಮಾಜ ಸೇವಕರು,ರೈತರು ವಿವಿಧ ರಾಜಕೀಯ ಪಕ್ಷಗಳು ಮುಖಂಡರು ಸಾಕಷ್ಟು ಹೋರಾಟ ಮಾಡಿ ಜಿಲ್ಲಾಡಳಿತ ಮತ್ತು ಸರ್ಕಾರದ ಗಮನ ಸೆಳೆದಿದ್ದರು ಅದರ ಪ್ರತಿಫಲವಾಗಿ ಜಿಲ್ಲಾಡಳಿತ ಸಮರ್ಪಕವಾಗಿ ವರದಿ ಆಧಾರಿಸಿ ಮುಲ್ಲಾಮಾರಿ ನದಿಗೆ ನೀರು ಬಿಟ್ಟಿರುವುದರಿಂದ ಸಾರ್ವಜನಿಕರು ನದಿಯ ನೀರಿನಲ್ಲಿ ನಿಂತ್ತು ಹರ್ಷ ವ್ಯಕ್ತಪಡಿಸಿದರು ಎಂದು ಗೋಪಾಲರಾವ ಕಟ್ಟಿಮನಿ ಹೇಳಿದರು.

ಶ್ರೀಮಂತ ಕಟ್ಟಿಮನಿ,ಕೆಎಂ ಬಾರಿ, ಲಕ್ಷ್ಮಣ ಆವುಂಟಿ, ರಾಜು ಪವ್ವಾರ, ಖಲೀಲ್ ಪಟೇಲ್, ಕಾಶಿನಾಥ್ ನಾಟೀಕಾರ, ಶ್ರೀನಿವಾಸ, ಭೀಮಶೆಟ್ಟಿ ಮುರುಡಾ, ಕಿರಣ ಮಡಿವಾಳ, ಮಲ್ಲಿಕಾರ್ಜುನ ಸ್ವಾಮಿ ಅನೇಕರಿದ್ದರು.



ವಿವಿಧ ಪ್ರದೇಶಗಳಿಗೆ ಮಹಾನಗರಪಾಲಿಕೆ ಆಯುಕ್ತರ ಭೇಟಿ

• **ಉದಯವಾಹಿನಿ ಮಂಗಳೂರು**

ಮಂಗಳೂರು ಮಹಾನಗರಪಾಲಿಕೆ ಆಯುಕ್ತ ರಾಹುಲ್ ರತ್ನಂ ಪಾಂಡೆ ಅವರು ನಗರದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ, ಸ್ಥಳೀಯ ನಿವಾಸಿಗಳೊಂದಿಗೆ ಸಮಾಲೋಚನೆ ನಡೆಸಿ, ಸಾರ್ವಜನಿಕ ಸಮಸ್ಯೆಗಳನ್ನು ಪರಿಶೀಲಿಸಿದರು.

ಉಳ್ಳಾಲ ಹೊಯ್ಗೆ ಪ್ರದೇಶಕ್ಕೆ ಭೇಟಿ ನೀಡಿದ ಆಯುಕ್ತರು, ಅಲ್ಲಿನ ಹಾನಿಗೊಳಗಾದ ಕಾಲುಸೇತುವೆ ಹಾಗೂ ಕುಡಿಯುವ ನೀರಿನ ಸೌಲಭ್ಯಕ್ಕೆ ಸಂಬಂಧಿಸಿದ ಸಾರ್ವಜನಿಕರ ದೂರುಗಳ ಪರಿಶೀಲನೆಗಾಗಿ ದೋಣಿಯಲ್ಲಿ ಸಂಚರಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ನಿವಾಸಿಗಳು ಕುಡಿಯುವ ನೀರಿನ ಸಮಸ್ಯೆ ಹಾಗೂ ಪೈಪ್‌ಲೈನ್ ಅಳವಡಿಕೆಯ ಕುರಿತು ವಿವರಿಸಿದರು. ಅಲ್ಲದೆ, ಪ್ರದೇಶಕ್ಕೆ ಬಸ್ ನಿಲ್ದಾಣ, ರಸ್ತೆ ಹಾಗೂ ಬಸ್ ಸೌಲಭ್ಯ ಕಲ್ಪಿಸುವಂತೆ ಮನವಿ ಮಾಡಿದರು. ಸ್ಥಳದಲ್ಲೇ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿದ ಆಯುಕ್ತರು, ಸಮಸ್ಯೆಗಳ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಮುಂಬರುವ ದಿನಗಳಲ್ಲಿ ದೀರ್ಘ ಬೇಸಿಗೆ ಹಾಗೂ ಜಿಲ್ಲೆಯಲ್ಲಿ ಬರಗಾಲದಂತಹ ಪರಿಸ್ಥಿತಿ ಎದುರಾಗುವ ಸಾಧ್ಯತೆ ಇರುವುದರಿಂದ, ಪ್ರಸ್ತುತ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಮೊದಲ ಆದ್ಯತೆ ನೀಡಬೇಕಾಗಿದೆ ಎಂದು ನಿವಾಸಿಗಳಿಗೆ ತಿಳಿಸಿದರು. ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಕೆಗೆ ಸಂಬಂಧಿಸಿದಂತೆ ಕನಿಷ್ಠ 50 ನಿವಾಸಿಗಳ ಸಹಿ ಹಾಗೂ ಅನುಮೋದನೆಯೊಂದಿಗೆ ಮನವಿ ಪತ್ರವನ್ನು ಸಿದ್ಧಪಡಿಸಿ ನವೆಂಬರ್ 4 ರೊಳಗೆ ಪಾಲಿಕೆಗೆ ಸಲ್ಲಿಸುವಂತೆ ಸೂಚಿಸಿದರು.



ಬಳಿಕ ಬಜಾಲ್‌ನಲ್ಲಿರುವ ಮಂಗಳೂರು ಮಹಾನಗರಪಾಲಿಕೆಯ ಸಹಯೋಗದೊಂದಿಗೆ ಪ್ಲಾಸ್ಟಿಕ್ ಫಿಶರ್ ಎಂಬ ಸ್ವಯಂಸೇವಾ ಸಂಸ್ಥೆ ನಿರ್ವಹಿಸುತ್ತಿರುವ ಮೆಟೀರಿಯಲ್ ರಿಕವರಿ ಪ್ಲಾಂಟ್‌ಗೆ ಭೇಟಿ ನೀಡಿ, ತ್ಯಾಜ್ಯ ಮರುಬಳಕೆ ಪ್ರಕ್ರಿಯೆಯನ್ನು ಪರಿಶೀಲಿಸಿದರು. ಸಂಸ್ಥೆಯ ಪ್ರತಿನಿಧಿಗಳೊಂದಿಗೆ ಚರ್ಚಿಸಿ, ಅವರ ಕಾರ್ಯಚಟುವಟಿಕೆಗಳಿಗೆ ಪಾಲಿಕೆಯಿಂದ ಅಗತ್ಯ ಸಹಕಾರ ಮತ್ತು ಬೆಂಬಲ ನೀಡಲಾಗುವುದು ಎಂದು ತಿಳಿಸಿದರು.

ಭಾಗಿಲೋಕತಂತ್ರ ಉಳಿಸಿ, ಅರಾಜಕತೆ ಅಳಿಸಿ ಅಭಿಯಾನ

• **ಉದಯವಾಹಿನಿ ಮಂಗಳೂರು:**

ದೇಶದ ಮತಪಟ್ಟಿಯ ಸಮಗ್ರ ಶುದ್ಧೀಕರಣದ ಎಸ್.ಐ.ಆರ್ ಪ್ರಕ್ರಿಯೆ ಕುರಿತು ಅಪಪ್ರಚಾರ ಮಾಡುವ ಮೂಲಕ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಸಾಂವಿಧಾನಿಕ ಸಂಸ್ಥೆಗಳ ಮೇಲೆ ನಿರಂತರ ದಾಳಿ ಮಾಡುತ್ತಿರುವ ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳ ಪ್ರಜಾಪ್ರಭುತ್ವ ವಿರೋಧಿ ನಿಲುವುಗಳ ವಿರುದ್ಧ ನ. 6ರಂದು ಮಂಗಳೂರಿನಲ್ಲಿ ''ಲೋಕತಂತ್ರ ಉಳಿಸಿ, ಅರಾಜಕತೆ ಅಳಿಸಿ, ಸಂವಿಧಾನ ರಕ್ಷಿಸಿ'' ಬೃಹತ್ ಪಾದಯಾತ್ರೆ, ಹಾಗೂ ಸಾರ್ವಜನಿಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ದಕ್ಷಿಣ ಕನ್ನಡ ಸಂಸದ ಹಾಗೂ ಬಿಜೆಪಿ ರಾಜ್ಯ ಕಾರ್ಯದರ್ಶಿ ಕ್ಯಾ. ಬ್ರಿಜೇಶ್ ಚೌಟ ತಿಳಿಸಿದ್ದಾರೆ.

ಈ ಬೃಹತ್ ಕಾರ್ಯಕ್ರಮದಲ್ಲಿ ಕೇಂದ್ರ ಪೆಟ್ರೋಲಿಯಂ ಮತ್ತು ಪ್ರವಾಸೋದ್ಯಮ ಖಾತೆ ರಾಜ್ಯ ಸಚಿವರಾದ ಸುರೇಶ್ ಗೋಪಿ, ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದರಾದ ತೇಜಸ್ವಿ ಸೂರ್ಯ, ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ ಹಾಗೂ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಶಾಸಕರು, ಸಂಸದರು ಹಾಗೂ ಪಕ್ಷದ ಪ್ರಮುಖ ನಾಯಕರು ಭಾಗವಹಿಸಲಿದ್ದಾರೆ.

ಜಿಲ್ಲಾ ಬಿಜೆಪಿ ನೇತೃತ್ವದಲ್ಲಿ ನಡೆಯಲಿರುವ ಈ ಬೃಹತ್ ಪಾದಯಾತ್ರೆಯು ಶುಕ್ರವಾರ ಅಪರಾಹ್ನ 3:00 ಗಂಟೆಗೆ ಮಂಗಳೂರಿನ ಕ್ಲಾಕ್ ಟವರ್ ಬಳಿಯ ಮಿನಿ ವಿಧಾನ ಸೌಧದಿಂದ ಆರಂಭಗೊಂಡು ಕದ್ರಿ ಮೈದಾನದವರೆಗೆ ಸಾಗಲಿದೆ. ತದನಂತರ ಕದ್ರಿ ಮೈದಾನದಲ್ಲಿ ಬೃಹತ್ ಸಾರ್ವಜನಿಕ ಸಭೆ ನಡೆಯಲಿದೆ ಎಂದು ಸಂಸದರು ವಿವರಿಸಿದ್ದಾರೆ. ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಯತ್ನಿಸುತ್ತಿರುವ ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಮೈತ್ರಿಕೂಟದ ಹುನ್ನಾರದ ವಿರುದ್ಧ ಹಾಗೂ ಪ್ರಜಾಪ್ರಭುತ್ವದ ಅಸ್ತಿತ್ವವನ್ನು ಬಲಪಡಿಸಲು ಜನಸಾಮಾನ್ಯರ ಹಕ್ಕುಗಳಿಗಾಗಿ ನಡೆಯುತ್ತಿರುವ ಈ ಹೋರಾಟಕ್ಕೆ ಯುವಜನರ ಬೆಂಬಲ ಅತ್ಯಗತ್ಯವಾಗಿದ್ದು, ಸಾರ್ವಜನಿಕರಲ್ಲಿ ವಿನಂತಿಸಿಕೊಂಡಿದ್ದಾರೆ



> ಸಮಸ್ತ ಸಾರ್ವಜನಿಕರು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪಾದಯಾತ್ರೆಯಲ್ಲಿ ಭಾಗವಹಿಸುವ ಮೂಲಕ ಈ ಕಾರ್ಯಕ್ರಮವನ್ನು ಅಭೂತಪೂರ್ವವಾಗಿ ಯಶಸ್ವಿಗೊಳಿಸಬೇಕು ಎಂದು ಕ್ಯಾ. ಚೌಟ ಪತ್ರಿಕಾ ಪ್ರಕಟಣೆ ಮೂಲಕ ವಿನಂತಿಸಿಕೊಂಡಿದ್ದಾರೆ.

ರಾಜ್ಯಸರ್ಕಾರದ ಜನವಿರೋಧಿ ನೀತಿ ಬಿಜೆಪಿ ಜನಾಂದೋಲನ

• **ಉದಯವಾಹಿನಿ, ಪುತ್ತೂರು:**

ಪಂಚ ಗ್ಯಾರೆಂಟಿಯ ಆಸೆ ತೋರಿಸಿ ಅಧಿಕಾರ ಪಡೆದಿರುವ ರಾಜ್ಯ ಕಾಂಗ್ರೆಸ್ ಸರಕಾರವು ಅಧಿಕಾರ ಹಿಡಿದ ದಿನದಿಂದಲೇ ಭ್ರಷ್ಟಾಚಾರದಲ್ಲಿ ತೊಡಗಿದ್ದು, ನಾವು ಕಟ್ಟದ ತೆರಿಗೆ ಹಣ, ನಮ್ಮ ಉಪಯೋಗಕ್ಕೆ ಸಿಗದಂತೆ ಮಾಡಿತು. ಪರಿಶಿಷ್ಟ ಜಾತಿ, ಪಂಗಡದ ಅಭಿವೃದ್ಧಿಗಾಗಿ ಇರಿಸಿದ ಹಣವನ್ನು ನುಂಗಿ ನೀರು ಕುಡಿಯಿತು. ವೃದ್ಧರ, ವಿಧವೆಯರ ಪಿಂಚಣಿಯನ್ನು ತಡೆ ಹಿಡಿದಿರುವ ಸರ್ಕಾರವು ಅಂಗವಿಕಲರ ಪಿಂಚಣಿಯನ್ನು ನಿಲ್ಲಿಸಿ ಅವರ ಕಣ್ಣೀರಿಗೆ ಕಾರಣವಾಗಿದೆ. ಅವರ ಕಣ್ಣೀರು ಸರ್ಕಾರಕ್ಕೆ ಶಾಪವಾಗಲಿದೆ ಎಂದು ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಹೇಳಿದರು.ಅವರು ರಾಜ್ಯ ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿ ವಿರೋಧಿಸಿ ಬಿಜೆಪಿ ನಗರ ಮಂಡಲದ ವತಿಯಿಂದ ಪುತ್ತೂರು ತಾಲ್ಲೂಕು ಆಡಳಿತ ಸೌಧದ ಮುಂಭಾಗದಲ್ಲಿನ ಅಮರ್ ಜವಾನ್ ಜ್ಯೋತಿ ಸ್ಮಾರಕದ ಬಳಿಯಲ್ಲಿ ನಡೆದ 'ನಮ್ಮ ಹಕ್ಕು ನಮಗೆ ನೀಡಿ' ಹಕ್ಕೊತ್ತಾಯ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ 3 ವರ್ಷಗಳಲ್ಲಿ ಯಾವುದೇ ವಸತಿ ಯೋಜನೆಯಡಿ ಮನೆಯನ್ನು ನೀಡಿಲ್ಲ, ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ತಡೆ ನೀಡಿದೆ. ಹೈಕೋರ್ಟ್ ಛೀಮಾರಿ ಹಾಕಿದರೂ ನಾಚಿಕೆ ಇಲ್ಲದ ಸರಕಾರಕ್ಕೆ ಇಚ್ಛಾಶಕ್ತಿಯೇ ಇಲ್ಲ. ಪರಿಣಾಮ ಕೇಂದ್ರ ಸರಕಾರದ ಎಷ್ಟೋ ಯೋಜನೆಗಳು ಹಿಂದೆ ಹೋಗಿವೆ. ಹಾಗಾಗಿ ಇಲ್ಲಿನ ಪ್ರತಿಯೊಂದು ಹೆಜ್ಜೆಯೂ ಪ್ರತಿ ಹೆಣ್ಣುಮಕ್ಕಳ, ಅಂಗವಿಕಲರ, ಬಡವರ ಪರವಾದ ಹೆಜ್ಜೆಯಾಗಿದೆ ಎಂದರು.



> ನಗರಸಭೆಗೆ ಆಡಳಿತ ಅವಧಿ ಮುಗಿದು ಒಂದು ವರ್ಷ ಕಳೆದಿದ್ದು, ಈ ತನಕ ಚುನಾವಣೆಯಾಗಿಲ್ಲ. ಹಿಂದಿನ ಬಿಜೆಪಿ ಸರ್ಕಾರವು ಆಡಳಿತದಲ್ಲಿ ಯಾವುದೇ ಬೇಧ ಭಾವ ತೋರದೆ ನಗರಸಭೆಯ ಎಲ್ಲಾ 31 ವಾರ್ಡ್ ಗಳಿಗೂ ಸಮಾನ ಅನುದಾನ ಬಿಡುಗಡೆ ಮಾಡಿತ್ತು.

ಬೆಳಕಿನ ಹಬ್ಬ ಮಕ್ಕಳ ಪಾಲಿಗೆ ಕತ್ತಲಾಗದಿರಲಿ : ದ.ಕ. ಜಿಲ್ಲಾ ಆರೋಗ್ಯಾಧಿಕಾರಿ

• **ಉದಯವಾಹಿನಿ ಮಂಗಳೂರು:**

ದೀಪಾವಳಿ ಹಬ್ಬದ ಸಂಭ್ರಮದಲ್ಲಿ ಪಟಾಕಿ ಸಿಡಿಸುವಾಗ ಸ್ವಲ್ಪ ಅಜಾಗರೂಕತೆ ವಹಿಸಿದರೂ ಮಕ್ಕಳ ಕಣ್ಣು, ಮುಖಕ್ಕೆ ಗಾಯವಾಗಿ ಇಡೀ ಬದುಕು ಕತ್ತಲಾಗುವ ಅಪಾಯವಿರುತ್ತದೆ. ಆದ್ದರಿಂದ ಪೋಷಕರು ಹಾಗೂ ನಾಗರಿಕರು ಅತ್ಯಂತ ಎಚ್ಚರಿಕೆ ವಹಿಸಬೇಕು ಎಂದು ದಕ್ಷಿಣ ಕನ್ನಡ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ತಿಮ್ಮಯ್ಯ ಹೆಚ್.ಆರ್. ಮನವಿ ಮಾಡಿದ್ದಾರೆ.ಜಿಲ್ಲೆಯ ಸಾರ್ವಜನಿಕರನ್ನುದ್ದೇಶಿಸಿ ವಿಡಿಯೋ ಸಂದೇಶ ನೀಡಿರುವ ಅವರು, ಹಬ್ಬದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಹಾಗೂ ಆರೋಗ್ಯ ಇಲಾಖೆಯ ಸನ್ನದ್ಧತೆಯ ಬಗ್ಗೆ ವಿವರ ನೀಡಿದ್ದಾರೆ.

ದೇಶಾದ್ಯಂತ ದೀಪಾವಳಿ ಹಬ್ಬವನ್ನು ಸಡಗರ, ಸಂಭ್ರಮದಿಂದ ಆಚರಿಸಲಾಗುತ್ತಿದೆ. ಆದರೆ ಪ್ರತಿ ವರ್ಷ ಬೆಳಕಿನ ಹಬ್ಬದಲ್ಲಿ ಪಟಾಕಿ ಸಿಡಿದು ಎಷ್ಟೋ ಮುಗ್ಧ ಮಕ್ಕಳ ಬಾಳು ಕತ್ತಲಾಗುವುದನ್ನು ನಾವು ನೋಡುತ್ತಿದ್ದೇವೆ. ಪಟಾಕಿ ಸಿಡಿಸುವುದಕ್ಕಿಂತ ದೀಪಗಳನ್ನು ಬೆಳಗಿಸುವ ಮೂಲಕ ಜವಾಬ್ದಾರಿಯುತ ನಾಗರಿಕರಾಗಿ ಹಬ್ಬ ಆಚರಿಸೋಣ ಎಂದು ಡಾ.ತಿಮ್ಮಯ್ಯ ವಿನಂತಿಸಿದ್ದಾರೆ.

ಕಾರ್ಯಕರ್ತೆಯರು, ಸಹಾಯಕಿಯರ ಸೇವೆ ಶ್ಲಾಘನೀಯ

ಸಂಬಳ ಹೆಚ್ಚಳ, ಆರೋಗ್ಯ, ವಿಮೆ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ

• **ಉದಯವಾಹಿನಿ, ಔರಾದ್ :**

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಸರ್ಕಾರದ ವಿವಿಧ ಯೋಜನೆಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ತಮ್ಮ ಜವಾಬ್ದಾರಿಯನ್ನು ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ನಿರ್ವಹಿಸುವ ಮೂಲಕ

1 : ಮಕ್ಕಳ ಪೌಷ್ಟಿಕತೆ, ಮಹಿಳೆಯರ ಆರೋಗ್ಯ

2 : ಜನಗಣತಿ ಸರ್ಕಾರದ ಎಲ್ಲಾ ಕಾರ್ಯಕ್ರಮ

3 : ಸರ್ಕಾರದ ಗಮನ ಸೆಳೆಯಲು ಪ್ರಯತ್ನಿಸಿದ್ದೇನೆ

ಮಕ್ಕಳ ಪೌಷ್ಟಿಕತೆ, ಮಹಿಳೆಯರ ಆರೋಗ್ಯ ಹಾಗೂ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಇವರ ಸೇವೆ ಶ್ಲಾಘನೀಯ ಎಂದು ಶಾಸಕ ಪ್ರಭು ಬಿ.ಚವ್ಹಾಣ ಅವರು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಸಂತಪೂರ ವತಿಯಿಂದ ನ.4ರಂದು ಔರಾದ(ಬಿ) ಪಟ್ಟಣದ ಡಾ.ಗುರುಪಾದಪ್ಪ ನಾಗಮಾರಪಳ್ಳಿ ಕಲ್ಯಾಣ ಮಂಟಪದಲ್ಲಿ ಔರಾದ(ಬಿ) ಮತ್ತು ಕಮಲನಗರ ತಾಲ್ಲೂಕುಗಳ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳ ಕುರಿತು ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರ ಮತ್ತು ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಜನಗಣತಿ ಅಥವಾ ಸರ್ಕಾರದ ಎಲ್ಲಾ ಕಾರ್ಯಕ್ರಮಗಳಿಗೆ ಅಂಗನವಾಡಿ ಕಾರ್ಯಕರ್ತೆಯರ ಸೇವೆ ಪಡೆಯಲಾಗುತ್ತದೆ. ಆದರೆ ಸಂಬಳ ಮಾತ್ರ ಅವರ ಕೆಲಸಕ್ಕೆ ಅನುಗುಣವಾಗಿ ಸಿಗುತ್ತಿಲ್ಲ. ಈ ಬಗ್ಗೆ ಅಧಿವೇಶನದಲ್ಲಿಯೂ ಪ್ರಸ್ತಾಪಿಸಿ ಸರ್ಕಾರದ ಗಮನ ಸೆಳೆಯಲು ಪ್ರಯತ್ನಿಸಿದ್ದೇನೆ. ಸಂಬಳ ಹೆಚ್ಚಳ, ಆರೋಗ್ಯ, ವಿಮೆ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ಏನೇ ಸಮಸ್ಯೆಗಳಿದ್ದರೂ ನೇರವಾಗಿ ನನ್ನ ಗಮನಕ್ಕೆ ತಂದಲ್ಲಿ ಸರಿಪಡಿಸಲು ಪ್ರಯತ್ನಿಸುತ್ತೇನೆ. ನನ್ನ ಸಹಕಾರ ಸದಾ ಇರುತ್ತದೆ ಎಂದರು. ಅಂಗನವಾಡಿಗೆ ಬರುವ ಪ್ರತಿಯೊಂದು ಮಗುವನ್ನೂ ತಮ್ಮ ಸ್ವಂತ ಮಕ್ಕಳಂತೆ ಪ್ರೀತಿ ಮತ್ತು ಕಾಳಜಿಯಿಂದ ನೋಡಿಕೊಳ್ಳಬೇಕು.

> ಬಾಲ್ಯವಿವಾಹದ ದುಷ್ಪರಿಣಾಮಗಳ ಕುರಿತು ಪೋಷಕರಲ್ಲಿ ಅರಿವು ಮೂಡಿಸಬೇಕು. ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳಿಗೆ ಸರ್ಕಾರದಿಂದ ದೊರೆಯುವ ಎಲ್ಲಾ ಆರೋಗ್ಯ, ಪೌಷ್ಟಿಕ ಆಹಾರ ಹಾಗೂ ಇತರ ಸೌಲಭ್ಯಗಳು ಸಮರ್ಪಕವಾಗಿ ತಲುಪುವಂತೆ ಕಾಳಜಿ ವಹಿಸಬೇಕು ಎಂದು ತಿಳಿಸಿದರು.
> – ಶಾಸಕ ಪ್ರಭು ಬಿ.ಚವ್ಹಾಣ

ಮಕ್ಕಳಿಗೆ ಉತ್ತಮ ಪೌಷ್ಟಿಕ ಆಹಾರ, ಆರೋಗ್ಯಕರ ವಾತಾವರಣ ಹಾಗೂ ಪೂರ್ವ ಪ್ರಾಥಮಿಕ ಶಿಕ್ಷಣ ದೊರೆಯುವಂತೆ ವಿಶೇಷ ಗಮನ ಹರಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೊಳಿಸುವ ಪ್ರಧಾನ ಮಂತ್ರಿ ಮಾತೃ ವಂದನಾ, ಬೇಟಿ ಬಚಾವೋ ಬೇಟಿ ಪಢಾವೋ, ಸಮಗ್ರ ಶಿಶು ಅಭಿವೃದ್ಧಿ ಸೇವೆಗಳು, ಭಾಗ್ಯಲಕ್ಷ್ಮಿ, ಉದ್ಯೋಗಿನಿಯಂತಹ ಜನಪರ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವುದರ ಜೊತೆಗೆ ಮನೆಮನೆಗೆ ತೆರಳಿ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳಿಗೆ ವಿತರಿಸುವ ಬೆಲ್ಲ ಹಾಗೂ ಮತ್ತಿತರರೆ ಆಹಾರ ಪದಾರ್ಥಗಳು ಗುಣಮಟ್ಟದಿಂದ ಇರುವಂತೆ ನೋಡಿಕೊಳ್ಳಬೇಕು. ಆಹಾರ ಗುಣಮಟ್ಟದ ಪರಿಶೀಲನೆಗೆ ವ್ಯವಸ್ಥೆ ಕಲ್ಪಿಸಬೇಕಿದೆ ಎಂದು ಹೇಳಿದರು.

> ಔರಾದ(ಬಿ) ಕ್ಷೇತ್ರದ ಎಲ್ಲಾ ಕಡೆಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ನಿರ್ಮಿಸುವ ಕಾರ್ಯ ನಡೆದಿದೆ. ಮಕ್ಕಳಿಗೆ ಉತ್ತಮ ಕಲಿಕಾ ವಾತಾವರಣ, ಅಗತ್ಯ ಮೂಲಸೌಕರ್ಯ ಹಾಗೂ ಆಧುನಿಕ ಸೌಲಭ್ಯಗಳನ್ನು ಕಲ್ಪಿಸಿ ಅಂಗನವಾಡಿ ಕೇಂದ್ರಗಳನ್ನು ಮಾದರಿ ಕೇಂದ್ರಗಳನ್ನಾಗಿ ರೂಪಿಸುವ ದಿಶೆಯಲ್ಲಿ ಪ್ರಯತ್ನಗಳು ನಡೆದಿವೆ.

ಈ ಸಂದರ್ಭದಲ್ಲಿ ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ಸುಭಾಷ ರತ್ನಾ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಉತ್ತಮ ಸಂಗೆವಾರ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀನಿವಾಸ ಬಾಳುವಾಲೆ, ವಿಜಯಲಕ್ಷ್ಮಿ(ಎ), ಶೋಭಾ (ಕೆ), ಭಾಗ್ಯವತಿ, ಶೋಭಾ (ಆರ್), ನಿರ್ಮಲಾ, ಶಾಂತಮ್ಮ, ರವಿಕಾ, ರೇಣುಕಾ, ಮಹಾದೇವಿ, ಸುಧೀಷ್ಣಾ, ಪದ್ಮಾವತಿ, ಶ್ರದ್ಧಾ, ಮಂಗಲಾ, ಇಲಾಖೆಯ ಆಕಾಶ, ಸತೀಷ, ಶಿವಪುತ್ರ, ರವೀಂದ್ರ, ಮಹಾದೇವ ಸೇರಿದಂತೆ ಅಂಗನವಾಡಿ ಮೇಲ್ವಿಚಾರಕಿಯರು, ಔರಾದ(ಬಿ) ಮತ್ತು ಕಮಲನಗರ ತಾಲ್ಲೂಕುಗಳ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಉಪಸ್ಥಿತರಿದ್ದರು.

ಉದಯ ವಾಹಿನಿ

ಪ್ರಾದೇಶಿಕ

ಶುಕ್ರವಾರ 06 ನವೆಂಬರ್ 2026 | 05

ಮಿನಿ ನ್ಯೂಸ್

ಸಮಾಜ ಕಲ್ಯಾಣ ಇಲಾಖೆಯ ಸ್ತಬ್ದಚಿತ್ರಕ್ಕೆ ದ್ವಿತೀಯ ಸ್ಥಾನ

• **ಉದಯವಾಹಿನಿ, ಗದಗ,:**

71 ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಇಲಾಖೆಗಳ ಯೋಜನೆಗಳನ್ನು ಒಳಗೊಂಡಂತಹ (ರೂಪಕ) ಸ್ತಬ್ದಚಿತ್ರ ಕನ್ನಡ ರಾಜ್ಯೋತ್ಸವ ಮೆರವಣಿಗೆಯಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯು ಪಾಲ್ಗೊಂಡು, ಸ್ತಬ್ದಚಿತ್ರದಲ್ಲಿ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿತು. ಮಾನ್ಯ ಶಾಸಕರಾದ ಡಾ.ಎಚ್.ಕೆ.ಪಾಟೀಲ ಅವರು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಶ್ರೀಮತಿ ಡಾ.ನಂದಾ ಹಣಬರಟ್ಟಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್, ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮುಕುಲ್ ಜೈನ್, ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಮಿಥುನ್ .ಎಚ್. ಎನ್. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಶ್ರೀಮತಿ ರಾಧಾ ಮಣ್ಣೂರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಗಣ್ಯರು, ಕ್ರೈಸ್ ವಸತಿ ಶಾಲೆಗಳ ಚಿತ್ರಕಲಾ ಶಿಕ್ಷಕರು ಹಾಗೂ ಇಲಾಖೆಯ ಸಿಬ್ಬಂದಿಗಳು ಹಾಜರಿದ್ದರು.

ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿಗೆ ಅದ್ಧೂರಿ ಚಾಲನೆ!



• **ಉದಯವಾಹಿನಿ, ಜಮಖಂಡಿ:**

ಕನ್ನಡ ರಾಜ್ಯೋತ್ಸವ ಹಾಗೂ ಕನ್ನಡ ಸಂಘದ 60ನೇ ವರ್ಷದ ಸಂಭ್ರಮದ ಅಂಗವಾಗಿ ನಗರದ ಐತಿಹಾಸಿಕ ಪೋಲೋ ಮೈದಾನದಲ್ಲಿ ಆಯೋಜಿಸಿರುವ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿಗೆ ಅದ್ಧೂರಿ ಚಾಲನೆ ದೊರೆತಿದೆ. ವಿವಿಧ ರಾಜ್ಯಗಳಿಂದ ಆಗಮಿಸಿರುವ ಪುರುಷ ಕುಸ್ತಿಪಟುಗಳು ಪಂದ್ಯಾವಳಿಯಲ್ಲಿ ಭಾಗವಹಿಸಿದ್ದು, ಅಖಾಡದಲ್ಲಿ ನಡೆಯುತ್ತಿರುವ ರೋಚಕ ಕುಸ್ತಿ ಕಾಳಗ ಕ್ರೀಡಾಭಿಮಾನಿಗಳಲ್ಲಿ ಹೊಸ ಉತ್ಸಾಹ ಹಾಗೂ ಕುತೂಹಲ ಮೂಡಿಸಿದೆ. ಕುಸ್ತಿಪಟುಗಳ ಶಕ್ತಿ, ಸಾಮರ್ಥ್ಯ, ದೈಹಿಕ ಕ್ಷಮತೆ ಹಾಗೂ ತಂತ್ರಗಾರಿಕೆಯ ಪ್ರದರ್ಶನಕ್ಕೆ ಪೋಲೋ ಮೈದಾನ ಸಾಕ್ಷಿಯಾಗಿದೆ.

ಸಾಂಪ್ರದಾಯಿಕ ಕುಸ್ತಿ ಕಲೆಯ ವೈಭವವನ್ನು ಕಣ್ತುಂಬಿಕೊಳ್ಳಲು ಕ್ರೀಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ಕುಸ್ತಿ ಪಂದ್ಯಾವಳಿಗೆ ಸಂಸದ ಪಿ.ಸಿ. ಗದ್ದಿಗೌಡರ, ತೇರದಾಳ ಶಾಸಕ ಸಿದ್ದು ಸವದಿ, ಕನ್ನಡ ಸಂಘದ ಅಧ್ಯಕ್ಷ ರಾಹುಲ್ ಕಲೂತಿ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯ ಜಿ.ಎಸ್. ನ್ಯಾಮಗೌಡ ಸೇರಿದಂತೆ ಗಣ್ಯರು ಹನುಮಂತ ದೇವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸುವ ಮೂಲಕ ವಿಧ್ಯುಕ್ತವಾಗಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಗಣ್ಯರು ಕುಸ್ತಿಪಟುಗಳಿಗೆ ಶುಭ ಹಾರೈಸಿದರು. ಗ್ರಾಮೀಣ ಭಾಗದ ಸಾಂಪ್ರದಾಯಿಕ ಕ್ರೀಡೆಯಾದ ಕುಸ್ತಿಗೆ ರಾಷ್ಟ್ರಮಟ್ಟದಲ್ಲಿ ಹೆಚ್ಚಿನ ಪ್ರೋತ್ಸಾಹ ಹಾಗೂ ಮನ್ನಣೆ ದೊರೆಯಬೇಕು. ಯುವಜನತೆ ಕುಸ್ತಿ ಸೇರಿದಂತೆ ಸಾಂಪ್ರದಾಯಿಕ ಕ್ರೀಡೆಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಪಾಲ್ಗೊಳ್ಳಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಲೋಕಾಯುಕ್ತ ಬಲೆ: ಮುಖ್ಯಾಧಿಕಾರಿ ಸೇರಿ ಮೂವರು ವಶಕ್ಕೆ!



• **ಉದಯವಾಹಿನಿ ತೇರದಾಳ:**

ಮನೆಯ ಇ–ಆಸ್ತಿ ಉತಾರೆ ಮಾಡಿಕೊಡಲು 10 ಸಾವಿರ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಆರೋಪದ ಹಿನ್ನೆಲೆಯಲ್ಲಿ ತೇರದಾಳ ಪುರಸಭೆಯ ಮುಖ್ಯಾಧಿಕಾರಿ ಸೇರಿದಂತೆ ಮೂವರನ್ನು ಕರ್ನಾಟಕ ಲೋಕಾಯುಕ್ತ ಪೊಲೀಸರು ಬಲೆಗೆ ಬೀಳಿಸಿದ್ದಾರೆ. ತೇರದಾಳ ನಿವಾಸಿ ರಾಜೇಸಾಬ ಮಹಮ್ಮದಹುಸೇನ ನಾಗರ್ಜಿ ಅವರು ನ.3ರಂದು ಬಾಗಲಕೋಟೆ ಲೋಕಾಯುಕ್ತ ಪೊಲೀಸ್ ಠಾಣೆಗೆ ಹಾಜರಾಗಿ ಈ ಕುರಿತು ದೂರು ಸಲ್ಲಿಸಿದ್ದರು. ತಮ್ಮ ಸಂಬಂಧಿ ಹಸೀನಾ ಗಂಡ ಅಬ್ದುಲ್ ಕೊರಬು ಅವರ ಹೆಸರಿನಲ್ಲಿರುವ ತೇರದಾಳ ಪುರಸಭೆ ವ್ಯಾಪ್ತಿಯ ಮನೆ ಆಸ್ತಿ ಸಂಖ್ಯೆ 574/25, ಪ್ಲಾಟ್ ಸಂಖ್ಯೆ 13ರ ಇ–ಆಸ್ತಿ ಉತಾರೆ ಮಾಡಿಕೊಡಲು ಆರೋಪಿತರು 10 ಸಾವಿರ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದರು.ದೂರಿನ ಆಧಾರದ ಮೇಲೆ ನ.4ರಂದು ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿ, ಲಂಚದ ಹಣದ ವ್ಯವಹಾರಕ್ಕೆ ಸಂಬಂಧಿಸಿದಂತೆ ಪುರಸಭೆ ಮುಖ್ಯಾಧಿಕಾರಿ ಇರ್ಫಾನ್ ಬಾಬುಸಾಬ ಧುರ, ಇಬ್ರಾಹಿಂ ಮಹಾಲಿಂಗಸೂರ ಹಾಗೂ ಶಿವಾನಂದ ಕಾಂಬಳೆ ಅವರನ್ನು ವಶಕ್ಕೆ ಪಡೆದು ಕಾನೂನು ಕ್ರಮ ಕೈಗೊಂಡಿದ್ದಾರೆ.

ಕರ್ನಾಟಕ ಲೋಕಾಯುಕ್ತ ಬಾಗಲಕೋಟೆಯ ಡಿವೈಎಸ್ಪಿ ಸುರೇಶರೆಡ್ಡಿ ಎಂ.ಎಸ್. ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದ್ದು, ಪೊಲೀಸ್ ಇನ್‌ಸ್ಪೆಕ್ಟರ್‌ಗಳಾದ ಮಲ್ಲಿಕಾರ್ಜುನ ಬಿ. ಬಿರಾದಾರ ಹಾಗೂ ಎನ್. ಆರ್. ಖಿಲಾರೆ ಸೇರಿದಂತೆ ಸಿಬ್ಬಂದಿ ದಾಳಿಯಲ್ಲಿ ಪಾಲ್ಗೊಂಡಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

> ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸಗಳಿಗೆ ಲಂಚದ ಬೇಡಿಕೆ ಇಡುವವರ ವಿರುದ್ಧ ಲೋಕಾಯುಕ್ತ ಪೊಲೀಸರ ಕಾರ್ಯಾಚರಣೆ ಮುಂದುವರಿದಿದ್ದು, ಈ ಘಟನೆ ತೇರದಾಳ ಪುರಸಭೆ ವ್ಯಾಪ್ತಿಯಲ್ಲಿ ಚರ್ಚೆಗೆ ಕಾರಣವಾಗಿದೆ.

ಜೇನು ತುಪ್ಪಕ್ಕೆ ಕಲಬೆರಕೆ ಮಾಡಿ ಮಾರಾಟ ? ರೆಡ್ ಹ್ಯಾಂಡಾಗಿ ಹಿಡಿದ ಸ್ಥಳೀಯರು

• **ಉದಯವಾಹಿನಿ ಚಿಕ್ಕಮಗಳೂರು:**

ನಗರದ ಹೊರವಲಯದಲ್ಲಿ ನಕಲಿ ತುಪ್ಪ ಪತ್ತೆಯಾದ ಬೆನ್ನಲ್ಲೇ ಇದೀಗ ನಕಲಿ ಜೇನು ತುಪ್ಪ ಕೂಡ ಪತ್ತೆಯಾಗಿದೆ. ಜೇನುಗೂಡನ್ನ ಬೆಲ್ಲದ ಪಾಕದಲ್ಲಿ ನೆನೆ ಹಾಕುವಾಗ ಸ್ಥಳಿಯರ ಕೈಗೆ ರೆಡ್ ಹ್ಯಾಂಡ್ ಆಗಿ ವ್ಯಾಪಾರಿಗಳು ಸಿಕ್ಕಿಬಿದ್ದಿದ್ದಾರೆ.ಚಿಕ್ಕಮಗಳೂರು ನಗರದ ಹೊರಹೊಲಯದ ವಾಜಪೇಯಿ ಲೇಔಟ್‌ನ ನಿರ್ಜನ ಪ್ರದೇಶದಲ್ಲಿ ಜೇನುಗೂಡಿಗೆ ಬೆಲ್ಲದ ಪಾಕ ಮಿಕ್ಸ್ ಮಾಡುವಾಗ ಸ್ಥಳಿಯರ ಕೈಗೆ ವ್ಯಾಪಾರಿಗಳು ಲಾಕ್ ಆಗಿದ್ದಾರೆ. ಸರ್ಕಾರಿ ಕಚೇರಿಗಳು ಹಾಗೂ ದೊಡ್ಡ–ದೊಡ್ಡ ಕಟ್ಟಡಗಳನ್ನೇ ಬಂಡವಾಳ ಮಾಡಿಕೊಂಡ ಕಿಡಿಗೇಡಿಗಳು ಬಿಲ್ಡಿಂಗ್‌ನಲ್ಲಿ ಕಟ್ಟಿರೋ ಜೇನುಗೂಡನ್ನ ತೆಗೆದು ಜನರನ್ನ ನಂಬಿಸಲು ಅಲ್ಲೇ ಜೇನುತುಪ್ಪವನ್ನ ಕೊಡುತ್ತಾರೆ. ಬಳಿಕ ಅದೇ ಗೂಡನ್ನ ತಂದು ಯಾರೂ ಇಲ್ಲದ ಜಾಗದಲ್ಲಿ ಬೆಲ್ಲದ ಪಾಕ ಮಿಕ್ಸ್ ಮಾಡಿ ಬಳಿಕ ಅದನ್ನೇ ಅಸಲಿ ಜೇನು ಎಂದು ಮಾರಾಟ ಮಾಡುತ್ತಿದ್ದರು.

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	10:30 ರಿಂದ 12:00
ಗುಳಿಕ ಕಾಲ	ಬೆಳಿಗ್ಗೆ	07:30 ರಿಂದ 09:00
ಯಮಗಂಡ ಕಾಲ	ಮಧ್ಯಾಹ್ನ	03:00 ರಿಂದ 04:30

ಮೇಷ: ನಿಮ್ಮ ಒತ್ತಡವನ್ನು ನೀವು ತೊಡೆದುಹಾಕಬಹುದು. ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ಥ್ಯರಾಗಿರುತ್ತೀರಿ. ಕುಟುಂಬದ ಸದಸ್ಯರು ನಿಮ್ಮ ಜೀವನದಲ್ಲಿ ಒಂದು ವಿಶೇಷ ಸ್ಥಾನವನ್ನು ಹೊಂದಿರುತ್ತಾರೆ. ವಾಸ್ತವಾಂಶಗಳನ್ನು ಎದುರಿಸುತ್ತಿದ್ದ ಹಾಗೆ ಪ್ರೀತಿಪಾತ್ರರನ್ನು ಮರೆಯಬೇಕಾಗುತ್ತದೆ.

ವೃಷಭ: ನಿಮ್ಮ ವೈಯಕ್ತಿಕ ರಂಗದಲ್ಲಿ ಮುಖ್ಯ ಬೆಳವಣಿಗೆಯಾಗುತ್ತಿದ್ದು ಇದು ನೀವು ಮತ್ತು ನಿಮ್ಮ ಇಡೀ ಕುಟುಂಬಕ್ಕೆ ಸಂತೋಷ ತರುತ್ತದೆ. ಪ್ರೇಮಪ್ರಯಾಣ ಮಧುರವಾಗಿದ್ದರೂ ಅಲ್ಪಾವಧಿಯದ್ದಾಗಿರುತ್ತದೆ. ಇಂದು ನಿಮ್ಮ ಮನಸ್ಸಿನಲ್ಲಿ ಉದ್ಭವವಾಗುವ ಹೊಸ ಹಣಗಳಿಕೆಯ ವಿಚಾರಗಳ ಲಾಭ ತೆಗೆದುಕೊಳ್ಳಿ.

ಮಿಥುನ: ನೀವು ಅತಿಯಾದ ಒತ್ತಡವನ್ನು ಅನುಭವಿಸುತ್ತಿದ್ದೀರೆಂದೆನಿಸಿದರೆ ಮಕ್ಕಳೊಂದಿಗೆ ಹೆಚ್ಚು ಸಮಯ ಕಳೆಯಿರಿ. ಅವರ ಬೆಚ್ಚಗಿನ ಅಪ್ಪುಗೆ / ಮುದ್ದಾಡುವಿಕೆ ಅಥವಾ ಮುಗ್ಧ ಮುಗುಳ್ನಗೆಯೂ ನಿಮ್ಮ ಸಮಸ್ಯೆಗಳನ್ನು ಮಾಯವಾಗಿಸಬಲ್ಲದು. ಆಸ್ತಿ ವ್ಯವಹಾರಗಳು ಅಸಾಧಾರಣ ಲಾಭ ತರುತ್ತವೆ.

ಕಟಕ: ನಿಮ್ಮ ಅಪಾರ ವಿಶ್ವಾಸ ಸುಲಭದ ಕೆಲಸದ ವೇಳಾಪಟ್ಟಿ ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ಖರೀದಿಸಿದ ಭೂಮಿಯನ್ನು ಈಗ ಮಾರಾಟ ಮಾಡಲು ಬಯಸುವ ಜನರು ಉತ್ತಮ ಖರೀದಿದಾರರನ್ನು ಕಾಣಬಹುದು ಭೂಮಿಯನ್ನು ಮಾರಾಟ ಮಾಡುವ ಮೂಲಕ ಉತ್ತಮ ಹಣವನ್ನು ಪಡೆಯಬಹುದು.

ಸಿಂಹ: ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ನೀವು ಇತರರ ಮಾತುಗಳನ್ನು ನಂಬಿ ಇಂದು ಹೂಡಿಕೆ ಮಾಡಿದಲ್ಲಿ ಇಂದು ಆರ್ಥಿಕ ನಷ್ಟದ ಸಾಧ್ಯತೆಯಿದೆ. ನಿಮ್ಮ ಅಸಡ್ಡೆಯ ವರ್ತನೆ ಪೋಷಕರನ್ನು ಚಿಂತೆಗೀಡು ಮಾಡಬಹುದು.

ಕನ್ಯಾ: ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ಇಂದು ಸುಮ್ಮನೆ ಕುಳಿತುಕೊಳ್ಳುವ ಬದಲು ಏಕೆ ಏನನ್ನಾದರೂ ಮಾಡಬಾರದು ? ಇದು ನಿಮ್ಮ ಗಳಿಕೆಯ ಶಕ್ತಿಯನ್ನು ಸುಧಾರಿಸುತ್ತದೆ. ಮೊದಲು ನಿಮ್ಮ ಕುಟುಂಬದ ಸದಸ್ಯರ ಅಭಿಪ್ರಾಯ ತೆಗೆದುಕೊಳ್ಳಿ.

ತುಲಾ: ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಹೊಸ ಹಣಗಳಿಕೆಯ ಅವಕಾಶಗಳು ಲಾಭದಾಯಕವಾಗಿರುತ್ತವೆ. ಕೆಲವರಿಗೆ ಕುಟುಂಬದಲ್ಲಿ ಒಂದು ಹೊಸ ಆಗಮನ ಸಂಭ್ರಮಾಚರಣೆ ಆನಂದದಕ್ಷಣಗಳನ್ನು ತೆರೆದಿಡುತ್ತದೆ. ನಿಮ್ಮ ಪ್ರೀತಿಪಾತ್ರರ ಭಾವನೆಗಳನ್ನು ಅರ್ಥಮಾಡಿಕೊಳ್ಳಿ.

ವೃಶ್ಚಿಕ: ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು ಮತ್ತು ಆ ಸಲಹೆಗೆ ಜೀವನದಲ್ಲಿ ಸ್ಥಾನವನ್ನು ಸಹ ನೀಡಬಹುದು .

ಧನಸ್ಸು: ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ಇಂದು ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು ಮತ್ತು ನೀವು ಹಣದ ಲಾಭವನ್ನು ಪಡೆಯಬಹುದು. ನಿಮ್ಮ ಆಹ್ಲಾದಕರ ವರ್ತನೆ ಕುಟುಂಬ ಜೀವನವನ್ನು ಬೆಳಗುತ್ತದೆ. ಪ್ರಾಮಾಣಿಕ ನಗುವಿರುವ ವ್ಯಕ್ತಿಯನ್ನು ನಿರ್ಲಕ್ಷಿಸಬಲ್ಲರು.

ಮಕರ: ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಇಂದು ಆನಂದಿಸಬಹುದು. ದಿನದಲ್ಲಿ ನಂತರ ಹಣಕಾಸು ಪರಿಸ್ಥಿತಿಗಳು ಸುಧಾರಿಸುತ್ತವೆ. ಇಂದು ನೀವು ಮನೆಯಲ್ಲಿ ಸೂಕ್ಷ್ಮ ಸಮಸ್ಯೆಯನ್ನು ಬಗೆಹರಿಸಲು ನಿಮ್ಮ ಬುದ್ಧಿವಂತಿಕೆ ಮತ್ತು ಪ್ರಭಾವವನ್ನು ಬಳಸಬೇಕಾಗುತ್ತದೆ.

ಕುಂಭ: ನಿಮ್ಮ ಆರೋಗ್ಯವನ್ನು ನಿರ್ಲಕ್ಷ್ಯ ಮಾಡಬೇಡಿ ಕುಟುಂಬದ ಯಾವುದೇ ಸದಸ್ಯರ ಕಾಯಿಲೆ ಬೀಳುವ ಕಾರಣ ದಿಂದಾಗಿ ನೀವು ಆರ್ಥಿಕ ತೊಂದರೆಗೊಳಗಾಗಬಹುದು. ಆದಾಗ್ಯೂ ಈ ಸಮಯದಲ್ಲಿ ನೀವು ಹಣಕ್ಕಿಂತ ಹೆಚ್ಚಾಗಿ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು.

ಮೀನ: ಅನಗತ್ಯ ಆಲೋಚನೆಗಳು ನಿಮ್ಮ ಮನಸ್ಸನ್ನು ಆಕ್ರಮಿಸಿಕೊಳ್ಳಲು ಬಿಡಬೇಡಿ. ಶಾಂತವಾಗಿ ಮತ್ತು ಒತ್ತಡ ಮುಕ್ತವಾಗಿ ಉಳಿಯಲು ಪ್ರಯತ್ನಿಸಿ ಹಾಗೂ ಅದು ನಿಮ್ಮ ಮಾನಸಿಕ ದೃಢತೆಯನ್ನು ಹೆಚ್ಚಿಸುತ್ತದೆ. ಇಂದು ನೀವು ಅನಗತ್ಯವಾಗಿ ಹಣವನ್ನು ಖರ್ಚು ಮಾಡುವುದನ್ನು ನಿಲ್ಲಿಸಬೇಕು,

ಚೂನಪ್ಪ ಪೂಜಾರಿ ಸೇರಿ ಹಲವರು ಪೊಲೀಸ್ ವಶಕ್ಕೆ; ರೈತ ಅಸ್ವಸ್ಥ

ಕಬ್ಬಿಗೆ ಸೂಕ್ತ ಬೆಲೆ ನಿಗದಿಪಡಿಸುವಂತೆ ರೈತರ ಪ್ರತಿಭಟನೆ ತೀವ್ರಗೊಂಡಿದೆ. ಚೂನಪ್ಪ ಪೂಜಾರಿ ಸೇರಿದಂತೆ ಹಲವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

• **ಉದಯವಾಹಿನಿ ಬೆಳಗಾವಿ:**

ಕಬ್ಬಿಗೆ 1 ಸಾವಿರ ರೂ. ಪ್ರೋತ್ಸಾಹಧನ ನೀಡುವಂತೆ ಒತ್ತಾಯಿಸಿ ಬೆಳಗಾವಿ ತಾಲ್ಲೂಕಿನ ಮುಕ್ತಿಮಠದಿಂದ ಬೆಳಗಾವಿವರೆಗೆ ಪಾದಯಾತ್ರೆಗೆ ಮುಂದಾಗಿದ್ದ ರೈತರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.ಪಾದಯಾತ್ರೆ ಆರಂಭಕ್ಕೂ ಮುನ್ನವೇ ಮುಕ್ತಿಮಠದಲ್ಲಿ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆ ರಾಜ್ಯಾಧ್ಯಕ್ಷ ಚೂನಪ್ಪ ಪೂಜಾರಿ ಸೇರಿ ನೂರಾರು ರೈತರನ್ನು ವಶಕ್ಕೆ ಪಡೆದು

1 : ಮೂಡಲಗಿಯಲ್ಲಿ ಶಶಿಕಾಂತ ಗುರೂಜಿ ವಶಕ್ಕೆ
2 : ನೂರಾರು ರೈತರನ್ನು ವಶಕ್ಕೆ ಪಡೆದು ಪೊಲೀಸ್
3 : ಹೋರಾಟವನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ

ಪೊಲೀಸ್ ವಾಹನದಲ್ಲಿ ಕರೆದೊಯ್ಯಲಾಯಿತು. ಈ ವೇಳೆ ಪೊಲೀಸರು ಮತ್ತು ಹೋರಾಟಗಾರರ ನಡುವೆ ತೀವ್ರ ಗದ್ದಲ, ಗಲಾಟೆ ಶುರುವಾಯಿತು.

ಬೆಳಗಾವಿ ಚನ್ನಮ್ಮ ವೃತ್ತದಲ್ಲಿ ಲಕ್ಷಾಂತರ ಜನರನ್ನು ಸೇರಿಸಿ ಸಮಾವೇಶ ಮಾಡಲು ರೈತ ಹೋರಾಟಗಾರರು ನಿರ್ಧರಿಸಿದ್ದರು. ಆದರೆ, ಬೆಳಗಾವಿ ನಗರದಲ್ಲಿ ನಿಷೇಧಾಜ್ಞೆ ಜಾರಿ ಮಾಡಿ ಪೊಲೀಸ್ ಕಮಿಷನರ್ ಆದೇಶ ಹೊರಡಿಸಿದ್ದರು. ಐದಕ್ಕೂ ಹೆಚ್ಚು ಜನರು ಗುಂಪು ಗುಂಪಾಗಿ ಓಡಾಡುವಂತಿಲ್ಲ ಅಂತಾ ಸೂಚಿಸಿದ್ದರು. ಪಾದಯಾತ್ರೆ ಮೂಲಕ ಬೆಳಗಾವಿಯತ್ತ ಹೋರಾಟಗಾರರು ಹೆಜ್ಜೆ


☛ ಉದಯವಾಹಿನಿ ಚಿತ್ರ

> ತಮ್ಮನ್ನು ವಶಕ್ಕೆ ಪಡೆಯುವಾಗ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಚೂನಪ್ಪ ಪೂಜಾರಿ, ಸರ್ಕಾರ ರೈತರ ಹೋರಾಟವನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ. ಮುಖ್ಯಮಂತ್ರಿ 1 ಸಾವಿರ ರೂ. ಪ್ರೋತ್ಸಾಹಧನ ಘೋಷಣೆ ಮಾಡಲೇಬೇಕು. ನಮ್ಮನ್ನು ವಶಕ್ಕೆ ಪಡೆದ ತಕ್ಷಣ ಹೋರಾಟ ನಿಲ್ಲುವುದಿಲ್ಲ. ರೈತರು ಅಲ್ಲಲ್ಲಿ ರಸ್ತೆ ಬಂದ್ ಮಾಡುವಂತೆ ಕರೆ ನೀಡಿದ್ದಾರೆ. -ಚೂನಪ್ಪ ಪೂಜಾರಿ

ಹಾಕುತ್ತಿದ್ದರು. ಆ ವೇಳೆಯೇ ತಡೆದ ಪೊಲೀಸರು ಒಬ್ಬೊಬ್ಬರನ್ನೆ ವಶಕ್ಕೆ ಪಡೆದಿದ್ದಾರೆ. ಇದರಿಂದ ರೈತರು ಪೊಲೀಸರ ವಿರುದ್ಧ ಕಿಡಿಕಾರಿದ್ದಾರೆ. ನಾವು ಜೈಲಿಗೆ ಹೋದರೂ ಚಿಂತೆ ಇಲ್ಲ, ನಮ್ಮ ಹೋರಾಟ ನಿಲ್ಲದು ಎಂದು ಎಚ್ಚರಿಸಿದ್ದಾರೆ.

ಪೊಲೀಸರು ಮುಕ್ತಿ ಮಠದಿಂದ ವಶಕ್ಕೆ ಪಡೆದುಕೊಂಡು ಹೋಗುತ್ತಿದ್ದ ವೇಳೆ ಮಾರ್ಗಮಧ್ಯದಲ್ಲಿ ರೈತನೋರ್ವ ಅಸ್ವಸ್ಥಗೊಂಡಿರುವ ಘಟನೆ ನಡೆದಿದೆ. ನನಗೆ ಹಾರ್ಟ್ ಸರ್ಜರಿ ಆಗಿದೆ. ದಯವಿಟ್ಟು ವಾಹನದಲ್ಲಿ ನನ್ನನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಅಂತಾ ಮನವಿ ಮಾಡಿಕೊಂಡರೂ ಹುಕ್ಕೇರಿ ತಾಲ್ಲೂಕಿನ ಬಸ್ಸಾಪುರ ಗ್ರಾಮದ ಬಳಿ ನಿರ್ಜನ ಪ್ರದೇಶದಲ್ಲಿ ಬಿಟ್ಟು ಹೋಗಿದ್ದಾರೆ ಎಂದು ಸ್ಥಳದಲ್ಲಿದ್ದ ರೈತರು ಆರೋಪಿಸಿದ್ದಾರೆ.

ವಶಕ್ಕೆ ಪಡೆಯುತ್ತಿದ್ದಂತೆ ಶಶಿಕಾಂತ ಗುರೂಜಿ ವಿಡಿಯೋ ಹೇಳಿಕೆ ಬಿಡುಗಡೆ ಮಾಡಿದ್ದು, ಬೆಳಗಾವಿಯಲ್ಲಿ ನಿಷೇಧಾಜ್ಞೆ ಜಾರಿಯಾಗಿದೆ. ನನ್ನ, ಚೂನಪ್ಪ ಪೂಜಾರಿ ಸೇರಿ ಹಲವರನ್ನು ವಶಕ್ಕೆ ಪಡೆದಿದ್ದಾರೆ. ರೈತರು ಯಾರೂ ಬೆಳಗಾವಿಯತ್ತ ಹೋಗಬೇಡಿ. ಎಲ್ಲಾ ಜಿಲ್ಲೆ ಮುಖಂಡರನ್ನು ವಶಕ್ಕೆ ಪಡೆದಿದ್ದಾರೆ. ಮತ್ತೆ

> ನಿರ್ಜನ ಪ್ರದೇಶದಿಂದ ರೈತನನ್ನು ಇನ್ನುಳಿದ ರೈತರು ಹೊತ್ತುಕೊಂಡು ಹೋಗಿ, ಬಸ್ಸಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಆಸ್ಪತ್ರೆಗೆ ದಾಖಲಿಸದೇ ಅರ್ಧಕ್ಕೆ ಬಿಟ್ಟು ಹೋದ ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ.

ಸಂಜೆ ಎಲ್ಲರೂ ಸೇರೋಣ ಎಂದು ಗುರೂಜಿ ತಿಳಿಸಿದ್ದಾರೆ.

3,600 ರೂಪಾಯಿ ದರ ನೀಡಲು ಮಾಲೀಕರ ಒಪ್ಪಿಗೆ:

ಬುಧವಾರ ರಾತ್ರಿ ಸಭೆ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರು, ಟನ್ ಕಬ್ಬಿಗೆ 3,600 ರೂಪಾಯಿ ದರ ನೀಡಲು ಕಾರ್ಖಾನೆ ಮಾಲೀಕರು ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದ್ದರು. ಜೊತೆಗೆ ಎಲ್ಲಾ ರೈತ ಸಂಘಟನೆಗಳು ಈ ಬೆಲೆಯನ್ನು ಒಪ್ಪಿಕೊಳ್ಳಬೇಕು. ಗುರುವಾರದಿಂದ ಕಾರ್ಖಾನೆಗಳು ಆರಂಭಿಸಲು ಅನುವು ಮಾಡಿಕೊಡಬೇಕು ಎಂದು ಕೋರಿದ್ದರು. ಕಿತ್ತೂರು, ಬೈಲಹೊಂಗಲ, ಖಾನಾಪುರ ಭಾಗದ ರೈತರು ಈ ಬೆಲೆಯನ್ನು ಒಪ್ಪಿ, ನಾವು ಕೂಡಲೇ ಕಬ್ಬು ಕಟಾವು ಆರಂಭಿಸುತ್ತೇವೆ ಎಂದು ಮಾಧ್ಯಮಗಳ ಮುಂದೆ ಹೇಳಿಕೊಂಡರು. ಇದೇ ವೇಳೆ ರೈತ ಮುಖಂಡ ರವಿ ಪಾಟೀಲ್ ನೇತೃತ್ವದಲ್ಲಿ ಕೆಲ ರೈತರು ವಿರೋಧ ವ್ಯಕ್ತಪಡಿಸಿ, ಇದಕ್ಕೆ ನಮ್ಮ ಸಮ್ಮತಿ ಇಲ್ಲ.

ಒಂದು ತಿಂಗಳಿನಿಂದ ಇದೇ ದರವನ್ನು ಹೇಳುತ್ತಿದ್ದಾರೆ. ಇದರಲ್ಲಿ ಹೊಸದೇನು ಇಲ್ಲ. ಬೇಕಾಬಿಟ್ಟಿ ಹೇಳಿಕೆ ನೀಡಿ, ಹೋರಾಟ ತಡೆಯಬೇಡಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದರು.

ಪತ್ರಿಕೋದ್ಯಮ ಉದ್ಯಮವಾಗದೆ ಸಮಾಜಮುಖಿಯಾಗಲಿ

• **ಉದಯವಾಹಿನಿ ಬೀದರ್:**

'ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭವಾಗಿರುವ ಪತ್ರಿಕೋದ್ಯಮವು ಕೇವಲ ಉದ್ಯಮವಾಗಿ ಮಾರ್ಪಡದೆ, ಸಮಾಜದ ಹಿತ ಕಾಯುವ ಪತ್ರಿಕಾ ಧರ್ಮವನ್ನು ಪಾಲಿಸಬೇಕು.

ನಕಾರಾತ್ಮಕ ವಿಚಾರಗಳಿಗೆ ಆದ್ಯತೆ ನೀಡುವ ಬದಲು ಜನರಲ್ಲಿ ಸಕಾರಾತ್ಮಕ ಚಿಂತನೆ, ನೈತಿಕ ಮೌಲ್ಯ ಹಾಗೂ ಆಧ್ಯಾತ್ಮಿಕ ಪ್ರಜ್ಞೆ ಬೆಳೆಸುವ ಕಾರ್ಯಕ್ಕೆ ಮಾಧ್ಯಮಗಳು ಮುಂದಾಗಬೇಕು' ಎಂದು ಬೆಂಗಳೂರು ಚನ್ನಬಸವೇಶ್ವರ ಜ್ಞಾನಪೀಠದ ಪೀಠಾಧಿಪತಿ ಪೂಜ್ಯ ಡಾ.ಚನ್ನಬಸವಾನಂದ ಸ್ವಾಮಿಜಿ ಅಭಿಪ್ರಾಯ ಪಟ್ಟರು.ನಗರದ ಜನವಾಡ ರಸ್ತೆಯ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಪಾವನಧಾಮ ಕೇಂದ್ರದಲ್ಲಿ ಗುರುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಅವರು


☛ ಉದಯವಾಹಿನಿ ಚಿತ್ರ

ಮಾತನಾಡಿದರು.

'ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪತ್ರಿಕೆಗಳು ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಅಪರಾಧ, ಕಳ್ಳತನ, ದರೋಡೆ ಮತ್ತು ಇತರ ನಕಾರಾತ್ಮಕ ಸುದ್ದಿಗಳಿಗೆ ಹೆಚ್ಚಿನ ಪ್ರಾಮುಖ್ಯ ದೊರೆಯುತ್ತಿದೆ. ಸಮಾಜದಲ್ಲಿ ನಡೆಯುವ ಉತ್ತಮ ಕಾರ್ಯಗಳು, ಮಾನವೀಯ ಸೇವೆ ಮತ್ತು ಆದರ್ಶ ವ್ಯಕ್ತಿತ್ವಗಳಿಗೂ ಸೂಕ್ತ ಪ್ರಚಾರ ದೊರೆಯಬೇಕು.

ಪತ್ರಿಕೋದ್ಯಮ ತನ್ನ ಮೂಲ ಆಶಯದಿಂದ ವಿಮುಖವಾಗಬಾರದು' ಎಂದು ಸಲಹೆ ನೀಡಿದರು. ವಿದ್ಯಾರ್ಥಿ ಚಳವಳಿ, ಸಾರ್ವಜನಿಕ ಹೋರಾಟ ಹಾಗೂ ಸ್ಥಳೀಯ ಸಮಸ್ಯೆಗಳನ್ನು ಅಂದಿನ ದಿನವೇ ಜನರಿಗೆ ತಲುಪಿಸುವ ಮೂಲಕ ಪತ್ರಿಕೆ ವಿಶಿಷ್ಟ ಸ್ಥಾನ ಪಡೆದಿದೆ. ಓದುಗರ ಮನಸ್ಸಿನಲ್ಲಿ ನೆಲೆಸಿದೆ' ಎಂದು ಪೂಜ್ಯರು ಮೆಚ್ಚುಗೆ ವ್ಯಕ್ತಪಡಿಸಿದರು.

> 'ಪತ್ರಿಕೆಯ ಉಪ ಸಂಪಾದಕ ಶಿವಕುಮಾರ್ ಸ್ವಾಮಿ ಅವರು ಕಳೆದ 16 ವರ್ಷಗಳಿಂದ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ. ಪತ್ರಿಕಾ ವೃತ್ತಿಯೊಂದಿಗೆ ಆಧ್ಯಾತ್ಮಿಕ ಚಿಂತನೆ ಮತ್ತು ಸಾಮಾಜಿಕ ಕಳಕಳಿಯನ್ನು ಹೊಂದಿರುವುದು ಅಭಿನಂದನಾರ್ಹ' ಎಂದು ಹೇಳಿದರು. -ಡಾ.ಚನ್ನಬಸವಾನಂದ ಸ್ವಾಮಿಜಿ

ಜಯನಗರ ಕುಡಿಯುವ ನೀರು ಪರಿಹಾರಕ್ಕೆ ಒಂದು ವಾರ ಗಡುವು

• **ಉದಯವಾಹಿನಿ ಕಲಬುರಗಿ:**


☛ ಉದಯವಾಹಿನಿ ಚಿತ್ರ

ಪ್ರಸಕ್ತ ವರ್ಷ ಮಳೆ ಅಭಾವದಿಂದ ವಾರ್ಡ್ ನಂ.48 ರಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದ್ದು,ಇದರ ಪರಿಹಾರಕ್ಕೆ ಜಿಲ್ಲಾಡಳಿತ ಮತ್ತು ಮಹಾನಗರ ಪಾಲಿಕೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಒಂದು ವಾರ ಗಡುವು ನೀಡಲಾಗುವುದು ಎಂದು ಶಾಶ್ವತ ಕುಡಿಯುವ ನೀರು ಪರಿಹಾರ ಹೋರಾಟ ಜಂಟಿ ಕ್ರಿಯಾ ಸಮಿತಿ ತಿಳಿಸಿದೆ. ಜಯನಗರ ಶಿವ ಮಂದಿರದಲ್ಲಿ ಸಂಜೆ ಜಯನಗರ ಅಭಿವೃದ್ಧಿ ಸಂಘ, ಜಯನಗರ ಶಿವಮಂದಿರ ಅಭಿವೃದ್ಧಿ ಟ್ರಸ್ಟ್ ಹಾಗೂ ಡಾಕ್ಟರ್ಸ್ ಕಾಲೋನಿ ಈಶ್ವರ ಮಂದಿರ ಕಮಿಟಿ ಹಮ್ಮಿಕೊಂಡಿದ್ದ ಸಭೆಯಲ್ಲಿ ವಿವಿಧ ಬಡಾವಣೆಗಳ ಸಾರ್ವಜನಿಕರೊಂದಿಗೆ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ನಂತರ ಮಾತನಾಡಿದ ಹೋರಾಟಗಾರ ಹಾಗೂ ಜಯನಗರ ಶಿವಮಂದಿರ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಡಾ.ಲಿಂಗರಾಜ ಸಿರಗಾಪೂರ ವಾರ್ಡ್ ನಂ.48 ರಲ್ಲಿ ಬರುವ ಜಯನಗರ, ಪೂಜಾ ಕಾಲೋನಿ,ಡಾಕ್ಟರ್ಸ್ ಕಾಲೋನಿ, ಧನ್ವಂತರಿ ನಗರ,ತಿಲಕ್ ನಗರ ಸೇರಿದಂತೆ ಈ ಬಾರಿ ಮಳೆ ಅಭಾವದಿಂದ ಹಲವು ಬಡಾವಣೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಕೊಳವೆ ಬಾವಿಗಳು ಬತ್ತಿ ಹೋಗಿವೆ. ನೀರಿಗಾಗಿ ದುಡ್ಡು ಕೊಟ್ಟು ಟ್ಯಾಂಕರ್ ಮೊರೆ ಹೋಗುವುದು ಅನಿವಾರ್ಯವಾಗಿದೆ.ಕುಡಿಯುವ ನೀರಿನ ಶಾಶ್ವತ ಪರಿಹಾರಕ್ಕಾಗಿ ಪರಿಹಾರಕ್ಕೆ ಗಡುವು ನೀಡಲಾಗಿದೆ. ನಮ್ಮ ಬೇಡಿಕೆ ಈಡೇರದಿದ್ದರೆ ರಸ್ತೆ ತಡೆ ನಡೆಸಲು ನಿರ್ಧರಿಸಲಾಗಿದೆ ಎಂದು ಎಚ್ಚರಿಕೆ ನೀಡಿದರು.

ತಮ್ಮೂರಿನಲ್ಲಿಯೇ ಉಚಿತ ಕಾನೂನು ಅರಿವು ನೆರವು ಪಡೆದುಕೊಳ್ಳಿ

• **ಉದಯವಾಹಿನಿ ಕಲಬುರಗಿ:**


☛ ಉದಯವಾಹಿನಿ ಚಿತ್ರ

ನಮ್ಮ ದೇಶದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಕಾನೂನಿನ ರಕ್ಷಣೆ ಪಡೆಯುವ ಹಕ್ಕಿದೆ. ಆದರೆ ಕಾನೂನಿನ ಅರಿವಿನ ಕೊರತೆಯಿಂದ ಅನೇಕರು ತಮ್ಮ ಹಕ್ಕುಗಳಿಂದ ವಂಚಿತರಾಗುತ್ತಿದ್ದಾರೆ ಎಂದು ಕಲಬುರಗಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಪ್ಯಾನಲ್ ವಕೀಲರಾದ ಹಣಮಂತರಾಯ ಅಟ್ಟೂರ ಹೇಳಿದರು.

ಕಲಬುರಗಿ ತಾಲ್ಲೂಕಿನ ಹರಸೂರ ಗ್ರಾಮ ಪಂಚಾಯತ ಆವರಣದಲ್ಲಿ ಕಾನೂನು ಅರಿವು ಹಾಗೂ ನೆರವು ಬಗ್ಗೆ ಮಾತನಾಡುತ್ತ,ಗ್ರಾಮೀಣ ಭಾಗದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ, ಬಾಲ್ಯವಿವಾಹ,ಪೋಕ್ಸೋ ಅಪರಾಧಗಳು, ವರದಕ್ಷಿಣೆ ಕಿರುಕುಳ, ಆಸ್ತಿ ವಿವಾದ, ಜಮೀನು ಸಮಸ್ಯೆ, ಕೂಲಿ ಕಾರ್ಮಿಕರ ಶೋಷಣೆ ಮುಂತಾದ ಸಮಸ್ಯೆಗಳು ಹೆಚ್ಚಾಗಿ ಕಂಡುಬರುತ್ತವೆ.ಇಂತಹ ಸಂದರ್ಭದಲ್ಲಿ ನೀವು ಭಯಪಡುವ ಅಗತ್ಯವಿಲ್ಲ. ಕಾನೂನು ಸೇವಾ ಪ್ರಾಧಿಕಾರ ನಿಮ್ಮ ರಕ್ಷಣೆಗೆ ಇದೆ.ಹಣ ಇಲ್ಲದ ಕಾರಣ ನ್ಯಾಯ ಸಿಗುವುದಿಲ್ಲ ಎಂದು ಯಾರೂ ಭಾವಿಸಬೇಡಿ. ಅರ್ಹ ವ್ಯಕ್ತಿಗಳಿಗೆ ಪ್ರಾಧಿಕಾರದ ಮೂಲಕ ಉಚಿತ ವಕೀಲರ ನೆರವು ದೊರೆಯುತ್ತದೆ.

ಯಾವುದೇ ಅನ್ಯಾಯ ನಡೆದಾಗ ಮೌನವಾಗಿರಬೇಡಿ. ಮಹಿಳೆಯರು ತಮ್ಮ ಹಕ್ಕುಗಳನ್ನು ತಿಳಿದುಕೊಳ್ಳಬೇಕು. ಮಕ್ಕಳು ಶಿಕ್ಷಣ ಪಡೆಯಬೇಕು. ಹಿರಿಯ ನಾಗರಿಕರು ಗೌರವಯುತವಾಗಿ ಬದುಕಬೇಕು. ಪ್ರತಿಯೊಬ್ಬರೂ ತಮ್ಮ ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನೂ ಪಾಲಿಸಬೇಕು.ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಸರ್ವರಿಗೂ ಉಚಿತ ಕಾನೂನು ಅರಿವು ಮೂಡಿಸಿ ಹಾಗೂ ಮಹಿಳೆಯರಿಗೆ, ಮಕ್ಕಳಿಗೆ, ಬಡವರಿಗೆ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಇತರರರಿಗೆ ಕಾನೂನು ನೆರವು ಉಚಿತವಾಗಿ ನೀಡುತ್ತದೆ. ಪಂಚಾಯತ ವ್ಯಾಪ್ತಿಯ ಎಲ್ಲಾ ಗ್ರಾಮದ ಸರ್ವರೂ ಇದರ ಸದುಪಯೋಗ ಪಡೆದುಕೊಂಡು ಉತ್ತಮ ಸಮಾಜ ನಿರ್ಮಿಸಲಿ ಎಂದು ಮಾರ್ಮಿಕವಾಗಿ ಹೇಳಿದರು.


ಶಾಲಾ ಕಟ್ಟಡಕ್ಕೆ ಧರ್ಮಸ್ಥಳದಿಂದ 50 ಸಾವಿರ

• **ಉದಯವಾಹಿನಿ ಪುತ್ತೂರು;**

ಪುತ್ತೂರು ತಾಲ್ಲೂಕಿನ ಹಿರಿಯಪ್ರಾಥಮಿಕ ಶಾಲೆ ಮುಂಡೂರು ಇದರ ಕಟ್ಟಡ ಕಾಮಗಾರಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ರೂ.50 ಸಾವಿರ ಮಂಜೂರುಗೊಂಡಿದೆ. ಶ್ರೀಕ್ಷೇತ್ರ ಧರ್ಮಸ್ಥಳದಿಂದ ನೀಡಲಾದ ಈ ಕೊಡುಗೆಯನ್ನು ಯೋಜನೆಯ ತಾಲ್ಲೂಕು ಯೋಜನಾಧಿಕಾರಿ ಶಶಿಧರ್ ಅವರು ಶಾಲಾ ಮುಖ್ಯಗುರುಗಳಿಗೆ ಈ ಮಂಜೂರಾತಿ ಪತ್ರ ವಿತರಣೆ ಮಾಡಿದರು.

ನಮ್ಮ ಮನೆಯಿಂದ ತಿಗಣೆ ಓಡಿಸು ತಾಯಿ

• **ಉದಯವಾಹಿನಿ ಬೆಳಗಾವಿ:**


☛ ಉದಯವಾಹಿನಿ ಚಿತ್ರ

ಉತ್ತರಕರ್ನಾಟಕ ಶಕ್ತಿ ದೇವತೆ ಸವದತ್ತಿ ಯಲ್ಲಮ್ಮ ದೇವಸ್ಥಾನದ ಹುಂಡಿಯಲ್ಲಿ ಹಣ, ಚಿನ್ನಾಭರಣ ಮತ್ತು ಬೆಳ್ಳಿ ಆಭರಣದೊಂದಿಗೆ ವಿಚಿತ್ರ ಬೇಡಿಕೆಯುಳ್ಳ ಪತ್ರಗಳನ್ನು ಕೂಡ ಭಕ್ತರು ಹಾಕುತ್ತಾರೆ. ಈ ಸಲದ ಹುಂಡಿ ಎಣಿಕೆಯಲ್ಲಿ 'ಮನೆಯಿಂದ ತಿಗಣೆಗಳನ್ನು ಓಡಿಸುವಂತೆ' ಬೇಡಿಕೊಂಡು ಭಕ್ತರೊಬ್ಬರು ಬರೆದಿರುವ ಪತ್ರ ಪತ್ತೆ ಆಗಿದ್ದು, ತೀವ್ರ ಚರ್ಚೆಗೆ ಗ್ರಾಸವಾಗಿದೆ.

'ಅಮ್ಮ ತಾಯಿ ಯಲ್ಲಮ್ಮ ದೇವಿ ನಮ್ಮ ಮನೆಯಲ್ಲಿ ತಿಗಣೆಗಳಿವೆ. ಎಲ್ಲಾ ತಿಗಣೆಗಳು ಮನೆಯಿಂದ ಹೋಗಲಿ. ನಿನ್ನ ಗುಡಿಗೆ ಬಂದು ಹಣ್ಣು-ಕಾಯಿ ಮಾಡಿಸುತ್ತೇನೆ' ಅಂತಾ ಭಕ್ತನೊಬ್ಬ ಹುಂಡಿಯಲ್ಲಿ ಪತ್ರ ಬರೆದು ಹಾಕಿರುವುದು ಬೆಳಕಿಗೆ ಬಂದಿದೆ. ಅದೇ ರೀತಿ ತಮ್ಮ ವಿವಿಧ ರೀತಿಯ ನೋವುಗಳನ್ನು ಉಲ್ಲೇಖಿಸಿ ನಮ್ಮ ಕಷ್ಟಕಾರ್ಪಣ್ಯಗಳನ್ನು ದೂರ ಮಾಡುವಂತೆ ತಾಯಿ ಯಲ್ಲಮ್ಮಗೆ ಪತ್ರ ಬರೆದು ಹುಂಡಿಯಲ್ಲಿ ಹಾಕಿರುವುದು ಕಂಡುಬಂದಿದೆ.

2.69 ಕೋಟಿ ಕಾಣಿಕೆ ಸಂಗ್ರಹ: ಯಲ್ಲಮ್ಮನಗುಡ್ಡದಲ್ಲಿ ಕಳೆದ ನಾಲ್ಕು ದಿನಗಳಿಂದ ನಡೆದ ಯಲ್ಲಮ್ಮ ದೇವಿ ದೇವಸ್ಥಾನದ ಹುಂಡಿಗಳ ಎಣಿಕೆ ಕಾರ್ಯ ಬುಧವಾರ ಮುಕ್ತಾಯಗೊಂಡಿದ್ದು, 2.69 ಕೋಟಿ ಮೌಲ್ಯದ ಕಾಣಿಕೆ ಸಂಗ್ರಹವಾಗಿದೆ ಎಂದು ಇಲ್ಲಿನ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇದರಲ್ಲಿ 2.34 ಕೋಟಿ ನಗದು, 26.95 ಲಕ್ಷ ಮೌಲ್ಯದ ಮೌಲ್ಯದ ಚಿನ್ನಾಭರಣ, 7.32 ಲಕ್ಷ ಮೌಲ್ಯದ ಬೆಳ್ಳಿ ಆಭರಣಗಳು ಸೇರಿವೆ. ಮೇ 7ರಿಂದ ಅಕ್ಟೋಬರ್ 10ರ ಅವಧಿಯಲ್ಲಿ ಭಕ್ತರು ಹುಂಡಿಯಲ್ಲಿ ಹಾಕಿದ್ದ ಕಾಣಿಕೆ ಎಣಿಸಲಾಗಿದೆ. ಈ ಹಣ ದೇವಸ್ಥಾನದ ಅಭಿವೃದ್ಧಿಗೆ ಬಳಸಲಾಗುವುದು ಎಂದು ಯಲ್ಲಮ್ಮ ದೇವಸ್ಥಾನ ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಯೋಗ-ಆರೋಗ್ಯ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ

• **ಉದಯವಾಹಿನಿ ಪುತ್ತೂರು:**

ಮಕ್ಕಳ ಗುಣಮಟ್ಟದ ಶಿಕ್ಷಣಕ್ಕಾಗಿ ಪುತ್ತೂರು ಕ್ಷೇತ್ರದ 19 ಕಡೆಗಳಲ್ಲಿ ಕೆಪಿಎಸ್ ಶಾಲೆಗಳು ಆರಂಭಗೊಳ್ಳಲಿದೆ. ಈ ಬಗ್ಗೆ ಸರ್ಕಾರದ ಜತೆಗೆ ಮಾತುಕತೆ ನಡೆಸಿದ್ದೇನೆ. ಪ್ರಸ್ತು 5 ಕೆಪಿಎಸ್ ಶಾಲೆಗಳಿಗೆ ಮಂಜೂರಾತಿ ದೊರೆತಿದೆ. ಈ ಕ್ಷೇತ್ರದ ವ್ಯಾಪ್ತಿಯಲ್ಲಿನ ಪ್ರತಿಯೊಂದು ಮಗುವಿಗೂ ಉತ್ತಮ ಗುಣಮಟ್ಟದ ಶಿಕ್ಷಣ, ಯುವಕರಿಗೆ ಉದ್ಯೋಗ ಹಾಗೂ ಜನತೆಗೆ ಉತ್ತಮವಾದ ಆರೋಗ್ಯ ಸೇವೆ ದೊರಕಬೇಕು.

ಇದಕ್ಕೆ ಆದ್ಯತೆ ಎಂದು ಶಾಸಕ ಅಶೋಕ್ ರೈ ಹೇಳಿದರು. ಬಡವರ್ಗದ ಜನತೆಯ ಮಕ್ಕಳೂ ಕನ್ನಡದ ಜತೆಗೆ ಆಂಗ್ಲಭಾಷೆ ಕಲಿಯಬೇಕು. ಇದು ಉದ್ಯೋಗಕ್ಕೆ ಪೂರಕವಾಗುತ್ತದೆ. ವಿದ್ಯಾವಂತ ನಿರುದ್ಯೋಗಿಗಳು ಸೂಕ್ತ ಉದ್ಯೋಗ ಪಡೆದುಕೊಳ್ಳಬೇಕು. ಮೆಡಿಕಲ್ ಕಾಲೇಜು ಆರಂಭದ ಹೊತ್ತಿಗೆ ಸುಮಾರು 25 ಸಾವಿರ ಉದ್ಯೋಗ ಸೃಷ್ಟಿಯಾಗಲಿದೆ. ಕೇವಲ ರಸ್ತೆ ನಿರ್ಮಾಣ ಮಾತ್ರ ಅಭಿವೃದ್ಧಿಯಲ್ಲ. ಜನತೆಯ ಸಂಕಷ್ಟಕ್ಕೆ ಸ್ಪಂಧಿಸುವುದು ಅಭಿವೃದ್ಧಿಯ ಭಾಗವಾಗಿದೆ ಎಂದು ಅವರು ಹೇಳಿದರು. ಮೂರು ವರ್ಷದ ಅವಧಿಯಲ್ಲಿ ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2000 ಕ್ಕೂ ಮಿಕ್ಕಿ ಭೂಮಿಯನ್ನು ರೈತರಿಗೆ ಸಕ್ರಮ ಮಾಡಿಕೊಟ್ಟಿದ್ದೇವೆ. ಎಷ್ಟೋ ವರ್ಷದಿಂದ ತಮ್ಮ ಒಡೆತನದ ಭೂಮಿಗಾಗಿ ಅರ್ಜಿ ಹಾಕಿ ಕಚೇರಿ ತಿರುಗುವಂತಾಗಿತ್ತು.


☛ ಉದಯವಾಹಿನಿ ಚಿತ್ರ

> ಪುತ್ತೂರು ಈ ವಿಚಾರದಲ್ಲಿ ರಾಜ್ಯದಲ್ಲೇ ನಂಬರ್ ಒನ್ ಇದೆ. ಜನರ ಸಹಕಾರ ಮತ್ತು ಅಧಿಕಾರಿ ವರ್ಗದ ಉತ್ಸಾಹದಿಂದ ಇದು ಸಾಧ್ಯವಾಗಿದೆ. ಮುಂದಿನ ಪ್ರತೀ ಮಂಗಳವಾರ ಈ ಬೈಠಕ್ ನಡೆಯುತ್ತಲೇ ಇರುತ್ತದೆ ಎಂದು ಶಾಸಕರು ಹೇಳಿದರು.

ಈ ಹಿಂದೆ ಉಳ್ಳವರ ಭೂಮಿಗೆ ಮಂಜೂರಾತಿ ಸಿಗುತ್ತಿತ್ತು, ಬಡವರ ಬಗ್ಗೆ ಕೇಳುವವರೇ ಇರಲಿಲ್ಲ. ಚುನಾವಣೆಯ ಸಮಯದಲ್ಲಿ ಕೊಟ್ಟ ಮಾತಿನಂತೆ ಗ್ರಾಮಸ್ಥರ ಮನೆ ಬಾಗಿಲಿಗೆ ಬಂದು ಭೂಮಿ ಮಂಜೂರು ಮಾಡಿಸಿದ್ದೇನೆ ಎಂದು ಹೇಳಿದ ಶಾಸಕರು ದ ಕ ಜಿಲ್ಲೆಯ ಬೇರೆ ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲೂ ಅಕ್ರಮ ಸಕ್ರಮ ಬೈಠಕ್ ಸಮರ್ಪಕವಾಗಿ ನಡೆಯುತ್ತಿಲ್ಲ .

ನಾಡು-ನುಡಿಗೆ ಸೇವೆ ಸಲ್ಲಿಸಿದ ಮಹನೀಯರ ಸ್ಮರಣೆ ಅಗತ್ಯ

• **ಉದಯವಾಹಿನಿ ಗದಗ,:**

ಕನ್ನಡದ ಕಂಪು ನಾಡಿನ ಎಲ್ಲೆಡೆ ಪಸರಿಸಬೇಕು. ಕನ್ನಡ ಭಾಷೆ, ನೆಲ, ಜಲ, ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರತಿಬಿಂಬಿಸುವ ಕಾರ್ಯಕ್ರಮಗಳು ದಿನವೂ ನಡೆಯಬೇಕು ಎಂದು ಗದಗ ವಿಭಾಗೀಯ ಅಂಚೆ ಅಧೀಕ್ಷಕ ಎಸ್.ಎಸ್.ಶಿರಹಟ್ಟಿ ಅಭಿಪ್ರಾಯಪಟ್ಟರು. ನಗರದ ಸ್ವತಂತ್ರ ವಿತರಣಾ ಕೇಂದ್ರದಲ್ಲಿ ಗದಗ ಮನರಂಜನಾ ಕೂಟ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಕನ್ನಡ ರಾಜ್ಯೋತ್ಸವ ಮತ್ತು ಸಂಗೀತ ಸ್ಪರ್ಧೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಕನ್ನಡ ನಾಡು ಏಕೀಕರಣಕ್ಕೆ ಆಲೂರು ವೆಂಕಟರಾವ್, ಬಿ.ಎಂ.ಶ್ರೀ, ಕುವೆಂಪು ಮುಂತಾದ ಮಹನೀಯರ ತ್ಯಾಗ ಮತ್ತು ಪರಿಶ್ರಮ ಬಗೆಗೆ ಪ್ರತಿಯೊಬ್ಬ ಕನ್ನಡಿಗರಲ್ಲಿ ನಾಡು-ನುಡಿಯ ಬಗ್ಗೆ ಅಭಿಮಾನ, ಗೌರವ ಮತ್ತು ಜಾಗೃತಿ ಮೂಡಿಸುವ ಮೂಲಕ ರಾಜ್ಯೋತ್ಸವ ನಿಜವಾದ ಅರ್ಥದಲ್ಲಿ ಕನ್ನಡಮಯವಾಗಬೇಕು. ರಾಜ್ಯೋತ್ಸವವು ಕೇವಲ ಸಂಭ್ರಮಾಚರಣೆಗೆ ಸೀಮಿತವಾಗದೆ, ಕನ್ನಡ ನಾಡಿನ ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಕಲೆ ಹಾಗೂ ನಾಡಿಗೆ ಅಪಾರ ಕೊಡುಗೆ ನೀಡಿದ ಮಹನೀಯರನ್ನು ಸ್ಮರಿಸುವ ಅರ್ಥಪೂರ್ಣ ದಿನವಾಗಬೇಕು ಎಂದರು.

ಕರ್ನಾಟಕ ಏಕೀಕರಣಕ್ಕೂ ಮುನ್ನ ಕನ್ನಡ ಭಾಷಿಕ ಪ್ರದೇಶಗಳು ಐದು ಪ್ರಾಂತ್ಯಗಳಲ್ಲಿ ಹಂಚಿಹೋಗಿದ್ದವು. ಇಂತಹ ಸಂದರ್ಭದಲ್ಲಿ


☛ ಉದಯವಾಹಿನಿ ಚಿತ್ರ

> ನಾಡಿನ ಏಳಿಗೆಗಾಗಿ ಶ್ರಮಿಸಿದ ಮಹನೀಯರ ಸ್ಮರಣೆ, ಅವರ ಆದರ್ಶಗಳ ಪರಿಚಯ ಹಾಗೂ ಕನ್ನಡದ ಹಿರಿಮೆಯನ್ನು ಸಾರುವ ಕಾರ್ಯಕ್ರಮಗಳು ರಾಜ್ಯೋತ್ಸವದ ಅವಿಭಾಜ್ಯ ಅಂಗವಾಗಬೇಕು ಎಂದರು.

ಕನ್ನಡಿಗರ ಹೋರಾಟ, ತ್ಯಾಗ ಮತ್ತು ಪರಿಶ್ರಮದ ಫಲವಾಗಿ ಅಖಂಡ ಕರ್ನಾಟಕ ನಿರ್ಮಾಣವಾಗಿದೆ. ಈ ಐತಿಹಾಸಿಕ ಹಿನ್ನೆಲೆಯನ್ನು ಇಂದಿನ ಯುವಪೀಳಿಗೆಗೆ ಪರಿಚಯಿಸುವ ಅಗತ್ಯವಿದೆ ಎಂದರು.ಕನ್ನಡ ನಾಡು ಸಾಹಿತ್ಯ, ಸಂಸ್ಕೃತಿ, ಕಲೆ, ವಿಜ್ಞಾನ, ಶಿಕ್ಷಣ, ಕ್ರೀಡೆ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ಅನನ್ಯ ಕೊಡುಗೆ ನೀಡಿದೆ. ದೇಶದ ಹಲವು ಕ್ಷೇತ್ರಗಳಲ್ಲಿ ಪ್ರಥಮ ಸಾಧನೆ ಮಾಡಿದ ಕನ್ನಡಿಗರ ಹೆಮ್ಮೆಯ ಸಾಧನೆಗಳನ್ನು ಗುರುತಿಸಿ ಗೌರವಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಮಂಗಳೂರು ಸಿಸಿಬಿ ಪೊಲೀಸರ ಭರ್ಜರಿ ಕಾರ್ಯಾಚರಣೆ

• **ಉದಯವಾಹಿನಿ ಮಂಗಳೂರು:**


☛ ಉದಯವಾಹಿನಿ ಚಿತ್ರ

ನಗರದಲ್ಲಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಮಾರಾಟ ಮಾಡಲು ಬೆಂಗಳೂರಿನಿಂದ ನಿಷೇಧಿತ ಎಲ್ಎಸ್‌ಡಿ ಡ್ರಗ್ಸ್ ತಂದಿದ್ದ ಇಬ್ಬರು ಆರೋಪಿಗಳನ್ನು ಮಂಗಳೂರು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ ಎಂದು ಮಂಗಳೂರು ನಗರ ಪೊಲೀಸರು ಕಮೀಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ. ಮಂಗಳೂರಿನ ನಿಹಾಲ್ ಸ್ಯಾಂಪ್ರಸ್ ರೋಡ್ರಿಗಸ್ (30), ಸಿದ್ದಾರ್ಥ ಶೆಟ್ಟಿ (35) ಬಂಧಿತರು. ಬಂಧಿತರಿಂದ ಅಂದಾಜು 3,00,000 ಮೌಲ್ಯದ 100 ಎಲ್ಎಸ್‌ಡಿ ಡ್ರಗ್ಸ್ ಸ್ಟ್ರಿಪ್‌ಗಳು ಹಾಗೂ 3 ಮೊಬೈಲ್ ಫೋನ್‌ಗಳು ಸೇರಿದಂತೆ ಒಟ್ಟು 3,35,000 ಮೌಲ್ಯದ ಸೊತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಬೆಂಗಳೂರಿನಿಂದ ಮಾದಕ ವಸ್ತುಗಳನ್ನು ಖರೀದಿಸಿ ತಂದು, ಮಂಗಳೂರು ನಗರದಲ್ಲಿ ವಿದ್ಯಾರ್ಥಿಗಳು ಮತ್ತು ಯುವಜನತೆಯನ್ನು ಗುರಿಯಾಗಿಸಿಕೊಂಡು ಮಾರಾಟ ಮಾಡುತ್ತಿರುವ ಬಗ್ಗೆ ಸಿಸಿಬಿ ಪೊಲೀಸರಿಗೆ ಖಚಿತ ಮಾಹಿತಿ ಲಭಿಸಿತ್ತು. ಈ ಸುಳಿವಿನ ಮೇರೆಗೆ ದಿನಾಂಕ 03-11-2026ರಂದು ಮಧ್ಯಾಹ್ನ ಮಂಗಳೂರಿನ ಪಡೀಲ್ ರೈಲ್ವೆ ಬ್ರಿಡ್ಜ್ ಬಳಿ ತ್ವರಿತ ಕಾರ್ಯಾಚರಣೆ ನಡೆಸಿದ ಸಿಸಿಬಿ ಅಧಿಕಾರಿಗಳು, ಡ್ರಗ್ಸ್ ಮಾರಾಟಕ್ಕೆ ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಸುತ್ತುವರಿದು ವಶಕ್ಕೆ ಪಡೆದಿದ್ದಾರೆ. ಬಂಧಿತರಿಬ್ಬರೂ ಹಳೆಯ ಅಪರಾಧ ಹಿನ್ನೆಲೆ ಹೊಂದಿದವರಾಗಿದ್ದಾರೆ. ಆರೋಪಿ ನಿಹಾಲ್ ಸ್ಯಾಂಪ್ರಸ್ ರೋಡ್ರಿಗಸ್ ವಿರುದ್ಧ ಮಂಗಳೂರು ನಗರ ಉತ್ತರ (ಬಂದರ್) ಪೊಲೀಸ್ ಠಾಣೆಯಲ್ಲಿ ಈ ಹಿಂದೆ ಮಾದಕವಸ್ತು ಮಾರಾಟ ಮಾಡಿದ ಪ್ರಕರಣ ದಾಖಲಾಗಿದೆ. ಮತ್ತೋರ್ವ ಆರೋಪಿ ಸಿದ್ದಾರ್ಥ ಶೆಟ್ಟಿ ವಿರುದ್ಧ ಮಂಗಳೂರಿನ ಬರ್ಕೆ ಹಾಗೂ ಉರ್ವ ಪೊಲೀಸ್ ಠಾಣೆಗಳಲ್ಲಿ ಗಲಾಟೆ, ಕೊಲೆಯತ್ನ ಮತ್ತು ಗಾಂಜಾ ಮಾರಾಟ ಸೇರಿದಂತೆ ಬರೋಬ್ಬರಿ 9 ಗಂಭೀರ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಈ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಕಂಕನಾಡಿ ನಗರ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಶಾಲೆ-ಕಾಲೇಜುಗಳಿಗೆ ಮೂಲಸೌಕರ್ಯ ಕಲ್ಪಿಸಿ: ರೇವಣ್ಣ ಒತ್ತಾಯ

ಹಾಸನದ ಇಂಜಿನಿಯರಿಂಗ್ ಕಾಲೇಜಿಗೆ ಭೇಟಿ ನೀಡಿದಾಗ ಅಲ್ಲಿನ ಅವ್ಯವಸ್ಥೆ ಕಂಡು ಬೇಸರವಾಯಿತು ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು ಎಂದರು.

• **ಉದಯವಾಹಿನಿ** ಹಾಸನ:

ಸರ್ಕಾರಿ ಶಾಲೆ ಮತ್ತು ಕಾಲೇಜುಗಳಲ್ಲಿ ಮೂಲಸೌಕರ್ಯಗಳ ಕೊರತೆಯಿಂದ ಬಡ ಹಾಗೂ ಗ್ರಾಮೀಣ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳಿಗೆ ಅಗತ್ಯ ಕಟ್ಟಡ, ಶಿಕ್ಷಕರು ಹಾಗೂ ವಸತಿ ಸೌಲಭ್ಯ ಕಲ್ಪಿಸುವ ಮೂಲಕ ಸರ್ಕಾರಿ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಬೇಕು ಎಂದು ಶಾಸಕ ಎಚ್.ಡಿ. ರೇವಣ್ಣ ಒತ್ತಾಯಿಸಿದರು.

ನಗರದ ಹಾಸನ ಹಾಲು ಒಕ್ಕೂಟದ ಸಭಾಂಗಣದಲ್ಲಿ

1 : ಸಂಕಷ್ಟದಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ
2 : ಹೆಚ್ಚುವರಿಯಾಗಿ ಪ್ರವೇಶ ಪಡೆದಿದ್ದು
3 : ಅಲ್ಲಿ ಅಗತ್ಯ ಸಂಖ್ಯೆಯಲ್ಲಿ ಶಿಕ್ಷಕರಿಲ್ಲ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ರಾಜ್ಯ ಸರ್ಕಾರ ಶಿಕ್ಷಣ ಕ್ಷೇತ್ರದ ಸಮಸ್ಯೆಗಳತ್ತ ವಿಶೇಷ ಗಮನಹರಿಸಬೇಕು ಎಂದರು.

ಗ್ರಾಮೀಣ ಪ್ರದೇಶಗಳಲ್ಲಿನ ಕನ್ನಡ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಮುಚ್ಚುವ ಸ್ಥಿತಿಗೆ ತಲುಪಿವೆ. ಅನೇಕ ಶಾಲೆಗಳಲ್ಲಿ ಕನಿಷ್ಠ ಮೂಲಸೌಕರ್ಯಗಳೂ ಇಲ್ಲದೇ ಮಕ್ಕಳು ಸಂಕಷ್ಟದಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಕೆಲವು ಕಡೆ ಶಾಲಾ ಕಟ್ಟಡಗಳ ಕೊರತೆಯಿಂದ ಮಕ್ಕಳನ್ನು ಜಗಲಿ ಹಾಗೂ ಇತರೆ ತಾತ್ಕಾಲಿಕ ಸ್ಥಳಗಳಲ್ಲಿ ಕೂರಿಸಿ ಪಾಠ ಮಾಡಲಾಗುತ್ತಿದೆ. ಕನ್ನಡ


☛ ಉದಯವಾಹಿನಿ ಚಿತ್ರ

ಶಾಲೆಗಳನ್ನು ಉಳಿಸಿ ಬೆಳೆಸಲು ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು ಎಂದರು.

ಹಾಸನದ ಇಂಜಿನಿಯರಿಂಗ್ ಕಾಲೇಜಿಗೆ ಭೇಟಿ ನೀಡಿದಾಗ ಅಲ್ಲಿನ ಅವ್ಯವಸ್ಥೆ ಕಂಡು ಬೇಸರವಾಯಿತು. ಈ ವರ್ಷ ಕಾಲೇಜಿನಲ್ಲಿ ಸುಮಾರು 150 ವಿದ್ಯಾರ್ಥಿಗಳು ಹೆಚ್ಚುವರಿಯಾಗಿ ಪ್ರವೇಶ ಪಡೆದಿದ್ದು, ಅವರಿಗೆ ಕನಿಷ್ಠ 10 ಕೊಠಡಿಗಳ ಅಗತ್ಯವಿದೆ. ಆದರೆ ಅಗತ್ಯ ಮೂಲಸೌಕರ್ಯಗಳಿಲ್ಲ. ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿನಿಯರಿಗೆ ಮಲಗಲು ಹಾಸಿಗೆಗಳ ವ್ಯವಸ್ಥೆಯೂ

> ಎಚ್.ಡಿ. ಕುಮಾರಸ್ವಾಮಿ ಅವರ ಅವಧಿಯಲ್ಲಿ ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಬಾಣಾವರ, ಅರಸೀಕೆರೆ, ಗಂಡಸಿ, ಹಳೇಬೀಡು ಸೇರಿದಂತೆ ವಿವಿಧ ಭಾಗಗಳಲ್ಲಿ ಸುಮಾರು 250 ಕಾಲೇಜುಗಳನ್ನು ಆರಂಭಿಸಲಾಗಿತ್ತು. -ಶಾಸಕ ಎಚ್.ಡಿ. ರೇವಣ್ಣ

ಇಲ್ಲದೆ ನೆಲದ ಮೇಲೆ ಚಾಪೆ ಹಾಸಿಕೊಂಡು ಮಲಗುವ ಪರಿಸ್ಥಿತಿ ಇದೆ ಎಂದರು.

ನಗರದ ಮಹಿಳಾ ಕಾಲೇಜಿನಲ್ಲಿ ಸುಮಾರು 1,600 ವಿದ್ಯಾರ್ಥಿನಿಯರಿದ್ದಾರೆ. ಆದರೆ ಅಲ್ಲಿ ಅಗತ್ಯ ಸಂಖ್ಯೆಯಲ್ಲಿ ಶಿಕ್ಷಕರಿಲ್ಲ. ಆದರೂ ಕಾಲೇಜಿನ ವಿದ್ಯಾರ್ಥಿನಿಯರು ವಿಜ್ಞಾನ ವಿಭಾಗದಲ್ಲಿ ರಾಜ್ಯಮಟ್ಟದಲ್ಲಿ ಐದನೇ ರ‍್ಯಾಂಕ್ ಸೇರಿದಂತೆ ಉತ್ತಮ ಸಾಧನೆ ಮಾಡಿದ್ದಾರೆ. ಸೂಕ್ತ ಸೌಲಭ್ಯಗಳಿಲ್ಲದಿದ್ದರೂ ಸಾಧನೆ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಗತ್ಯ ಪ್ರೋತ್ಸಾಹ ನೀಡಬೇಕು ಎಂದರು.

ಶಾಂತಿಗ್ರಾಮ, ಸೋಮನಹಳ್ಳಿ ಹಾಗೂ ಹರಿಹರಪುರ ಸೇರಿದಂತೆ ಹಲವು ಕಡೆ ಕೆಪಿಎಸ್ ಶಾಲೆಗಳಿಗೆ ಸ್ವಂತ ಕಟ್ಟಡಗಳಿಲ್ಲ. ಇರುವ ಹಳೆಯ ಶಾಲಾ ಕಟ್ಟಡಗಳಲ್ಲಿಯೇ ತರಗತಿಗಳನ್ನು ಹೊಂದಾಣಿಕೆ ಮಾಡಿಕೊಂಡು ಎರಡು ಪಾಳಿಗಳಲ್ಲಿ ಪಾಠ ನಡೆಸಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳ ಕಲಿಕೆಗೆ ತೊಂದರೆಯಾಗುತ್ತಿದೆ ಎಂದರು. ಒಂದು ವಿಧಾನಸಭಾ ಕ್ಷೇತ್ರಕ್ಕೆ ಶಾಲಾ ಕಟ್ಟಡಗಳ ನಿರ್ಮಾಣಕ್ಕಾಗಿ

> ವಿವಿಧ ಯೋಜನೆಗಳ ಜೊತೆಗೆ 1,200 ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿತ್ತು. ದೇವೇಗೌಡರ ಅವಧಿಯಲ್ಲಿ ಪ್ರತಿ ಮೂರು ಕಿ.ಮೀ.ಗೆ ಒಂದು ಪ್ರೌಢಶಾಲೆ ಆರಂಭಿಸುವ ಮೂಲಕ ಗ್ರಾಮೀಣ ಮಕ್ಕಳಿಗೆ ಶಿಕ್ಷಣದ ಅವಕಾಶ ಕಲ್ಪಿಸಲಾಗಿತ್ತು ಎಂದು ಸ್ಮರಿಸಿದರು.

ಸುಮಾರು 51 ಕೋಟಿ ಅನುದಾನ ನೀಡುವ ವ್ಯವಸ್ಥೆಯಿದೆ. ಆದರೆ ಕೆಪಿಎಸ್ ಶಾಲೆಗಳಿಗೆ ಅಗತ್ಯ ಅನುದಾನ ಮತ್ತು ಕಟ್ಟಡ ಸೌಲಭ್ಯ ದೊರೆಯದಿರುವುದಕ್ಕೆ ಕಾರಣವೇನು ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಡ ಮಕ್ಕಳ ಶಿಕ್ಷಣದ ವಿಚಾರದಲ್ಲಿ ನಿರ್ಲಕ್ಷ್ಯ ತೋರಬಾರದು ಎಂದು ಒತ್ತಾಯಿಸಿದರು.

ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು. ನೇಮಕಾತಿಯನ್ನು ಸಂದರ್ಶನದ ಬದಲಿಗೆ ವರ್ಗವಾರು ಮೆರಿಟ್ ಆಧಾರದಲ್ಲಿ ನಡೆಸಬೇಕು.

ನನ್ನ ಅವಧಿಯಲ್ಲಿ ಕೃಷಿ ಸಹಾಯಕ ನಿರ್ದೇಶಕರ ಹುದ್ದೆಗಳಿಗೆ ಸುಮಾರು 500 ಮಂದಿಯನ್ನು ಹಾಗೂ ತೋಟಗಾರಿಕೆ ಇಲಾಖೆಯಲ್ಲಿ ಸುಮಾರು 1ಸಾವಿರ ಮಂದಿಯನ್ನು ಮೆರಿಟ್ ಆಧಾರದಲ್ಲಿ ನೇಮಕ ಮಾಡಲಾಗಿತ್ತು. ಅದೇ ಮಾದರಿಯಲ್ಲಿ ಶಿಕ್ಷಕರ ನೇಮಕಾತಿಯನ್ನೂ ಪಾರದರ್ಶಕವಾಗಿ ನಡೆಸಲು ಸರ್ಕಾರ ಮುಂದಾಗಬೇಕು ಎಂದು ರೇವಣ್ಣ ಹೇಳಿದರು.